ಪ್ರಕಟನೆಯ ೨೬ನೆಯ ವರ್ಷ : ೧೯೯೧

ಸಂಕ್ರಮಣ

೨೨೯

ಶಿವರಾಮು ಕಾಡನಕುಪ್ಪೆ

ವಿನಾಯಕರ ಕಾವ್ಯ: ರೂಪ ಮತ್ತು ಅಭಿವ್ಯಕ್ತಿ

ಮಹಾಬಲೇಶ್ವರರಾವ್

ಬೋಳುವಾರರ 'ತಟ್ಟು ಚಪ್ಪಾಳೆ ಪುಟ್ಟ ಮಗು'

ಸಾರಾ ಅಬೂಬಕ್ಕರ

ಮುಸ್ಲಿಂ ಸಂವೇದನೆ ಮತ್ತು ನಾನು

ಸರಜೂ ಕಾಟಕರ, ಬಸು ಪಾಟೀಲ, ಅರವಿಂದ ನಾಡಕರ್ಣಿ, ಶಂಕರ ಕಟಗಿ, ಚಂದ್ರಶೇಖರ ತಾಳ್ಯ, ನಂದೀಶ್ವರ, ರಂಜಾನ್ ದರ್ಗಾ, ಈ. ಚಂದ್ರ ಶಾಲೀಕಟ್ಟೆ, ಆರ್. ಸುವರ್ಣ ಕಾಡನಕುಪ್ಪೆ

ಚಂಪಾ ಕಾಲಂ

ವಿನಾಯಕ: ಸಮುದ್ರದ ಸ್ವಾತಂತ್ರ್ಯದ ಕವಿ

ಸಂಪುಟ ೨೬: ಸಂಚಿಕೆ ೯ ಸಪ್ಟೆಂಬರ ೧೯೯೧

ಸಂಕ್ರಮಣ

ಸಂಪಾದಕಿ
ನೀಲಾ ಪಾಟೀಲ
ಸಲಹೆ
ಚಂದ್ರಶೇಖರ ಪಾಟೀಲ

ಸಪ್ಟೆಂಬರ ೧೯೯೧
ಸಂಪುಟ: ೨೬ ಸಂಚಿಕೆ: ೯

ವಿನಾಯಕ : ಸಮುದ್ರದ ಸ್ವಾತಂತ್ರ್ಯದ ಕವಿ — ಚಂದ್ರಶೇಖರ ಪಾಟೀಲ — ೧
ಎರಡು ಕವನಗಳು — ಸರಜೂ ಕಾಟಕರ — ೬
ಎರಡು ಹನಿಗವನಗಳು — 'ಬಸು' ಪಾಟೀಲ — ೮
ಪ್ರಯಾಗ ಪ್ರಯಾಣ (ಕವನ) — ಅರವಿಂದ ನಾಡಕರ್ಣಿ — ೯
ಎರಡು ಕವನಗಳು — ಶಂಕರ ಕಟಗಿ — ೧೩
ನದಿ ಇಲ್ಲಾ ಕೆರೆ ಇಲ್ಲಾ (ಕ — ಚಂದ್ರಶೇಖರ ತಾಳ್ಯ — ೧೫
ವಿನಾಯಕರ ಕಾವ್ಯ : ರೂಪ ಮತ್ತು ಅಭಿವ್ಯಕ್ತಿ — ಶಿವರಾಮು ಕಾಡನಕುಪ್ಪೆ — ೧೭
ಆಲಾಪ (ಕವನ) — ನಂದೀಶ್ವರ — ೨೨
ನನ್ನ ಕಮ್ಯೂನಿಜಂ (ಕವನ) — ರಂಜಾನ್ ದರ್ಗಾ — ೨೩
ಸೂರ್ಯ : ಆರು ಕವಿತೆಗಳು — ಈ. ಚಂದ್ರು ತಾಳೀಕಟ್ಟೆ — ೨೫
ಬೋಳುವಾರರ 'ತಟ್ಟು ಚಪ್ಪಾಳೆ ಪುಟ್ಟ ಮಗು' — ಮಹಾಬಲೇಶ್ವರ ರಾವ್ — ೨೭
ಮೂರು ಕವನಗಳು — ಆರ್. ಸುವರ್ಣ ಕಾಡನಕುಪ್ಪೆ — ೩೪
ಮುಸ್ಲಿಂ ಸಂವೇದನೆ ಮತ್ತು ನಾನು — ಸಾರಾ ಅಬೂಬಕ್ಕರ — ೩೭
ಪುಸ್ತಕ ವಿಮರ್ಶೆ — ಸತೀಶ ಕುಲಕರ್ಣಿ/ಭೂಮಿಗೌಡ/ಪ್ರಭಾಕರ ಜೋಶಿ/ರೋಹಿಣಿ ಶರ್ಮಾ/ಶ್ರೀಧರ ಶರ್ಮಾ — ೪೪
ಸಂಕ್ರಮಣ ೨೫ : ಕಾರ್ಯಕ್ರಮಗಳು — ವರದಿಗಳು — [illegible]

SANKRAMANA 229

A Monthly in Kannada
September 1991 Vol. XXVI No. 9
Sankramana Prakashana Dharwad-580 008 Phone : 40509
Printed at Chandana Mudrana, Dharwad-8
Annual Subscription : Rs. 50/-

ವಿನಾಯಕ : ಸಮುದ್ರದ ಸ್ವಾತಂತ್ರ್ಯದ ಕವಿ

ಚಂದ್ರಶೇಖರ ಪಾಟೀಲ

"ಸಾಹಿತ್ಯವನ್ನು ಒಂದು ಕಾಯಕದಂತೆ ಅವಿರತವಾಗಿ ನಡೆಯಿಸಿಕೊಂಡು ಬಂದಿರುವ ಗೋಕಾಕರ ಸಾಹಿತ್ಯ ನಿರ್ಮಿತಿಯ ಹರಹು ತುಂಬ ದೊಡ್ಡದು. ಅದರ ಆಳ ಅಗಲಗಳನ್ನೂ ಇತಿಮಿತಿಗಳನ್ನೂ ಅರಿತುಕೊಳ್ಳುವ ಅಧ್ಯಯನ, ಯಾಕೋ ಏನೋ ಇನ್ನೂ ಸಮರ್ಪಕವಾಗಿ ನಡೆದಿಲ್ಲವೆಂದೇ ಹೇಳಬೇಕು.

ಕವಿ ವಿನಾಯಕರಿಗೆ ಜ್ಞಾನಪೀಠ ಪ್ರಶಸ್ತಿ ತಂದ ಸಂದರ್ಭದಲ್ಲಿ ಡಾ. ಜಿ. ಎಸ್. ಶಿವರುದ್ರಪ್ಪನವರು "ಕನ್ನಡದ ಪ್ರಯೋಗಶೀಲ ಪ್ರತಿಭೆ–ಗೋಕಾಕ" ಎಂಬ ಲೇಖನದಲ್ಲಿ (ಪ್ರಜಾವಾಣಿ ಸಾಪ್ತಾಹಿಕ ಪುರವಣಿ, ೨೫ ಆಗಸ್ಟ ೧೯೯೧) ಬರೆದ ಮಾತುಗಳಿವು. ಜಿ ಎಸ್ ಎಸ್ ಅವರ "ಯಾಕೋ ಏನೋ"ಗಳ ಹಿಂದೆ ಸಮಕಾಲೀನ ಕನ್ನಡ ವಿಮರ್ಶಾ ಲೋಕದ (ಮುಖ್ಯವಾಗಿ, 'ನವ್ಯ' ಎಂದು ಕರೆಯಲಾಗುವ ಘಟ್ಟದ) ಅನೇಕ ನಿಗೂಢಗಳೇ ಅಡಗಿವೆ. ಈ ಘಟ್ಟದ ದಾರಿಗಳು ಅಂಕು ಡೊಂಕು. ದಾರಿಗುಂಟ ಬರುವಾಗ ಅಜೂಬಾಜೂ ಸರಸರ ಹರಿದು ಹೋಗುವ ಗಿಡಗಳ ಬೊಡ್ಡೆಗಳನ್ನು ನೋಡುವ ಸಂಭ್ರಮದಲ್ಲಿ ಆ ಗಿಡಗಳ ಬೇರುಗಳ ಕಡೆಗಾಗಲಿ, ಟೊಂಗೆಗಳು ಆಕಾಶವನ್ನು ಕೈದಿಯಾಗಿ ಮಾಡಿದ್ದರ ಕಡೆಗಾಗಲಿ ಲಕ್ಷ್ಯ ಹೋಗುವುದು ಸಾಧ್ಯವಿಲ್ಲ. ಘಟ್ಟ ಮುಗಿದು ಸಮತಟ್ಟಾದ ನೆಲಕ್ಕೆ ಬಂದು ಹತ್ತಿದ ಮೇಲೆ ಸ್ವಲ್ಪ ಕಣ್ಣು ಹೊರಳಿಸಿ ನೋಡಿದಾಗ ವಿಶಾಲವಾದ ಆಕಾಶದ ಹಿನ್ನೆಲೆಯಲ್ಲಿ ಆ ಘಟ್ಟದ ಇತಿಮಿತಿಗಳು ಗೋಚರಿಸತೊಡಗುತ್ತವೆ.

೧೯೫೦ ರಷ್ಟು ಹಿಂದೆಯೇ ಮುಂಬೈ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷಸ್ಥಾನದಿಂದ ಕವಿ ವಿನಾಯಕರು 'ನವ್ಯ' ಕಾವ್ಯದ ಪ್ರಸ್ತಾರ ಹಾಕಿದರು. ತಮ್ಮ

ಕಲ್ಪನೆಯು ನವ್ಯ ಕಾವ್ಯವನ್ನು ಸ್ಪಷ್ಟವಾಗಿ ಚಿತ್ರಿಸಿ, ಅದಕ್ಕೆ ಮಾದರಿಯಾಗುವಂತೆ 'ನವ್ಯ ಕವನಗಳು' ಎಂಬ ಸಂಗ್ರಹವನ್ನು ಹೊರತಂದರು. ಆದರೆ ಕನ್ನಡ ನವ್ಯ ಕಾವ್ಯ ಅನಂತರ ಹಿಡಿದ ಜಾಡೇ ಬೇರೆಯಾಯಿತು—ಎರಡು ದಶಕಗಳ ಕಾಲ. ಇದಕ್ಕೆ ಕಾರಣಗಳೇನು—ಎಂಬುದನ್ನು ಹುಡುಕುವ ಕಾಲ ಈಗ ಬಂದಿದೆ. ಈಗಾಗಲೇ ಓದುಗರ ಮತ್ತು ವಿಮರ್ಶಕರ ಕೊಂಕು ಹುಬ್ಬುಗಳಿಗೆ, ಸೊಟ್ಟ ತುಟಿಗಳಿಗೆ ಗ್ರಾಸ ವಾಗ ತೊಡಗಿದ್ದ "ಆಧ್ಯಾತ್ಮವಾದೀ" ಎಳೆ ಒಳಗೊಂಡ ಗೋಕಾಕರ ಕಾವ್ಯ ನವೋದಯ ಕಾವ್ಯದ ಕೇವಲ ಮುಂದುವರಿಕೆಯಾಗಿತ್ತೇ ? ಹೊಸ ಕಾವ್ಯದ ಅವರ ಗ್ರಹಿಕೆಯೇ ಅಸಮಗ್ರವಾಗಿತ್ತೇ ? ಈ ಕಾವ್ಯಕ್ಕಾಗಿ ಅವರು ಕೊಟ್ಟ ಮಾದರಿಗಳು ಹೊರಳುದಾರಿಯಲ್ಲಿದ್ದ ಇಂಡಿಯಾದ ಸಾಮಾಜಿಕ ಮನೋಧರ್ಮಕ್ಕೆ ಹೊಂದಿಕೊಳ್ಳ ಲಿಲ್ಲವೆ ?.. ಇತ್ಯಾದಿ ಪ್ರಶ್ನೆಗಳನ್ನು ಕೇಳಿಕೊಳ್ಳಬಹುದು.

ಈ ಪ್ರಶ್ನೆಗಳ ತೆಕ್ಕೆ ಮೀರಿದ ಇನ್ನೊಂದು ಕಾರಣವೂ ಈಗೀಗ ಸ್ಪಷ್ಟವಾಗತೊಡಗಿದೆ. ಪ್ರಗತಿಶೀಲ ಚಳುವಳಿಯಲ್ಲಿ ಪಾಲುಗೊಂಡ ಗೋಪಾಲ ಕೃಷ್ಣ ಅಡಿಗರು ೧೯೫೦ ರ ಹೊತ್ತಿಗೆ 'ಇಂಗ್ಲಿಷ್' ನವ್ಯ ಕಾವ್ಯದ ಪ್ರಭಾವಕ್ಕೊಳಗಾಗಿ ತಮ್ಮ ಕೃತಿಗಳನ್ನು ರಚಿಸ ತೊಡಗಿದ್ದರು. ಮೈಸೂರು ಕರ್ನಾಟಕದ ಭಾಗದಲ್ಲಿ ಆ ಹಂತದಲ್ಲಿ ಅಡಿಗರಿಗೆ ವಿಶೇಷವಾದ ಪ್ರಚಾರ ದೊರಕಿತು. 'ಪ್ರಜಾವಾಣಿ' ಪತ್ರಿಕೆಯ ಸಾಪ್ತಾಹಿಕ ಪುರವಣಿ, ಮುಖ್ಯವಾಗಿ ವೈಯನ್ಕೆ ಅವರ ಮಾರ್ಗದರ್ಶನದಲ್ಲಿ, ಅಡಿಗ ಹಾಗೂ ರಾಮಚಂದ್ರ ಶರ್ಮ ಅವರ ವಿಚಾರಗಳಿಗೆ ಶಂಖವಾಯಿತು. ಇವರ ನಂತರದ ಪೀಳಿಗೆಯ ಅನೇಕ ಪ್ರತಿಭಾವಂತರು ಒಂದು ಬಗೆಯ ಪ್ರಭಾವಳಿಗೆ ಸಿಕ್ಕವರಂತೆ ಬರೆದರು, ಮುಂದೆ ಅಡಿಗರ ಸಂಪಾದಕತ್ವದ 'ಸಾಕ್ಷಿ' ನಿಯತಕಾಲಿಕೆ ಪ್ರಾರಂಭವಾಗಿ ಅಡಿಗ–ಮಾದರಿಯ ಕಾವ್ಯಕ್ಕೆ ವಿಶೇಷವಾದ ಒತ್ತು ಕೊಟ್ಟಿತು.

ಒಂದು ಪತ್ರಿಕೆ ಒಂದು ಕಾವ್ಯ ಮಾರ್ಗವನ್ನು ಗಟ್ಟಿಗೊಳಿಸುವುದರಲ್ಲಿ ಆಡುವ ಪಾತ್ರ ಸಹಜವಾದುದು. ಆದರಲ್ಲೂ ಧ್ಯೇಯ–ಧೋರಣೆಗಳ ಬಗ್ಗೆ ಸ್ಪಷ್ಟ ಕಲ್ಪನೆ ಹೊಂದಿರುವ ಪತ್ರಿಕೆ ಈ ಕೆಲಸ ಮಾಡುವುದು ಅದರ ಕರ್ತವ್ಯ ಕೂಡ. ಆದರೆ ಒಂದು ರಾಜಮಾರ್ಗವನ್ನು ಒಬ್ಬ ಕವಿಯ ಕಾಲು ಹಾದಿಯೆಂಬಂತೆ ಚಿತ್ರಿಸುವ ಪ್ರಯತ್ನ ನಡೆದಾಗ ಮಾತ್ರ "ಯಾಕೋ ಏನೋ"ಗಳಿಗೆ ಅವಕಾಶವಾಗುತ್ತದೆ.

ಇತ್ತೀಚೆಗೆ (ಸಪ್ಟಂ. ೧೪-೧೫, ೧೯೯೧) ದಾವಣಗೆರೆಯಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಹಮ್ಮಿಕೊಂಡ ವಿಮರ್ಶಾ ಶಿಬಿರವನ್ನು ಉದ್ಘಾಟಿಸಿದ ವಿಮರ್ಶಕ ಕೆ. ವಿ. ನಾರಾಯಣ ಅವರು ಒಂದು ಮಾತು ಹೇಳಿದರಂತೆ. (ಗೆಳೆಯರ ಮೂಲಕ ನನಗೆ ಗೊತ್ತಾದದ್ದು). 'ಸಾಕ್ಷಿ' ಪತ್ರಿಕೆಯ ಹಿಂದಿನ ಸಂಚಿಕೆಗಳನ್ನು ತಿರುವಿ ಹಾಕಿದಾಗ

ಅವರಲ್ಲಿ ನೂರಕ್ಕೆ ತೊಂಬತ್ತರಷ್ಟು ಲೇಖನಗಳು ಅಡಿಗರ ಕಾವ್ಯದ ಬಗ್ಗೆಯೇ ಇರು ವುದನ್ನು ನಾರಾಯಣ ಗಮನಿಸಿದರಂತೆ. ರಾಮಾನುಜನ್, ರಾಮಚಂದ್ರಶರ್ಮ ಮುಂತಾದವರ ಬಗ್ಗೆ ಒಂದೆರಡು ಲೇಖನ ಬಿಟ್ಟರೆ, ಉಳಿದುದೆಲ್ಲ ಅಡಿಗಮಯ !

'ಅಡಿಗಮಯ' ಅಂದರೆ ಅಡಿಗರ ಕಾವ್ಯದ ಎಲ್ಲ ಮಗ್ಗುಲುಗಳ ಸರಿಯಾದ ಮೌಲ್ಯ ಮಾಪನ ಎಂದೇನೂ ಅರ್ಥವಲ್ಲ. 'ಅಡಿಗಮಯ' ಅಂದರೆ ಅಡಿಗ ಕಾವ್ಯಕ್ಕೆ ವ್ಯಾಖ್ಯೆ, ಟೀಕೆ ಇಲ್ಲದ ಟಿಪ್ಪಣಿ, ವಿಶದೀಕರಣ, ಸರಳೀಕರಣ, ವೈಭವೀಕರಣ ಇತ್ಯಾದಿ ಈ ವಿಮರ್ಶೆ–ಆರಾಧನೆ ಎಷ್ಟು ಮಿತಿ ಮೀರಿತ್ತೆಂದರೆ 'ಸಾಕ್ಷಿ'ಯ ಸಂಚಿಕೆಯೊಂದರಲ್ಲಿ ಅಡಿಗರ ಹೊಸ ಪದ್ಯವೊಂದು ಪ್ರಿಂಟಾದರೆ, ಅದೇ ಸಂಚಿಕೆಯಲ್ಲಿ ಆ ಕವನದ ವಿಮರ್ಶೆ-ವ್ಯಾಖ್ಯೆಗಳೂ ಪ್ರಿಂಟಾಗುತ್ತಿದ್ದವು–ಬಜಾರಿನಲ್ಲಿ ಪಠ್ಯದೊಂದಿಗೆ ನೋಟ್ಸು ಗಳನ್ನು ಪ್ರಿಂಟಿಸುವ ಗೈಡುಗಳ ಹಾಗೆ. ಇದೆಲ್ಲದರ ಪರಿಣಾಮವೆಂದರೆ ಕನ್ನಡ 'ನವ್ಯ ಕಾವ್ಯ' ಎಂದರೆ 'ಅಡಿಗ–ಕಾವ್ಯ' ಎಂಬ ಸಮೀಕರಣ! ನಮ್ಮ ಕ್ಯಾಶೆಟ್ ಕವಿ ಲಕ್ಷ್ಮೀನಾರಾಯಣ ಭಟ್ಟರಂತೂ ಅಡಿಗರು ಇಪ್ಪತ್ತನೇ ಶತಮಾನದ ಶ್ರೇಷ್ಠ ಕವಿ ಎಂದು ಕ್ಯಾಶೆಟ್ ವಿಮರ್ಶೆ ಬರೆದರು—ಶತಮಾನ ಮುಗಿಯಲು ಇನ್ನೂ ಎರಡು ದಶಕಗಳಿದ್ದಾಗ!

ಇಂಥ ಒಂದು ಅಸಹ್ಯ ವಾತಾವರಣವನ್ನು ನಿರ್ಮಿಸಿದ ಪರಾಕ ಪಂಥು ಭಟ್ಟರ ಆರಾಧ್ಯ ದೇವತೆಯಾದ ಅಡಿಗರೂ ಕೂಡ ಎಂಥಾ ಅಸಹ್ಯ ನೆಲೆ ತಲುಪಿದ್ದರೆಂದರೆ ಅವರು ಗೋಕಾಕರ ಬಗ್ಗೆ "ಗೋಕಾಕ್ ಕವಿಯಾದರೆ ನಾನು ಕವಿಯೇ ಅಲ್ಲ!" ಎಂಬ ಅ-ವಿಮರ್ಶಾತ್ಮಕ, ಅ-ವೈಚಾರಿಕ, ಅ-ಮಾನವೀಯ ಮಾತುಗಳನ್ನು ಆಡಿದ್ದರೆಂದು ಆ ಕಾಲದಲ್ಲಿ ಪ್ರಚಲಿತವಿದ್ದ ಒಂದು ಮಾತಾಗಿತ್ತು.

ಇಂಥ ಅಡಿಗ–ಕೇಂದ್ರಿತ ವಿಮರ್ಶೆಯ ವ್ಯವಹಾರಗಳಿಂದಾಗಿ ನವ್ಯಕಾವ್ಯದ 'ಆದ್ಯ' ರಾದ (ಇದು ಜಿ ಎಸ್ ಎಸ್ ಪ್ರಯೋಗ) ಗೋಕಾಕರಿಗಷ್ಟೇ ಅನ್ಯಾಯವಾಗಿಲ್ಲ; ನವೋದಯ-ನವ್ಯದ ನಡುವಿನ ಸಂಕ್ರಮಣ ಕಾಲದ ಕವಿಗಳಾದ ಕೆ. ಎಸ್. ನರಸಿಂಹ ಸ್ವಾಮಿ, ಜಿ. ಎಸ್, ಶಿವರುದ್ರಪ್ಪ, ಚೆನ್ನವೀರ ಕಣವಿಯವರಂಥವರ ಕಾವ್ಯದ ಬಗ್ಗೆಯೂ ವಿಸ್ತೃತವಾದ ಚರ್ಚೆಯಾಗಲಿಲ್ಲ. ಅದೂ ಹೋಗಲಿ, ಅಡಿಗರ ಬಲಗೈ ಯದೋ ಎಡಗೈಯದೋ ಬಂಟರಾಗಿದ್ದ ರಾಮಚಂದ್ರ ಶರ್ಮರ ವಿಶಿಷ್ಟ ಕಾವ್ಯದ ಬಗ್ಗೆ ಕೂಡ ಇಂದಿಗೂ ಸಮರ್ಪಕವಾದ ವಿಮರ್ಶೆ ಬಂದಿಲ್ಲ. (ಕೀರ್ತಿನಾಥ ಕುರ್ತ ಕೋಟಿಯವರು ಶರ್ಮರ ಕಾವ್ಯಕ್ಕೆ ಲಿಬಿಡೋ ಕಾವ್ಯವೆಂಬ ಸಿಕ್ಕಾ ಒತ್ತಿದ್ದು; ಆ ಲಿಬಿಡೋ ಭಾರದಲ್ಲಿ ಶರ್ಮರು ಇನ್ನೂ ಬಳಲುತ್ತಿರುವುದು—ಈ ದುರಂತದ ಇನ್ನೊಂದು ಮಗ್ಗಲು.)

ಆದರೆ 'ನವ್ಯ ಕಾವ್ಯ' ಅಂದರೆ 'ಅಡಿಗ ಕಾವ್ಯ' ಎಂಬ ಸಮೀಕರಣವನ್ನು ಕೆಲವು ವಿಮರ್ಶಕರು ಚಲಾವಣೆಗೆ ತರಲು ಪ್ರಯತ್ನಿಸಿದರೂ ಕನ್ನಡ ನವ್ಯಕಾವ್ಯದ ದಿಕ್ಕು ದೆಸೆಗಳು ಬೇರೆಯೇ ಆದದ್ದು ನಮ್ಮೆದುರಿಗಿನ ವಾಸ್ತವವಾಗಿದೆ. ಅಡಿಗರ ನಂತರದ ಎರಡನೆಯ ಪೀಳಿಗೆಯ ನವ್ಯ ಕವಿಗಳು ಅಡಿಗರಿಂದ ವಿಭಿನ್ನವಾಗಿ ವಸ್ತು, ಭಾಷೆ, ವಿನ್ಯಾಸ, ಕಾಳಜಿಗಳ ನೆಲೆಯಲ್ಲಿ ಬೆಳೆದರು. ಅಡಿಗರನ್ನು ಯಥಾವತ್ತಾಗಿ ಅನುಕರಿಸಲು ಬಯಸಿದ ಹಲವು ದ್ವಿತೀಯ ದರ್ಜೆಯ ಕವಿಗಳು ನವ್ಯ ಕಾಲ ಅವಸಾನವಾಗುವ ಮುನ್ನವೇ ಅವಸಾನ ಹೊಂದಿದರು. ಪ್ರಜಾವಾಣಿಯಲ್ಲಿ ರಾಮಚಂದ್ರ ಶರ್ಮರ 'ಸಮಗ್ರ ಕಾವ್ಯ'ವನ್ನು ವಿಮರ್ಶೆ ಮಾಡಿದ ಕವಿ ಕೆ. ವಿ. ತಿರುಮಲೇಶ್ (ಇವರು ನವ್ಯದ ಮೂರನೆಯ ಪೀಳಿಗೆಯವರು) ಬರೆದ ಒಂದು ಮಾತು—"ಕನ್ನಡ ಕಾವ್ಯ ಅವರು (ಶರ್ಮ) ಹಾಕಿಕೊಟ್ಟ ದಾರಿಯಲ್ಲಿ ಮುಂದುವರಿಯಲಿಲ್ಲ ಎನ್ನುವುದು ಬೇರೆ ಮಾತು. ಅದು ಅಡಿಗರು ಹಾಕಿಕೊಟ್ಟ ದಾರಿಯಲ್ಲೂ ಮುಂದುವರಿಯಲಿಲ್ಲವಲ್ಲ!"—ಈ ನಿಟ್ಟಿನಲ್ಲಿ ವಿಚಾರ ಮಾಡುವವರಿಗೆ ಸಾಕಷ್ಟು ಬೆಳಕು ನೀಡುವಂತಿದೆ.

ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ಒಬ್ಬ ಕವಿಯ ಮಹತ್ವ ಇರುವುದು ಯಾವುದರಲ್ಲಿ ? ಕವಿ ಬರೆದ ಕೃತಿಗಳಲ್ಲೋ ? ಅಥವಾ ಕವಿ ಹಾಕಿಕೊಟ್ಟದ್ದು ಎಂದು ಹೇಳಲಾಗುವ ಮಾರ್ಗ ಅಥವಾ ಪರಂಪರೆಯಲ್ಲಿ ಬರೆಯುವ ಇತರ ಕವಿಗಳ ಜನಸಂಖ್ಯೆಯಲ್ಲೋ ? ಈ ಎರಡನೆಯ ಮಾನ ದಂಡವನ್ನು ಸ್ವಲ್ಪ ಸಂಶಯದಿಂದಲೇ ನೋಡಬೇಕಾಗಿದೆ. ಏಕೆಂದರೆ ಕೆಲವು, 'ಪ್ರತಿಭಾವಂತ' ಎನ್ನುವುದಕ್ಕಿಂತ 'ಬುದ್ಧಿವಂತ' ಎನ್ನಬಹುದಾದ 'ವಿಮರ್ಶಕ'ರ ಟೋಳಿ ಕಟ್ಟಿಕೊಂಡು ಪ್ರಭಾವಶಾಲಿಯಾದ ಒಬ್ಬ ಕವಿ ತಾನಾಗಿಯೇ ಒಂದು ಮಠ ಕಟ್ಟಿಕೊಂಡು ಅದರ ಜಗದ್ಗುರುವಾಗಿ ಮೆರೆಯಬಹುದಾಗಿದೆ. ಅಂಥ ಉದಾಹರಣೆಗಳು ನಮ್ಮೆದುರಿಗೆ ಸಾಕಷ್ಟಿವೆ.

ಹಾಗಾದರೆ ಕವಿ ಬರೆದ ಕೃತಿಗಳನ್ನು ಆಯಾಯಾ ಸಮಕಾಲೀನ ಸಂದರ್ಭಗಳಲ್ಲಿಟ್ಟು ವಿಮರ್ಶೆ ಮಾಡುವುದು ಹೆಚ್ಚು ಉಚಿತವೇನೋ. ಈ ದೃಷ್ಟಿಯಿಂದ ಗೋಕಾಕರೇ ಆದಿಯಾಗಿ ಅನೇಕ ಕವಿಗಳ ಮೌಲ್ಯಮಾಪನ ಸಮಗ್ರವಾಗಿ ಆಗುವುದು ಅವಶ್ಯ. ಜಿ. ಎಸ್. ಎಸ್. ಅವರ ಪ್ರಜಾವಾಣಿ ಲೇಖನ ಗೋಕಾಕರ ಪ್ರಯೋಗ ಪ್ರಿಯತೆಯನ್ನೂ, ಪ್ರವಾಸಿ ಮನೋಧರ್ಮವನ್ನೂ, ಪುರಾಣ ಇತಿಹಾಸಗಳ ಬಳಕೆಯ ಮೂಲಕ ಭಾರತೀಯ ಸಂಸ್ಕೃತಿಗೆ ಪುನರ್ವ್ಯಾಖ್ಯಾನ ನೀಡುವ ಪ್ರಯತ್ನವನ್ನೂ, 'ಗೆಳೆಯರ ಗುಂಪಿ'ನ ಸದಸ್ಯರಾಗಿದ್ದರೂ ಬೇಂದ್ರೆ ಪ್ರಭಾವವನ್ನು ಮೀರಿ ಗೋಕಾಕರು ಕನ್ನಡದ ಈಡಿಯಮ್ಮಿಗೆ ೧೨ ನೇ ಶತಮಾನದ ಶರಣರ ವಚನದ ದೀಕ್ಷೆ ಕೊಟ್ಟಿದ್ದನ್ನೂ ಸರಿಯಾಗಿಯೇ ಗುರುತಿಸಿ ವಿನಾಯಕ ಕಾವ್ಯದ ಮೌಲ್ಯ ಮಾಪನಕ್ಕೆ ಸರಿ

ಯಾದ ಬುನಾದಿ ಹಾಕಿದ್ದಾರೆ (ಈ ವರೆಗೆ ವಿನಾಯಕರ ಕಾವ್ಯದ ಬಗ್ಗೆ ಎನ್. ಕೆ. ಕುಲಕರ್ಣಿ ಅವರಂಥವರು 'ರಸ ವಿಮರ್ಶೆ'ಯ ಹೆಸರಿನಲ್ಲಿ ಪ್ರಶಂಸಾರಸವನ್ನೇ ಕಾರಂಜಿಯಂತೆ ಸಿಡಿಸಿ ಸುತ್ತಲೂ ರಾಡಿ ನಿರ್ಮಾಣ ಮಾಡಿದ್ದನ್ನು ಗಮನಿಸಬೇಕು.) ಸಮ್ಯಕಾವ್ಯದ ಹರಿಕಾರರೆಂದು ಗೋಕಾಕ ಹಾಗೂ ಅಡಿಗರನ್ನು ಗುರುತಿಸುವಾಗ ಅವರಿಬ್ಬರ ನಡುವೆ ತುಲನೆ ಅನಿವಾರ್ಯವಾಗುತ್ತದೆ. ಇಬ್ಬರೂ ಪ್ರಗತಿಶೀಲ ಚಳುವಳಿಯ ಸಂದರ್ಭದಲ್ಲಿ ಕ್ರಿಯಾಶೀಲರಾಗಿದ್ದುದು ನಮಗೆ ಗೊತ್ತು. ಆದರೆ ಈ ನೆಲೆಯಿಂದ ಹೊರಟ ಅಡಿಗರು ಬರ ಬರುತ್ತ ವ್ಯಕ್ತಿವಾದಿಯಾಗಿ ಕೊನೆಗೆ ಆರ್ ಎಸ್ ಎಸ್ ನಂಥ ಕೋಮುವಾದಿ, ಜನವಿರೋಧಿ ಸಂಘಟನೆಯ ಸಿದ್ಧಾಂತದ ಕಡೆಗೆ ವಾಲಿದರೆ, ಅದೇ ನೆಲೆಯಿಂದ ಹೊರಟ ಗೋಕಾಕರು ಅರವಿಂದ ಪ್ರಣೀತ-ಭಾರತೀಯ ಸಂಸ್ಕೃತಿಯ ಪುನರುತ್ಥಾನದ ಜಾಡು ಹಿಡಿದು, ವಿಶ್ವಮಾನವನ ಆದರ್ಶವನ್ನು ಅನುಸರಿಸಿ, ಸಾಯಿಬಾಬಾನಿಗೆ ಶರಣಾಗಿ, ಮತ್ತೆ (ಕೆಲವರು ಹೇಳುವಂತೆ) ಅವರಿಂದಲೂ ವಿಮೋಚನೆ ಪಡೆಯುವ ಹಂತದಲ್ಲಿದ್ದಾರೆ. ವಸಾಹತುವಾದಿ ಸಂಸ್ಕೃತಿಯಿಂದ ವಿಮೋಚನೆಗೊಳ್ಳಬೇಕೆಂಬ ಪ್ರಯತ್ನದ ಹಂತದಲ್ಲಿ ಈ ಇಬ್ಬರು ಹಿರಿಯರ ವಿಮೋಚನೆಯ ದಾರಿಗಳನ್ನು ವಿಮರ್ಶಾತ್ಮಕವಾಗಿ ತೂಗುವುದು ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆಗಳ ಅಭ್ಯಾಸಿಗಳಿಗೆ ಅನುಕೂಲವಾಗಬಹುದು.

ಜ್ಞಾನಪೀಠ ಪ್ರಶಸ್ತಿ ಎಂಬುದು ಈಗ ರಾಷ್ಟ್ರಾದ್ಯಂತ ಮನ್ನಣೆ ತರಬಲ್ಲ ಪ್ರಶಸ್ತಿ. ಕನ್ನಡಕ್ಕೆ ಈ ಹಿಂದೆ ನಾಲ್ಕು ಬಾಲ್ಕು ಬಾರಿ ಪ್ರಶಸ್ತಿ ಬಂದಿದೆ. ಅವರವರ 'ಅತ್ಯುತ್ತಮ' ಕೃತಿಗಳಿಗೇ ಪ್ರಶಸ್ತಿ ಬಂದಿದೆ ಎಂಬುದು ವಿವಾದಾಸ್ಪದ. ಆದರೆ ಕವಿ ವಿನಾಯಕರ ಕಾವ್ಯ ಕಾಯಕದ ಕಳಸವೆಂಬಂತಿರುವ 'ಭಾರತ ಸಿಂಧು ರಶ್ಮಿ'ಗೆ ಐದನೆಯ ಪ್ರಶಸ್ತಿ ಬಂದಿದೆ. ಇದು ಔಚಿತ್ಯ ಪೂರ್ಣ. ಈ ನೆವದಿಂದಾದರೂ ಈ ಪ್ರತಿಭಾವಂತ ಹಿರಿಯರ ಕೃತಿಗಳ ಬಗ್ಗೆ ಸಮಗ್ರವಾದ ವಿಮರ್ಶೆಯ ಪ್ರಯತ್ನಕ್ಕೆ ನಾಂದಿಯಾಗಬೇಕು.

ಉಕ್ಕಲಿ-ಚಿಮ್ಮಲಿ ಸಮುದ್ರದ ಸ್ವಾತಂತ್ರ್ಯ!
ಮಿಕ್ಕಲಿ-ಮೀರಲಿ ಮುನ್ನೀರ ನಿರ್ಣಯಲು!
ಜರ್ಜರವಾದುದೆಲ್ಲ ಮುಳುಗಿ ಹೋಗಲಿ—
ಜಲಸಮಾಧಿಯಲ್ಲಿ
ಹೊಸದೆಲ್ಲ ಹುಟ್ಟಿ ಬರಲಿ-ಹೃದಯದಾಳದಲ್ಲಿ!

ಇಂಥ ಮುನ್ನೋಟದ ಆಶಯಗಳನ್ನು, ಹೊಸ ಹುಟ್ಟಿನ ಕನಸುಗಳನ್ನು ಗರ್ಭದಲ್ಲಿ ಇರಿಸಿಕೊಂಡ ವಿನಾಯಕರ ಕಾವ್ಯ ಸಮುದ್ರದ ಆಳದ ಸತ್ಯಗಳು ಸದಾ ಚಲನಶೀಲವಾಗಿಯೇ ಉಳಿದಿರುವ ಕನ್ನಡ ಕಾವ್ಯ ಲೋಕಕ್ಕೆ ಹೊಸ ಹಾದಿ ತೋರಬಲ್ಲ ಸಾಧ್ಯತೆ ಹೊಂದಿವೆ. ●

ಸರಜೂ ಕಾಟ್ಕರ

ಎರಡು ಕವನಗಳು

೧ ದೇವದಾಸಿ

ಬಂಗಾರದ ನಾನಾ
ಆಭರಣಗಳಲ್ಲಿ ಅವಳನ್ನು
ಸಿಂಗರಿಸುತ್ತಿರುವಾಗ ಅವರೆಲ್ಲ ಹೇಳಿದರು:
ಹೇ ಸ್ತ್ರೀ
ನೀನು ದೇವಿ ನೀನೇ ಮಹಾದೇವಿ
ಚತುರ್ಭುಜೆ ಶಂಖಚಕ್ರ ಗದಾಧಾರಿಣಿ
ತಾರಿಣಿ ವರದಾಯಿನಿ
ಸಾಲಂಕೃತ ಸುಹಾಸಿನಿ
ಶಾಂತಾ ಮಾತಾ ರೂಪಗರ್ವಿತಾ
ನೀನೇ ಧಾತ್ರಿ ನೀನೇ ಜೀವನದಾತ್ರಿ

*

ರಾತ್ರಿ ಶಯನ ಗೃಹದಲ್ಲಿ ಆತ
ಅವಳ ಆಭರಣಗಳನ್ನೆಲ್ಲ
ಕಳಚಿಟ್ಟು
ಪೀತಾಂಬರಿಗೆ ಕೈ ಹಾಕಿ ಹೇಳಿದ:
ಹೇ ಸ್ತ್ರೀ
ನೀನೀಗ ಕಾಮರೂಪಿ ರತಿ
ನನ್ನ ಇಚ್ಛಾಂಕಿತೆ
ನಾನು ನಿನ್ನ ಸ್ವಾಮಿ; ನಿನ್ನ ಸೌಂದರ್ಯ
ಯುಕ್ತಿ, ಶಕ್ತಿಗಳೆಲ್ಲ
ನನಗೆ ಮಾತ್ರ ಮೀಸಲು;

•

ಆಕೆ ಯಾರನ್ನೂ ಎಂದೂ ಧಿಕ್ಕರಿಸಲಿಲ್ಲ
ಬಂದವನನ್ನು ಸ್ವಾಗತಿಸಿ
ಬಂದಾಗೊಮ್ಮೆ ನೆಲವಾಗಿ
ಹದವಾಗಿ ತನ್ನನ್ನು ತಾನು ಪಣಕ್ಕಿಟ್ಟು
ಸೌಂದರ್ಯದಿಂದ
ಕುರೂಪತೆಯಲ್ಲಿ
ರೂಪಾಂತರಗೊಂಡಳು

*

ಆಕೆ ಎಚ್ಚರಗೊಂಡಾಗ
ರಾತ್ರಿ ಕಳೆದು ಹಗಲಾಗಿದ್ದರೂ
ಸೂರ್ಯ ಕತ್ತಲನ್ನೇ ಬೆಳಗುತ್ತಿದ್ದ
ದೂರದ ಗುಡಿಗುಂಡಾರಗಳಿಂದ ಬಂದ
ಗಂಟೆಯ ನಿನಾದದಲ್ಲಿ
ನೀನು ಕಾಂತೆಯಲ್ಲ ಮಾತೆಯಲ್ಲ
ಅಲ್ಲ ನೀನು ಶಕ್ತಿ ಇಲ್ಲವೇ ಇಲ್ಲ ನಿನ್ನಲ್ಲಿ ಯುಕ್ತಿ
ನೀನೀಗ ಬರೀ ದೇವದಾಸಿ
ಕುಲಟೆ ಜಾರಿಣಿ ದುಡ್ಡಿಗಾಗಿ
ಏನೂ ಮಾಡುವ ಸೂಳೆ
—ವೆಂಬ ಶಬ್ದಗಳೇ ಕೇಳಿಸುತ್ತಿದ್ದವು.

೨ ನನ್ನ ಮಗ

ನನ್ನ ಮಗನಿಗೆ ಇಪ್ಪತ್ತೇಯಾದರೂ ಅವ
ನನಗಿಂತಲೂ
ಎತ್ತರವಾಗಿದ್ದಾನೆ
ನಾನು ಅವನ ವಯಸ್ಸಿನಲ್ಲಿದ್ದುದ್ದಕ್ಕಿಂತಲೂ
ಹೆಚ್ಚು ಬಲಶಾಲಿಯಾಗಿದ್ದಾನೆ
ಆತ ಹೊತ್ತಾಗಿ ಬಂದರೆ ಮನೆಗೆ

ನಾನು ಪಾಪ ಪ್ರಜ್ಞೆಯಿಂದ ಬಳಲುತ್ತಿರುತ್ತೇನೆ
ನಾನು ಮಾಡಿದ್ದಂತೆಯೇ
ಆತನೂ ಮಾಡುತ್ತಿರಬಹುದೇ

ನಾನು ಆ ವಯಸ್ಸಿನಲ್ಲಿ
ಮಾತಾಡಿದ್ದಂತೆ ಈತನೂ ಸುಳ್ಳು ಹೇಳುತ್ತಿರಬಹುದೇ
ಎಂದು ಕಲ್ಪಿಸಿ ಕಲ್ಪಿಸಿ
ಕಂಗಾಲಾಗುತ್ತೇನೆ.

'ಬಸು' ಪಾಟೀಲ

ಎರಡು ಹನಿಗವನಗಳು

೧ ದುಬಲಿ–ಪತಲಿ

ತನ್ನ ಉಸಿರನ್ನೆ ಊದುಗೊಳವೆ ಮಾಡಿ
ಈ ದುಬಲಿ ನನ್ನನ್ನೆ ಊದಿಬಿಟ್ಟಳು.
ಎಚ್ಚರಾದಾಗ ಮೂಳೆ ತಜ್ಞರ ಆಸ್ಪತ್ರೆಯಲ್ಲಿದ್ದೆ
ಕನಿಕರದಿಂದ ಗೆಳೆಯರು ಕೊಟ್ಟ ಎಳನೀರು
ಕುಡಿವಾಗ ಕೊಳವೆಯೊಳಗಿಂದ ಬಂದು
ಈ ಪತಲಿ ನನ್ನ ಬಾಯಲ್ಲಿ ಬಿದ್ದಳು.

೨ ಮರ್ಯಾದೆ

ದುಃಶ್ಯಾಸನ ತನ್ನ ಸೀರೆ ಸೆಳೆವಾಗ
'ಮರ್ಯಾದೆಯ ಪರಿಭಾಷೆ ಏನು ?' ಎಂದು
ಟಿ. ವಿ. ದ್ರೌಪದಿ ಗುರು-ಹಿರಿಯರನ್ನು ಕೇಳಿದಳು.

ನಮ್ಮ ಕಾಲೇಜು ಹುಡುಗ ಚೀರಿ ಹೇಳಿದ:
'ಅಂಥ ಸಿಲ್ಲಿ ಪ್ರಶ್ನೆಗಳನ್ನೆಲ್ಲ ಕೇಳಿ
ಅವರ ಗಮನ ಬೇರೆಡೆಗೆ ಸೆಳೆಯಬೇಡ.
ಅವರು ಏ (ಶೇಪ) ವಶರಾಗಿದ್ದಾರೆ'

ಪ್ರಯಾಗ ಪ್ರಯಾಣ

ಪ್ರಯಾಗ ಪ್ರಯಾಗ
ಭಾರೀ ಪ್ರಯಾಣವಿದು ಬನ್ನಿ ಹೋಗುವಾ.
ಹೋಗುವದೇ ಲೇಸು.
ಎಷ್ಟುದಿನ ಅಪ್ಪುಗೆಗೆ ತಪ್ಪುಕಾಣಿಕೆ ?
ಹುಬ್ಬಿನಕ್ಬೋಪಸ್ಸು ಕೊಂಡಿಯಲಿ
ವಿಲವಿಲ ಒದ್ದಾಟ ? ಹೋಗಲೇ ಬೇಕು.
ಬನ್ನಿ ಉದ್ಧ್ವಸ್ತಕೋಟೆಗಳ ರಾಡಿಗುಜ್ಜಲು
ಝಾಡಿಸಿಬಿಡುವಾ ನೆನಪಿನ ಮೂಲೆಮೂಲೆಯಿಂದ.
ಒಡೆದ ಮೂರ್ತಿಗಳ ತುಣುಕು ಕೂಡಿಸಲು
ಇಲ್ಲವೇ ಸ್ನೇಹ ಕಾಲದ ಫೆವಿಕೋಲು ?
ಓ ಆಕಾಶ
ನಿನ್ನ ಬೆಳಕಿಗೂ ಉಂಟೆ ಪಾಲಿನ ತಂಟೆ ?
ಓ ವಾಯು ಮಂಡಲ
ನಿನ್ನ ಗಾಳಿ ಬೀಸುವದೇ ಗಡಿಗುಡಿ
ಗೊಂಗಡಿ ನೋಡಿ ?
"ಕಹತ ಕಬೀರಾ ಸುನಭಾಯಿ ಸಾಧೋ.."
ಹೋಗಿ. ಯಾವದೋ ಶತಕದ ಮರೆತ ಹಾಡು,
ಮತ್ತೀ 'ವಂದೇ ಮಾತರಂ' ಗೊಣಗುವ ಹಳೇಟೇಪು !
ನಡೆನಡೆ ಕೇಳುವದೇನಿದೆ ?

ನಮಗಿಲ್ಲವೇ ನಂನಮ್ಮ ಧಂದೆ ?
ಎಲ್ಲೆಲ್ಲೂ ಕ್ರಯವಿಕ್ರಯದ ಡಿಸ್ಕೋ ಕುಣಿತ
ವಕ್ಕರಿಸುವವು ವಿಷವಾಯು
ಗುಣಾಕಾರ ಭಾಗಾಕಾರ ಗಿರಣಿ.
ನಮ್ಮದದು ನಮಗೆ ನಿಮ್ಮದೇನಿದೆ ಇಲ್ಲಿ ?
ಪ್ರಾಣಗಂಟನ್ನವಚಿ ಹೋಂಟ ನೀಲಕಂಠರ ಯಾತ್ರೆ.
ಹಾದಿಗುಂಟ ಬಾಂಬುಗಳ ಹುಂಬ ಹಾವಳಿ.
ಪಟಪಟ ಬಿದ್ದ ಮನೆಮಾರು ಬಿಟ್ಟು

ದಿಕ್ಕೆಟ್ಟು ಬಂದವರ ಹತಾಶೆ ಕಟ್ಟಿದ ಭವ್ಯ ಸ್ಮಾರಕ
ಕಣಕುತಿದೆ ಅಡಿಗಡಿಗೆ
ಮರೆತ ಹಾಡನು ಅಣಕಿಸುತ್ತ.

ಮನೆ ಮನೆ ಸುತ್ತಿದ ಅಂಚೆಯುವ
ವ್ಯಕ್ತಿ ಸಿಗದೇ ನಿಂತಿದ್ದ ದಿಗ್ಭ್ರಾಂತ.
ಎಲ್ಲಿ ಹರಿಯಿತು ಸೂತ್ರ ? ದೇವರುಗಳೆಲ್ಲ
ಕೈಕೊಟ್ಟರೇ ?
ಕತ್ತಲಲಿ ತಡಕುವ ನನಗೆ ಟಾರ್ಚ್ ಕೊಟ್ಟು
ಸದ್ದಿಲ್ಲದೇ ಸೆಲ್ಲು ತೆಗೆದನೇ ದೇವ ?

ಈ ಮುಸ್ಸಂಜೆಯು ಹೊತ್ತು ?
ಹುಡುಕುತ್ತಾನೆ ಅಂಚೆಯುವ, ಅದು ಧರ್ಮ-
ಬಲ್ಲವರ ಕೇಳುತ್ತಾನೆ ಗಲ್ಲಿಗಲ್ಲಿ ಸುತ್ತುತ್ತಾನೆ.
ಬಳಿಯಲ್ಲೇ ಭಯಂಕರ ಸ್ಫೋಟ
ಎದೆ ಬಡೆದವು ಇಮಾರತು ಕುಸಿದವು.
ಮಿಂಚು ದೀಪಗಳೆಲ್ಲಾ ಫಕ್ಕನೇ ಹೋದವು
ತೀರಿದ ಸಂಚಿತದಂತೆ. ಕತ್ತಲಧಿಕ್ಕಿಯಲಿ
ಗವಳಿಗನ ಗೋಕುಳ ಹಾಲು ಚೆಲ್ಲಿ ಗಿಜಿ ಗಿಜಿ
ನಾಡಾಡಿ ಬೆಕ್ಕಾದರೂ ಬಂತೇ ಲೊಚಗುಟ್ಟಿ
ಹೊಟ್ಟೆ ತಂಪಾಗಿಸಲು ?

ಕಾಳಿಮಾತೆಯ ದೇಗುಲದಲ್ಲಿ ಒಂದೇ ಸಮ ಗಂಟೆ,
ಹಂಸವೂ ಇಲ್ಲ ಆ ಹುಚ್ಚ ಗದಾಧರನೂ ಇಲ್ಲ.
ಬೀದಿಯಲಿ ಹುಲಿಕುಣಿತ ಢಂ ಢಮಾ ಢಂ.,
ಅಂಚೆಯುವನೇ ನಾಪತ್ತೆ !

ಹೋಗಬೇಕು ಪ್ರಯಾಗಕ್ಕೆ
ಅಯೋಧ್ಯೆ ಮಥುರೆಯ ಸುತ್ತಿ
ಬಿಲ್ಲಿಗೂ ಚಕ್ರಕೂ ಪ್ರದಕ್ಷಿಣೆ ಮಾಡಿ..
ಯುಗ ಯುಗದ ಪ್ರಸಾದ ಬಲ ಹೊತ್ತ ನಮಗೆ
ನಡೆದಂತೆ ದಿಶೆ ಮಂಜಾಗಿ ನಿಶೆಯು ನಶೆಯೇರಿ,

ಜನನ ಭೂಮಿಯೋ ಮರಣ ಭೂಮಿಯೋ
ತಿಳಿಯದೇ ಕುಬ್ಜ ಅಸುಗಳಾದೆವು
ಸ್ವರ್ಗ ವಿರುದ್ಧ ಸ್ವರ್ಗ ವರ್ಗ ವಿರುದ್ಧ ವರ್ಗ,,

ಲಾಯರುಗಳ ದರ್ಪದ ಕೂಗಾಟ.
ನಡುವೆ ಮುದಿಜಜ್ಜನ ಸುತ್ತಿಗೆ ಬಡಿತ
ಬೆವೆತ ಕಪಾಳಕ್ಕೆ. ಕುಬ್ಜ ಅಸುಗಳು ನಾವು
ಶಪಿತ ವಸುಗಳು ನಾವು ಎಲ್ಲಿ ಗಂಗೆ ?
ಎಲ್ಲಿ ಗಂಗೆ ಎಲ್ಲಿ ಸ್ವರ್ಗದ ಏಣಿ ? ಇಗೋ.
ಡೊಂಬರ ಜೆಟ್ಟಿ ಪಾಲಿ ತಯ್ಯಾರು ನಾವು.
'ಗೆಟ್ ಸೆಟ್ ಎಂಡ್ ಗೋ' ಎನ್ನುವದೇ ಬಾಕಿ,

ನಿಂತಿಹೆವು ನಿಂತಿಹೆವು ಕಾಯುತ್ತ.
ಎಲ್ಲೂ ಅವಳ ನೆರಳೂ ಇಲ್ಲ. ಅವಳು
ಪ್ರೇಮಮಯಿ, ಚಿಹ್ನ ನೋಡಿ ಭಿನ್ನನಗೆ
ಬೀರುವವಳಲ್ಲ. ಎಲ್ಲಿ ಗುಂ ಆಗಿದ್ದಾಳೆ ?
ಹಾಗೆ ನಾವೇನು ಮಾಡಿದೆವು ಅವಳನ್ನರಸಲು,
ಪತ್ತೆ ಮಾಡಲು, ಕರೆತರಲು ?
ಕೆಲವರು ಒಣಬಾಯಲ್ಲಿ ಬರೇ ಸ್ತುತಿ ಹಾಡಿದರು
ಕೆಲವರು ಕಣ್ಣಂಚಿನ ಒಂದು ಹನಿ ಸುರಿಸಿದರು
ಕೆಲವರು ನಾಟಕವಾಡಿ ನಾಲಗೆ ಚಪ್ಪರಿಸಿಕೊಂಡರು..
ಎಲ್ಲಿ ಗಂಗೆ ಎಲ್ಲಿ ಗಂಗೆ ?
ಗಾಂಧಿ ಫೋಟೋ ಕೇಳುತಿದೆ ಎಲ್ಲಿ ಗಂಗೆ ?
ವಂದಿಸಲು ಮಾತಾಯಿ ?
"ಸಬಕೋ ಸನ್ಮತಿ ದೇ ಭಗವಾನ್."

ರೈಲೋ ಬಸ್ಸೋ ಹಿಡಿದು ಬಂದೆವು ಸಂಗಮದ ಬಳಿ
ಎಲ್ಲೂ ರಣರಣ ಬಿಸಿಲು ಉರಿವರೇವೆಯು ನರಳು
ಕೊಡೆ ಹಿಡಿಯಲೆಂದು ಮರ ಇಲ್ಲ, ಹಕ್ಕಿ
ಸುಳಿವೇ ಇಲ್ಲ. ಒಣಗಿ ಬಡಕಲಾದ ದಂಡೆಯಲಿ
ತಪಸ್ಸಿಗೆ ಕೂತ ಚರ್ಮ ಹೊದೆದ ಕಂಕಾಲ.
ತಮ್ಮನು ತಾವೇ ಅರಸುವ ಭಕ್ತಜನ ಮೇಳ
ಪುಸ್ತಕಾಲಯ ತೆರೆದು ಬಂದರೆ ಸರಸ್ವತಿ ನಾಪತ್ತೆ
ಭೂಗತವಾದವಳು ಬಂದೇ ಇಲ್ಲ ಎಂದರು
ಮಲಿನ ಗಂಗೆ ಈಗೀಗ ನಿಷ್ಕ್ರಿಯಳು ಎಂದರು
ಎದುರು ಕಪ್ಪು ಯಮುನೆಯ ಹಿಪ್ಪೀ ತರಂಗ.
ಒಂದನ್ನೊಂದು ಅಪ್ಪಿ ಮುದ್ದಿಸಿ

ತಾಡನಮರ್ದನದಿ ಏರೇರಿ ಬೆಳ್ಳಿನೊರೆ
ಸುರಿಸಿ ತಣ್ಣಗಾಗುವ ಸತ್ಸಂಗ ಕಾರ್ಬನ್ನು
ಹೊಗೆಯಲಿ ಕಪ್ಪಾದ ಮುಗಿಲಿಗೆ
ಒಪ್ಪುವಭಿಸಾರಿಕೆ, ಈ ಯಮುನೆ. ತಿಕ್ಕುವ
ತೆವಲಲ್ಲಿ ಎಲ್ಲಿಯು ಮುರಲಿರಾಗ ?
ತಪಸ್ವಿಯು ಗಡ್ಡ ನೆಲದಿ ಬೇರಿಟ್ಟರೂ
ಹವಾ ಬದಲಾಗುವ ಸೂಚನೆ ಇಲ್ಲ.

ದಾಪುಗಾಲಲಿ ಬಂದ ಮಿತ್ರ,
ಸಾಫಾಗಿ ಎಂದ–ಪ್ರಯಾಗದಲ್ಲಿ
ಶಲ್ಯಕ್ಕೇ ತಾಗದ ರೋಗವಂತೆ
ಚಿಕಿತ್ಸೆ ಸಫಲ ರೋಗಿ ಮೃತನಂತೆ
ಹದಿನಾರಾಣೆ ಮಾನವ ಮಾತ್ರ ಬದುಕುತ್ತಾನಂತೆ.
ಅಬ್ಬಬ್ಬ ಕೇಳಿಯೇ ಹೆಪ್ಪು ಗಟ್ಟಿದೆವು
ಒಬ್ಬರೊಬ್ಬರ ಕೈ ಹಿಡಿದೆವು ಬೆನ್ನ ತಟ್ಟಿದೆವು ಆಗಲೇ
ತಿಳಿದಿತ್ತು ನಿಂತರೆ ಸಾಯುವೆವು ನಡೆದರೆ ಬೇಯುವೆವು.
ಮರಳಬೇಕು ಮುಖವಾಡ ಹಚ್ಚಿ
ಅಥವಾ ಗೋಡೆಯಡಿ ಬಗ್ಗಿ ನೆರಳಾಗಿ ಕುಗ್ಗಿ
ಮರದ ಮರೆಯು ನೆಳಲಲ್ಲಿ, ಅಥವಾ ನೆಳಲಾಗಿ,
ಕಾರಿನ ಸ್ಟೆಪ್ನಿಯಾಗಿ
ಯಾರಿಗೂ ತಿಳಿಯದಂತೆ ತಲುಪಬೇಕು ನೆಮ್ಮದಿಮನೆ.
ಅಂತೂ ಮನೆಗೆ ಬಂದದ್ದೇ ತಾಜಾ ಸುದ್ದಿ—
ಅಪರೂಪ ನರನೊಬ್ಬ ಮಿಂದನಂತೆ
ಸಂಗಮ ನೀರಲ್ಲಿ, ಅವನ ಕೊಯ್ದ ಹೆಬ್ಬೆರಳು
ಕೈಗೆ ಮೂಡಿತ್ತಂತೆ. ಅವನ ಕೈ ಸೋಂಕಿಗೆ
ಮುಂಡಕ್ಕೆ ತಲೆ ಚಿಗುರಿತ್ತಂತೆ.
ಕೋಟೆ ಮೇಲಿಂದ ಹಾರಿಬಂದ ಹಕ್ಕಿ
ಧವಳಗೀತ ಹಾಡಿತ್ತಂತೆ. ಗಣ್ಯರೂ
ಮಾಣ್ಣಿನವರೂ ಘಾಗಡಿಯಾಡಿದರಂತೆ.
ಜೀವಂತ ಎದ್ದುನಿಂತ ಮೂರ್ತಿ ಕಾಣೆಯಿತಂತೆ
ಬೆಸೆದ ಕೈಗಳ ನೋಡಿ.
ಚಟಕ್ಕನೆದ್ದ ಕಂಕಾಲ ತಪಸ್ವಿ
ಹರಸಿದನಂತೆ ಹರ್ಷೋನ್ಮಾದದಲ್ಲಿ.

ಎರಡು ಕವನಗಳು

೧ ವೇದನೆ ಇತ್ತು ಕದಳಿಗೆ

ದಿಕ್ಕುಗಳಿಗೆ ಒರಗಿ ನಿಂತ
ನೀಲಗಣ್ಣಿನ ಹುಡುಗಿ;
ಕೇಳಿದನು ಕವಿ:
ಯಾರು ನೀನು ಮೌನ ಶಿಲೆಯೆ ?
ಜಂಗು ತಿಂದಿದೆಯಾ ಮಾತುಗಳನು
ಕತ್ತಲ ಕೇಶದ ಖಂಡವೆ!
ಮಾತಾಡು ಮೌನ ಭೇದಿಸಿ.

ಹುಡುಗಿ ರೆಪ್ಪೆಯುಗಲಿಸಿದಳು
ನೀಲದಲಿ ನದಿಗಳಿದ್ದವು
ಹಾರುವ ಮೀನುಗಳಿದ್ದವು
ಮಾರ್ಗಗಳಿದ್ದವು ಉಡುತಡಿಗೆ

ಪುರ್‍ರಂತ ಹಾರಿದವು
ಅವಳ ನೆನಪಿನ ಹಕ್ಕಿಗಳು

ಮಾತಾಡಿದಳು ಕಡೆಗೆ
ಬಿದ್ದ ನೆರಳಿನ ಹಾಗೆ
ತೊಯ್ದ ಮಣ್ಣಿನ ಹಾಗೆ

ಧಗೆ ಇತ್ತು ಇರುಳಿಗೆ
ವೇದನೆ ಇತ್ತು ಕದಳಿಗೆ
ಬೆತ್ತಲಲಿ ಬೊಗಸೆ ಕವನಗಳಿದ್ದವು

ಕವಿ ಸ್ಥಾವರವಾದ
ಹುಡುಗಿ ವಿಸ್ತಾರವಾದವಳು.

೨ ಮಾಂಡೆಲಾ

ಜೈಲು ಸರಳಿನ ಮಾರುದ್ದ ನೆರಳಿನಾಚೆ
ನೀಲದಲಿ ಕುದಿವ ನೋವು;
ಮಾನವ ಚೈತನ್ಯದಾಸ್ಫೋಟ
ಮಾಂಡೆಲಾ ನೆಲ್ಸನ್ ಮಾಂಡೆಲಾ...

'DON'T HANG OUR LEADERS

ಆಫ್ರಿಕಾ ನಮ್ಮದು, ಮಾಂಡೆಲಾ ನಮ್ಮ ನಾಯಕ
ತಾರಕಕ್ಕೇರಿದ ಕಪ್ಪು ಜನರ ಕೆಂಪು ಘೋಷಣೆಯಲಿ
ಚರಿತ್ರೆಯನು ತಡೆದು ನಿಲ್ಲಿಸುವ ತಾಕತ್ತು;
ಮಾಂಡೆಲಾ ನೆಲ್ಸನ್ ಮಾಂಡೆಲಾ...

ಕಪ್ಪು ಜನಸಾಗರಕೆ ಸೆಲ್ಲುಗಳ ಮಳೆ ಬಿದ್ದೊ....
ತೊಯ್ದ ನೆತ್ತರ ಜಾಗ ಆಫ್ರಿಕಾ; ಸತ್ತಂತ ಅವ್ವ ಅಪ್ಪಂದಿರ
ತೋಳ ತೆಕ್ಕೆಯು ತಾರೆಗಳು ತಪ್ತಗೊಂಡು ಉಸುರುತ್ತವೆ;
ಮಾಂಡೆಲಾ ನೆಲ್ಸನ್ ಮಾಂಡೆಲಾ.......

ಅಸಂಖ್ಯ ಶವಪೆಟ್ಟಿಗೆಗಳ, ನಕ್ಷತ್ರ ಮಾಲೆಗಳ ದಫನ್ ಕಾರ್ಯ
ಸ್ಮಶಾನ ಮೌನ ಮಾತುಗಳು ಪ್ರಕಟವಾಗುತ್ತವೆ:
ದಕ್ಷಿಣಾಫ್ರಿಕಾದ ಕಂದ ಕುಸುಮಗಳ ಮೇಲೆ ಸಿಡಿದ ಸೆಲ್ಲುಗಳು
ಅವರ ಕನಸುಗಳ ಕೋಗಿಲೆಯ ನೆತ್ತರದ ಹಾಡುಗಳ
ಸುಡಲಾರವು
ಮಾಂಡೆಲಾ ನೆಲ್ಸನ್ ಮಾಂಡೆಲಾ...

●

ಚಂದ್ರಶೇಖರ ಕಂಬಾರ

ನದಿ ಇಲ್ಲಾ ಕೆರೆ ಇಲ್ಲಾ

ನಾನು ಉಸಿರಾಡುವ ಆಸು ಪಾಸು
ನದಿಯಿಲ್ಲಾ ಒಂದು ಕೆರೆ ಇಲ್ಲಾ

ಮಟ ಮಟ ಮಧ್ಯಾಹ್ನದರಗಿಣಿ ಬಿಸಿಲು
ಕೊಕ್ಕೆಲ್ಲಾ ಕೆಂಪು ಕೆಂಪು ಕಾರಿ
ಸುತ್ತ ಕಂಗಾಲ ಕಣ್ಣುಗಳ ಬೀರಿ
ಹಾರಿಹೋಯಿತು ಅನಂತಕ್ಕೆ ಉರಿಯನುಳಿಸಿ.

ಒಂದೇ ಒಂದು ಒದೆ
ಚಿಕ್ಕ ಬಾಸಾಳದಂತೆ
ಚಂದ್ರನಗಲದ ಹುಣ್ಣು ಮೂಡಿತು
ಚಿಕ್ಕಳಿಕೆ ಚೊಕ್ಕೆ ಎದ್ದವು ದಡಾರದ ಹಾಗೆ
ಬಾನ ತುಂಬಾ.

ಕತ್ತಲಿನ ಕರಿದೆವ್ವ
ಕೊಳ್ಳಿ ಹಿಡಿದಾಡಿ
ಉರಿಗಾಳಿ ಸೋಂಕಿದ ಕುರು ಒಡೆದು
ಬೆಳಗು ಮೂಡುವುದು
ಉಷೆಯ ತೊಡೆ ತುಂಬಾ
ಒಣಗಿ ಹೆಪ್ಪಾದ ಕಪ್ಪು ಕೆಂಪು.

ನದಿ ಇರದ ನಾಡಿನ ತುಂಬ
ತೊಟ್ಟಿಕ್ಕುವ ಕಂಬನಿ
ಕಾದ ನೆಲ
ಕಾಯುವ ಜೀವ

ತಕ ಪಕ ಕುದಿವ
ಉಸಿರ ತುಂಬ
ಶಬ್ದಾಪಶಬ್ದ
ಪದ ಪದವ ತುಳಿದ
ಕವಲು ದಾರಿಯು ತುಂಬಾ
ಕನಲು, ಕಿಡಿಕಿಡಿ.

ನದೀ ಜಾಡಿನ ಗುಂಟ
ಕರಿದಾರಿ ಕಳೆದ ಕರೀಸಮುದ್ರ
ಸುವಿಶಾಲ ನೀಲ ರಹಿತ
ಆಕಳಿಕೆಯು ಒಂದರೆಗಳಿಗೆ
ಊರೂರ ಮಂದಿ
ಕೇರಿ ಹೋದರು
ತೂರಿ ಹೋದರು

ಬಾ
ನದಿಯೋ
ಸಮುದ್ರವಾಗುವ ಪರಿಯೋ
ಹನಿ ಹನಿ ಆವಿಯಾಗಿ
ಬೀಜ ಕಟ್ಟುವ ಮುಗಿಲೇ
ಮಳೆ ಸುರಿಸಿ
ಕಣಿವೆ ಕಂದರ ನಾಡು
ತನಿ ತನಿ ಜೀವ
ಕುಣಿವ ಖಣಿಯೋ
ತಣಿಯೋ

ನದಿ ಇಲ್ಲಾ ಕೆರೆ ಇಲ್ಲಾ,

ವಿನಾಯಕರ ಕಾವ್ಯ : ರೂಪ ಮತ್ತು ಅಭಿವ್ಯಕ್ತಿ

ಶಿವರಾಮು ಕಾಡನಕುಪ್ಪೆ

ಭಾಷೆ ಮೂಲಭೂತವಾಗಿ ಪರಂಪರೆಗೆ ಸೇರಿದ್ದು, ಯಾವುದೇ ಕವಿ ಅದರ ಸಂಪೂರ್ಣ ಹಿಡಿತದಿಂದ ಬಿಡಿಸಿಕೊಳ್ಳುವ, ಬಿಡಿಸಿಕೊಳ್ಳುವುದರಲ್ಲಿ ಸೆಣಸಾಡುವ ಹಂತದಲ್ಲೇ ಆನುವಂಶಿಕವಾಗಿ ಭಾಷೆ ಅರಿವಿಲ್ಲದ ಹಾಗೆ ಅವನಲ್ಲಿ ಕೆಲಸ ಮಾಡತೊಡಗುತ್ತದೆ. ಪರಂಪರಾಗತವಾದ ಭಾಷೆ ಸವಾಲಾಗಿ ನಿಂತಾಗ ನಿಜವಾದ ಕವಿಯೊಬ್ಬನು ಅದನ್ನು ಸೃಷ್ಟಿ ಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದರ ಬಗ್ಗೆ ಚಿಂತಿಸತೊಡಗುತ್ತಾನೆ. ಸತ್ವಯುತನಾದ ಕವಿ ಈ ಪರಂಪರಾಗತ ಭಾಷೆಯನ್ನು ಹೊಸ ಅರ್ಥ ಭಾವ ಲಯಗಳ ಮೂಲಕ ಪುನರ್ ಸೃಷ್ಟಿ ಮಾಡತೊಡಗುತ್ತಾನೆ. ಇದರಿಂದಾಗಿ ಪರಂಪರೆಯ ಭಾಷೆ ನವೀನ ಅರ್ಥದಲ್ಲಿ ವಿಜೃಂಭಿಸುತ್ತದೆ. ಪಂಪ, ಕುಮಾರವ್ಯಾಸ, ಕುವೆಂಪು, ಬೇಂದ್ರೆ ಅವರಂಥ ಸಮರ್ಥರಾದ ಕವಿಗಳು ಕನ್ನಡದಲ್ಲಿ ಈ ಕೆಲಸ ಮಾಡಿ ತೋರಿದ್ದಾರೆ.

ಪ್ರತಿಯೊಂದು ಯುಗದಲ್ಲೂ ಸಮರ್ಥ ಕವಿಯೊಬ್ಬನು ತನ್ನ ಅಭಿವ್ಯಕ್ತಿಗೆ ರೂಪ (form) ವೊಂದನ್ನು ಕಂಡುಕೊಂಡು, ಆ ರೂಪವನ್ನು ಅದರ ಎಲ್ಲ ಅರ್ಥಗಳಲ್ಲಿ ದುಡಿಸಿಕೊಂಡಾಗ, ಅವನ ಅನಂತರ ಬರುವ ಕವಿ ತನ್ನ ವಸ್ತುವಿಗೆ ತಕ್ಕ ರೂಪವನ್ನು ಹುಡುಕುವುದು ಅನಿವಾರ್ಯ. ಇಲ್ಲದಿದ್ದಲ್ಲಿ ಪಂಪನ ನಂತರ ಬಂದ ಅನೇಕ ಚಂಪೂ ಕವಿಗಳು ಪಂಪನನ್ನು ಅನುಸರಿಸಿದಂತೆ, ಕುಮಾರವ್ಯಾಸನನ್ನು ಅವನ ನಂತರ ಬಂದ ಷಟ್ಪದಿಕಾರರು ಅನುಕರಿಸಿದಂತೆ ಭಾಷೆ ಛಂದ ಅರ್ಥಗಳಲ್ಲಿ ಹೊಸತನವನ್ನು ಸಾಧಿಸದೆ ಹೋಗುತ್ತಾರೆ.

ಮತ್ತೆ ಕೆಲವು ಸಂದರ್ಭಗಳಲ್ಲಿ, ಕೆಲವು ಕವಿಗಳು ರೂಪವೊಂದನ್ನು ಸಿದ್ಧಪಡಿಸುತ್ತಾರೆ. ಆದರೆ ಅವರು ಆ ರೂಪವನ್ನು ಅದರ ಎಲ್ಲ ಸಾಧ್ಯತೆಗಳಲ್ಲಿ ದುಡಿಸಿಕೊಳ್ಳಲು ವಿಫಲರಾಗಬಹುದು, ತಕ್ಕಮಟ್ಟಿನ ಯಶಸ್ಸು ಬಂದಿದ್ದರೂ ಅದು ಅವರ ವಸ್ತು ಮತ್ತು ಸತ್ವದ ದೃಷ್ಟಿಯಿಂದ ಗಮನಿಸುವಂಥದ್ದಾಗಿರುತ್ತದೆ. ಹರಿಹರ, ರಾಘವಾಂಕ ಇಂಥ ಕವಿಗಳು. ರಾಘವಾಂಕ ತನ್ನ ಸೋದರ ಮಾವ ಹರಿಹರನ ಗರಡಿಯಲ್ಲಿ ಕಲಿತವನಾದರೂ ಅವನಿಗೆ ಹರಿಹರನ ರಗಳೆಯ ರೂಪ, ತನ್ನ ಕಾವ್ಯದ ವಸ್ತು ಮತ್ತು ಸತ್ವಗಳಿಗೆ ತಕ್ಕ ಅಭಿವ್ಯಕ್ತಿಯಾಗಿ ಕಂಡುಬರಲಿಲ್ಲ. ಅದಕ್ಕಾಗಿ ಅವನು ಷಟ್ಪದಿಯ ಛಂದಸ್ಸನ್ನು ಕಟ್ಟಿಕೊಳ್ಳಬೇಕಾಯಿತು. ಆತ ಷಟ್ಪದಿಯನ್ನು ಪೂರ್ಣ ರೂಪದಲ್ಲಿ ಬಳಸಿದನಾದರೂ, ಆ ರೂಪವನ್ನು ಅತ್ಯಂತ ಸಮರ್ಥವಾಗಿ ದುಡಿಸಿಕೊಂಡವನು ಕುಮಾರವ್ಯಾಸ. ಕುಮಾರವ್ಯಾಸನ ಅನಂತರದ ಎಲ್ಲ ಕವಿಗಳು ರೂಪ ಮತ್ತು ಸತ್ವದ ದೃಷ್ಟಿಯಿಂದ ಕುಮಾರವ್ಯಾಸನ ಪಡಿನೆರಳಾದರು.

ಸಮರ್ಥ ಮಹಾಕವಿಯೊಬ್ಬ ಸದಾಕಾಲ ತನ್ನ ಮುಂದಿನ ಪೀಳಿಗೆಯ ಕವಿಗಳಿಗೆ ಸದಾ ಸವಾಲಾಗಿ ನಿಂತಿರುತ್ತಾನೆ. ಅದರಿಂದ ಬಿಡಿಸಿಕೊಳ್ಳಲು, ತಮ್ಮ ಸ್ವಂತಿಕೆಯನ್ನು ರೂಢಿಸಿಕೊಳ್ಳಲು ಮುಂದಿನ ಕವಿಗಳು ಹೊಸ ಹೊಸ ಪ್ರಯೋಗಗಳನ್ನು ಸದಾ ಮಾಡುತ್ತಿರಬೇಕಾಗುತ್ತದೆ. ತಮ್ಮ ಅನುಭವ ಸತ್ವಗಳ ಅಭಿವ್ಯಕ್ತಿಗಾಗಿ ತಕ್ಕ ರೂಪದ ಹುಡುಕಾಟ ಮುಖ್ಯವಾಗುತ್ತದೆ. ಕೆಲವೇಳೆ ಕವಿ ಈ ಹುಡುಕಾಟದಲ್ಲೇ ತನ್ನ ಕಾವ್ಯ ಜೀವನವನ್ನು ಕಳೆಯಬಹುದು; ಸಿದ್ಧಿಯನ್ನು ಪಡೆಯದಿರಬಹುದು.

ವಿನಾಯಕರು ಕಾವ್ಯಸೃಷ್ಟಿ ಮಾಡುವ ಹೊತ್ತಿಗೆ ಕುವೆಂಪು ಮತ್ತು ಬೇಂದ್ರೆ ದೊಡ್ಡ ಸವಾಲಾಗಿ ಬೆಳೆದು ನಿಂತಿದ್ದರು. ಕುವೆಂಪು ಅವರಿಗಿಂತಲೂ ಬೇಂದ್ರೆಯವರು ವಿನಾಯಕರಿಗೆ ಭಾಷೆಯ ದೃಷ್ಟಿಯಿಂದ ಸವಾಲಿನ ಕವಿಯಾಗಿರಬಹುದು. ವಿನಾಯಕರು ನವೋದಯದ ಛಂದ, ಲಯ, ಭಾಷೆಯ ಜೊತೆ ಸೆಣಸಾಡಲು ಯತ್ನಿಸಿದರು; ಸಿದ್ಧವಾದ ನುಡಿಗಟ್ಟಿಗೆ ಹೊಸ ಅರ್ಥ, ಹೊಸ ಆಯಾಮ ಕೊಡಲು ಯತ್ನಿಸಿದರು. ಈ ದೃಷ್ಟಿಯಿಂದ ೧೯೪೦ ರಲ್ಲಿ ವಿನಾಯಕರು ಪ್ರಕಟಿಸಿದ "ಸಮುದ್ರ ಗೀತೆಗಳು" ಕನ್ನಡ ಕಾವ್ಯ ಸಂದರ್ಭದಲ್ಲಿ ರೂಪದ ದೃಷ್ಟಿಯಿಂದ ಅತ್ಯಂತ ಮಹತ್ವದ ಮತ್ತು ಐತಿಹಾಸಿಕ ಕೃತಿ. ವಿನಾಯಕರ ವಸ್ತು ಸದಾ ಒಂದು ಕೇಂದ್ರದ ಸುತ್ತ ಹರಿಯುವಂತೆ ಕಂಡುಬಂದರೂ, ಒಟ್ಟಾರೆ ಅವರ ಕಾವ್ಯ ಸತ್ವ ಭಾರತೀಯ ಸನಾತನ ಮೌಲ್ಯದ ಮೇಲೆ ನಿಂತಿರುವಂಥದು. ಅವರ ಮಹಾಕಾವ್ಯ "ಭಾರತ ಸಿಂಧು ರಶ್ಮಿ" ಅದನ್ನು ಸಂಪೂರ್ಣವಾಗಿ ದೃಢೀಕರಿಸುತ್ತದೆ. "ಸಮುದ್ರ ಗೀತಗಳು" ಸಂಕಲನದ

ಅನೇಕ ಕವನಗಳು ನವೋದಯ ಸಾಹಿತ್ಯಾನಂತರದ ಕಾವ್ಯಮಾರ್ಗವಾದ ನವ್ಯ ಕಾವ್ಯ ಮಾರ್ಗಕ್ಕೆ ನಾಂದಿ ಹಾಡಿವೆ. ೧೯೫೦ ರ ಆದಿಭಾಗದಲ್ಲಿ, ನವ್ಯ ಕಾವ್ಯ ಮಾರ್ಗ ಆರಂಭವಾಗುವ ಹತ್ತು ವರ್ಷಗಳ ಮುನ್ನವೇ ಆ ಕಾವ್ಯ ಮಾರ್ಗಕ್ಕೆ ವಿನಾಯಕರು ಒಂದು ಹಾದಿಯನ್ನು, ರೂಪವನ್ನು ಸೃಷ್ಟಿಸಿದ್ದರು ಎಂಬುದು ಅತ್ಯಂತ ಮಹತ್ವದ ಅಂಶ. ವಿನಾಯಕರು ಇಂಗ್ಲಂಡಿಗೆ ಹೋಗಿದ್ದಾಗ ಅವರ ಮೇಲೆ ನೇರವಾಗಿ ಇಂಗ್ಲಿಷ್ ನವ್ಯ ಕಾವ್ಯದ ಪ್ರಭಾವ ಆಗಿತ್ತು. ಅದನ್ನು ಅದರ ಮಧ್ಯೆ ನಿಂತು ಅಭ್ಯಾಸ ಮಾಡುವ ಅವಕಾಶ ಲಭಿಸಿತ್ತು.

"ಸಮುದ್ರ ಗೀತಗಳು" ಕನ್ನಡದ ಅತ್ಯಂತ ಆಕಸ್ಮಿಕ ಸೃಷ್ಟಿ–ಪ್ರಯೋಗಶೀಲತೆಯ ದೃಷ್ಟಿಯಿಂದ. 'ಸಮುದ್ರ' ಕನ್ನಡ ಕಾವ್ಯ ಪರಂಪರೆಯಲ್ಲಿ ಅಷ್ಟಾದಶ ವರ್ಣನೆಗಳಲ್ಲಿ ಒಂದು. ಸಾಂಪ್ರದಾಯಿಕವಾಗಿ ಕ್ಲೀಷೆಯಾಗಿದ್ದ ಈ ವರ್ಣನೆಯನ್ನು ರತ್ನಾಕರ ವರ್ಣಿಗಿಂತ ಅತ್ಯಂತ ಸಮರ್ಪಕವಾಗಿ, ವಾಸ್ತವವಾಗಿ ಕೊಟ್ಟವರು ವಿನಾಯಕರು.

ವಿನಾಯಕರ ಕಾವ್ಯವೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಸಾಂದರ್ಭಿಕ ಮತ್ತು ಉದ್ದೇಶ ಪೂರ್ವಕ ಸೃಷ್ಟಿ. "ಸಮುದ್ರ ಗೀತೆಗಳು"–ಸಮುದ್ರದ ಅನುಭವದ ಮೇಲೆ ಬರೆದ ಗೀತೆಗಳಾದರೆ, "ಕಾಶ್ಮೀರ"ದಲ್ಲಿ ಕಾಶ್ಮೀರದ ವರ್ಣನೆಯಿದೆ. "ದ್ಯಾವಾ ಪೃಥಿವೀ" ಆಕಾಶಯಾನ ತಂದುಕೊಟ್ಟ ಅನುಭವದ ಫಲ. ತಾವು ಕಂಡದ್ದನ್ನೆಲ್ಲ, ಕಲಿತದ್ದನ್ನೆಲ್ಲ ಕಾವ್ಯವಾಗಿಸುವ ಮನಸ್ಸು ವಿನಾಯಕರದು.

ಈ ಹಿನ್ನೆಲೆಯಲ್ಲಿ "ಸಮುದ್ರ ಗೀತಗಳು" ವಿನಾಯಕರು ಕನ್ನಡ ಕಾವ್ಯ ಲೋಕಕ್ಕೆ ನೀಡುತ್ತಿದ್ದ ಹೊಸ ಅನುಭವವಾಗಿತ್ತು, ಈ ಹೊಸ ವಸ್ತುವನ್ನು ಅಭಿವ್ಯಕ್ತಿಸಲು ಹೊಸ ರೂಪವೊಂದರ ಅವಶ್ಯಕತೆಯಿತ್ತು. ಸಮುದ್ರದ ಪಯಣಕ್ಕೆ ಲಯವಿಲ್ಲದ ಒಂದು ಲಯವಿರುತ್ತದೆ. ಸಮುದ್ರ ಯಾವುದೇ ನಿರ್ದಿಷ್ಟ ಲಯಕ್ಕೆ ದಕ್ಕುವುದಲ್ಲ. ಆದುದರಿಂದ ಕನ್ನಡ ಕಾವ್ಯ ಅವರೆಗೆ ರೂಢಿಸಿಕೊಂಡಿದ್ದ ಯಾವುದೇ ಛಂದೋರೂಪ ಸರಿ ಹೊಂದಲಿಲ್ಲ. ಸಮುದ್ರದ ಅಸಾಧ್ಯವಾದ ಅನುಭವವನ್ನು, ಅದರ ಸ್ವಚ್ಛಂದ ಚಂದವನ್ನು ಅಭಿವ್ಯಕ್ತಿಸಲು "ಸ್ವಚ್ಛಂದ ಛಂದ"ವೊಂದನ್ನು ರೂಪಿಸಿಕೊಳ್ಳಬೇಕಾಯಿತು. ಇದನ್ನೇ ವಿನಾಯಕರು ತಮ್ಮ ಕಾವ್ಯ ಪ್ರಣಾಳಿಕೆಯ ರೂಪದಲ್ಲಿ "ಪ್ರತಿಜ್ಞೆ" (ಪು. ೧೯–೨೦) ಎಂಬ ಪದ್ಯದಲ್ಲಿ ಘೋಷಿಸುತ್ತಾರೆ.

ಬೇಡಯ್ಯ! ಬಂಧಗಳ ಬಂದಿವಾಸ;
ಬರದದ್ದೇ ಬಂಧುರವಾಗಬಹುದು
ಸಾಕಯ್ಯ: ವೃತ್ತಗಳಾವರ್ತ:

ನಿನ್ನ ಮಣಿತವಿರಲಿ ಸಮುದ್ರದ ಕುಣಿತದಂತೆ !
ತರಂಗೋತ್ತರಂಗಗಳನ್ನೊಳಗೊಂಡ
ನವರಂಗವಾರಧಿಯಂತೆ
ವೃತ್ತ ಬಂಧುಗಳು ಸಂಧಿಸಿ ಬಂದ
ಸಮುಂದ್ರವಾಗು, ಕವಿಯೆ!
ಕವಿಗಳ ಸಮುದ್ರಗುಪ್ತನಾಗು!

'ಜಲಕ್ರೀಡಾವೃತ್ತ' ಮತ್ತು 'ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು' ಎಂಬ ಮಾತುಗಳಲ್ಲಿ ಸಾಂಪ್ರದಾಯಿಕ ಮಟ್ಟುಗಳನ್ನು ತಿರಸ್ಕರಿಸುವ ಮನೋಧರ್ಮವನ್ನು ಕಾಣುತ್ತೇವೆ.

ಇದೇ ಸಂದರ್ಭದಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಅಂಶವಿದೆ. ವಿನಾಯಕರು ಹೇಳುವ 'ಸ್ವಚ್ಛಂದ ಛಂದ' ಸಂಪೂರ್ಣ ಅವರದೇ ಸೃಷ್ಟಿಯಲ್ಲ. ಈ ಛಂದದ ಮೇಲೆ ಇಂಗ್ಲಿಷ್‌ನ ಮುಕ್ತ ಛಂದಸ್ಸು ಪ್ರಭಾವ ಬೀರಿರಬಹುದು. ನಾನು ಮೊದಲೆ ಹೇಳಿದ ಹಾಗೆ ವಿನಾಯಕರು ಭಾರತೀಯ ಪರಂಪರೆಯಲ್ಲಿ ಬೇರು ಬಿಟ್ಟ ಕವಿಯಾದ್ದರಿಂದ, ಇದರ ಜೊತೆಗೆ ಅವರಿಗೆ ಅರಿವಿಲ್ಲದೆಯೇ ಅವರ ಮೇಲೆ ಕನ್ನಡ ವಚನ ಸಾಹಿತ್ಯದ ದಟ್ಟವಾದ ಪ್ರಭಾವ ಆಗಿದೆ. ನವ್ಯ ಕಾವ್ಯದ ಸಂಪೂರ್ಣ ರೂಪವನ್ನು ನಿರ್ಧರಿಸಿದ್ದು ವಚನ ಸಾಹಿತ್ಯವೆಂಬುದರ ಬಗ್ಗೆ ಈಗ ಅಷ್ಟು ವಿವಾದವಿಲ್ಲ. ಅದು ಒಂದು ಪರಂಪರಾಗತ ಅಂಶವಾಗಿ ಕನ್ನಡ ಕವಿಗಳನ್ನು ಉದ್ದಕ್ಕೂ ನಿಯಂತ್ರಿಸಿಕೊಂಡು ಬಂದಿರುವ ವಿಶಿಷ್ಟ ಸಾಹಿತ್ಯ. ವಚನ ಸಾಹಿತ್ಯದ ಪ್ರಭಾವದ ಜೊತೆಗೆ ಬೇಂದ್ರೆಯವರ 'ಕರುಳಿನ ವಚನಗಳು' ಕೂಡ ಮುಕ್ತ ಛಂದದ ಕಡೆ ವಿನಾಯಕರ ಮನಹರಿವಂತೆ ಮಾಡಿರಬಹುದು. ಮೇಲೆ ಉದ್ಧರಿಸಿದ ಕವನದಲ್ಲೇ 'ಬಾವಿಯ ತೋಡಿ ಮುನ್ನೀರ ಚಿತ್ರಿಸಬಹುದೇ ?' ಎಂಬ ಸಾಲೇ ಅದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. "ಸಮುದ್ರ ಗೀತಗಳು"—ಉದ್ದಕ್ಕೂ ವಚನ ಸಾಹಿತ್ಯ ರೂಪವನ್ನು ಕಾಣಬಹುದು.

ಕಿನ್ನರ ಕಿಂಪುರುಷರ ನೌಕೆಗಳಂತೆ
ತೇಲುತಿಹುದು ಬುರುಗಿನ ಬೆಳ್ಳಿ ಶರಧಿಯ ಮೇಲೆ,
ನೂರೊಂದು ಕಡೆಗೆ ತೇಲುತಿಹುದು ನೋಡಾ!
ಬೆಣ್ಣೆ ಕಡೆದ ಮಜ್ಜಿಗೆಯಂತೆ
ಹುಟ್ಟು ಕಡೆದ ನೀರು ಅಟ್ಟಿಸುತಿಹುದು ನೋಡಾ!
ತಪತಪನೆ ಕಾಯ್ದ ಕೋಟಿ ಸೂರ್ಯರಂತೆ
ಕಣ್ಣು ಕುಕ್ಕಿಸುತಿಹುದು ನೋಡಾ ಸಾಗರವು! (ಏಕಮೇವ)

ಅಂಚೆಯಂತೆ ಕತ್ತರಿಸಿ ತೆರೆಗಳನ್ನು
ಚಂಚುವಿನಂಚಿನಿಂದ
ನಮ್ಮ ನಾವೆಯಿದು ತೆರಳುತಿದೆ ನೋಡಿರೆ!
ಗರಿಗಳನ್ನು ಹರಹಿ ರವಿಕಿರಣದಿ ಹೊಳೆಯುತಿರೆ
ರಾಜ ಹಂಸವಿದು ಮರಳುತಿದೆ ನೋಡಿರೆ! (ಉಂಟು)

'ಸಾಗರ' ಮತ್ತು 'ನಾವೆ'ಗಳುಂಟು ಮಾಡುತ್ತಿರುವ ಬೆರಗು (ಬೆಡಗು), ಕೇಂದ್ರ ವಸ್ತುವನ್ನು ಸ್ಪಷ್ಟ ಶಿಲ್ಪದತ್ತ ಕಡೆಯುವ ಪ್ರತಿಮಾ ವಿಧಾನ ಎಲ್ಲವೂ ವಚನ ರೂಪವನ್ನು ನೆನಪಿಸುವಂಥವು. 'ಸಮುದ್ರ ಗೀತೆಗಳು' ಮಾತ್ರವಲ್ಲದೆ 'ನವ್ಯ ಕವಿತೆಗಳು' ಸಂಕಲನದಲ್ಲೂ ಅನೇಕ ಪದ್ಯಗಳು ಮುಂದಿನ ಕಾವ್ಯ ಮಾರ್ಗದ ದಿಕ್ ಸೂಚಿಗಳಾಗಿ ನಿಲ್ಲುತ್ತವೆ.

ವಿನಾಯಕರು ಈ ರೂಪದಲ್ಲೇ ಅಥವಾ ಈ ಸ್ವರದಲ್ಲೇ ತಮ್ಮ ವಸ್ತು ಮತ್ತು ಸತ್ವವನ್ನು ಅಭಿವ್ಯಕ್ತಿಸಲು ಸ್ಥಾಯಿಯಾಗಿ ದುಡಿಯಲಿಲ್ಲ. ೧೯೫೦ ರ ಅನಂತರ ಅಡಿಗರು ಈ ರೂಪವನ್ನು ತಮ್ಮ ಅಭಿವ್ಯಕ್ತಿಗೆ ಬಳಸಿಕೊಂಡರು. ವಿನಾಯಕರದು ಸದಾ ಒಂದು ಬಗೆಯ ಪ್ರಯೋಗಶೀಲತೆಯ ಮನೋಧರ್ಮ. ಕನ್ನಡ ಕಾವ್ಯ ಪರಂಪರೆಯ ಎಲ್ಲ ಛಂದೋರೂಪಗಳನ್ನು ಅವರು ಪ್ರಯೋಗ ಮಾಡಲು ಹೊರಟಿರುವುದು ಅವರ ಮುಂದಿನ ಕವನಗಳಲ್ಲಿ ಗುರುತಿಸಬಹುದು. ದ್ವಿಪದಿ, ತ್ರಿಪದಿ, ಷಟ್ಪದಿ, ಚೌಪದಿ, ಕೀರ್ತನೆ, ಚಂಪೂ—ಈ ಎಲ್ಲ ಛಂದಸ್ಸುಗಳ ಪ್ರಯೋಗವನ್ನೂ ತಮ್ಮ ಕಾವ್ಯ ಜೀವನದಲ್ಲಿ ಮಾಡಿದ್ದಾರೆ. ಇದರಿಂದಾಗಿ ಒಂದು ನಿರ್ದಿಷ್ಟ ರೂಪವೊಂದರ 'ಗಟ್ಟಿ'ಯಾಗಿ ವಿನಾಯಕರು ಉಳಿಯುವುದಿಲ್ಲ. "ಸ್ವಚ್ಛಂದ ಛಂದ"ದ ಬಗ್ಗೆ ಬರೆಯುವ ಇವರೇ "ಶಿಲಾಕನ್ಯೆ"ಗೆ ಷಟ್ಪದಿಯ ಛಂದವನ್ನು ಬಳಸುತ್ತಾರೆ; ಅವರೇ ತಿರಸ್ಕರಿಸುವ "ಷಟ್ಪದಿಯ ದೀಕ್ಷೆಯನು" ಪಡೆಯುತ್ತಾರೆ. 'ರೂಪ'ದ ದೃಷ್ಟಿಯಲ್ಲಿ ವಿನಾಯಕರು ಒಂದು ರೀತಿಯಲ್ಲಿ ರಾಘವಾಂಕನ ತೆರದವರು. ರಾಘವಾಂಕ ಷಟ್ಪದಿಯನ್ನು ಮೊದಲು ಕಾವ್ಯಕ್ಕೆ ಪ್ರಯೋಗಿಸಿದರೂ ಕುಮಾರ ವ್ಯಾಸ ಅದರ ನಿಯಂತ್ರಕನಾದಂತೆ, ನವ್ಯ ಕಾವ್ಯದ ರೂಪ ನಿರ್ಮಾಪಕರು ವಿನಾಯಕರಾದರೂ ಅದರ ಮೇಲೆ ಅಡಿಗರು ಪ್ರಭುತ್ವ ಸಾಧಿಸಿದರು.

ವಿನಾಯಕರು 'ಬಾಳ ದೇಗುಲದಲ್ಲಿ' ಕವನ ಸಂಕಲನದಲ್ಲೇ ಮಹಾ ಕಾವ್ಯ ರಚನೆಗೆ ರೂಪವೊಂದರ ಹುಡುಕಾಟದಲ್ಲಿದ್ದಂತೆ ತೋರುತ್ತದೆ. 'ಊರ್ಣನಾಭ' ಸಂಕಲನದ 'ವೈದ್ಯವಿದ್ಯಾಲಯ', 'ಇಂದಿಲ್ಲ ನಾಳೆ 'ಸಂಕಲನದ 'ಪ್ರಾಣಿ ಸಂಗ್ರಹಾಲಯ' 'ಆಭ್ಯುದಯ' ಸಂಕಲನದ ಮಾಸತಿ', 'ಬಾಳ ದೇಗುಲದಲ್ಲಿ' ಸಂಕಲನದ 'ಸಮತಾವಾದಿ'–ಇವೇ ಮೊದಲಾದ' ಕವನಗಳಲ್ಲೇ 'ಭಾರತ ಸಿಂಧುರಶ್ಮಿ'ಯ ಛಂದೋರೂಪದ

ಹೊಳಹುಗಳನ್ನು ಗುರುತಿಸಬಹುದು. ಕನ್ನಡದ ರಗಳೆ ಛಂದಸ್ಸನ್ನು ತಮ್ಮ ಮಹಾ ಕಾವ್ಯಕ್ಕೆ ತಕ್ಕಂತೆ ಬದಲಿಸಿಕೊಂಡರು. ಕನ್ನಡದ ಪ್ರಮುಖ ಕವಿಗಳಾದ ಕುವೆಂಪು, ಮಾಸ್ತಿ, ಇತ್ತೀಚೆಗೆ"ಭವ್ಯಮಾನವ" ಬರೆದ ಭೂಸನೂರಮಠ ಇವರಿಗೆಲ್ಲಾ ಸರಳ ರಗಳೆ ಕಾವ್ಯಾಭಿವ್ಯಕ್ತಿಗೆ ಮೂಲವಾದಂತೆ ವಿನಾಯಕರಿಗೂ ಅನಿವಾರ್ಯವಾದದ್ದು ಆಶ್ಚರ್ಯ ತರುತ್ತದೆ. ರಗಳೆಯ ಆದಿ-ಅಂತ್ಯ ಪ್ರಾಸವನ್ನು ನಿವಾರಿಸಿ, ಕುವೆಂಪು ಅವರು ಇಂಗ್ಲಿಷ್‌ನ 'ಬ್ಲಾಂಕ್‌ವರ್ಸ್'ನ ಜೊತೆ ಸಮನ್ವಯಗೊಳಿಸಿ, ಅದರಿಂದ ಒಂದು ಹೊಸ ಛಂದೋರೂಪವನ್ನು ಕಂಡುಕೊಂಡರು; ಸರಳ ರಗಳೆಯಿಂದಲೇ ಪ್ರೇರೇಪಿತರಾದ ವಿನಾಯಕರು ತಮ್ಮ 'ಭಾರತ ಸಿಂಧುರಶ್ಮಿ'ಯ ಛಂದಸ್ಸನ್ನು 'ಸಂಕೀರ್ಣ ಛಂದಸ್ಸು' ಎಂದು ಕರೆಯುತ್ತಾರೆ. ನವ್ಯಕಾವ್ಯದ ರೂಪವನ್ನು ಕಡೆದಿರಿಸಿದ ವಿನಾಯಕರು ಸತ್ವದ ದೃಷ್ಟಿಯಿಂದ ಸನಾತನಿಗಳಾದ್ದರಿಂದ, ತಮ್ಮ ಮಹತ್ವಪೂರ್ಣ ಮಹಾ ಕಾವ್ಯದ ಅಭಿವ್ಯಕ್ತಿಗೆ ಕಥನ-ವರ್ಣನ ರೂಪವನ್ನು ಆಶ್ರಯಿಸಬೇಕಾಯಿತು.

ನಂದೀಶ್ವರ

ಆಲಾಪ

ಬಿಡಲಾರದ ಮಳೆ
ಆಕಾಶವ ಎದೆಗವಚಿಕೊಂಡ ಮೋಡ
ತಲೆ ತಪ್ಪಿಸಿಕೊಂಡು ಕಾಣೆಯಾದ ರಾತ್ರಿ ಚುಕ್ಕಿ
ತಬ್ಬಲಿ ಮಾಡಿದ ಒಂಟಿ ಚಂದ್ರಮ
ಕೊರೆವ ಚಳಿ.

ರಾತ್ರಿ ಕೀರಲಾಗಿ ಕೂಗುವ ಜೀರುಂಡೆಗಳ ಸದ್ದು
ಇಲ್ಲೊಂದು ಹೂತು ಹೋದ ಮುಗುಳು ನಗೆ
ಹಚ್ಚ ಹಸಿರು ನಿರ್ಭರ ಮೌನ
ಗೀಳಿಡುವ ಒಂಟಿತನ

ನಿದ್ರೆ ಬಾರದ ನಡುರಾತ್ರಿಗಳು
ಎದೆ ಕಾಡುವ ಕಿರುಗೆಜ್ಜೆಯ ನಿನಾದ
ಕತ್ತಲ ಅಪ್ಪುವ ಬದುಕು
ಆಷಾಢ ಬಿಟ್ಟು ಶ್ರಾವಣ ಬಂದರೂ
ಪ್ರಿಯತಮೆ ಇಲ್ಲದ ಆಲಾಪ.

ರಂಜಾನ್ ದರ್ಗಾ

ನನ್ನ ಕಮ್ಯೂನಿಜಂ

ಅವರು ಸಾಗರ ಮಧ್ಯೆ
ನಾನಿದ್ದ ಹಡಗನ್ನು ಒಡೆದರು
ಕೊಳ್ಳೆ ಹೊಡೆದರು.

ಹೊರಗಿನವರಲ್ಲ ಆ ಕಡಲ್ಗಳ್ಳರು
ಒಳಗೇ ಬೆಳೆದವರು.

ಬಾವುಟ ಹಾರಿಸಿದವರೇ
ಹಾಕಿದರು ಆ್ಯಂಕರು
ವೀರ ಸಾಧಕರೆಲ್ಲ ವೀರ ಸಾದಕರಾದರು.

ಶತಮಾನದ ಹಿಂದೆ
ಷಿಕ್ಯಾಗೋದ ಬೀದಿಯಲ್ಲಿ
ನ್ಯಾಯಕ್ಕಾಗಿ ಹೋರಾಡಿ
ಗುಂಡಿಗಾಹುತಿಯಾದ
ಕಾರ್ಮಿಕರ ಬಟ್ಟೆಯಲ್ಲಿ
ಅವತರಿಸಿದ ಕೆಂಬಾವುಟವ
ಚಿಂದಿ ಮಾಡಿದವು ಹಂದಿಗಳು.

'ಮೂರ್ತಿ ಭಂಜಕ' ಲೆನಿನರ
ಮೂರ್ತಿಗಳನುರುಳಿಸಿದವು.

ನನಗೆ ಗೊತ್ತು
ಸಹಸ್ರಾರು ವರ್ಷಗಳಿಂದ
ಬದುಕಿರುವೆ
ಆ ಮೂರ್ತಿಗಳನುರುಳಿಸಿದವರಲ್ಲಿ
ಒಬ್ಬಾತನ ತಾತ
ಮಲಗಲು ಸ್ಥಳವಿಲ್ಲದೆ

ನೇವಾ ನದಿಯ ನಾವೆಯಲ್ಲಿ
ಮುದ್ದೆಯಾಗಿ ಬಿದ್ದು
ರಾತ್ರಿ ಕಳೆಯುತ್ತಿದ್ದ;
ಇನ್ನೊಬ್ಬನ ಅಜ್ಜಿ ಬಿಸಿ ಚಹಕ್ಕಾಗಿ
ಒಂದು ತಿಂಗಳು ಕಾದಿದ್ದಳು.

ಮತ್ತೊಬ್ಬನ ಮುತ್ತಜ್ಜ ಹದಿ ಹರೆಯದಲ್ಲೇ
ಬ್ಲಡಿ ಸಂಡೆ ಸ್ಕ್ವೆಯರ್‌ನಲ್ಲಿ
ಕ್ರಾಂತಿಯ ಕಿಡಿಯಾಗಿ ಸಿಡಿದಿದ್ದ.

ಇಂದು
ಸಮಾನತೆಯನ್ನು ಹೊತ್ತು ಸಾಗಿದ
ನನ್ನ ಹಡಗು ಒಡೆದಿದೆ.
ತೂಫಾನು ಬಂದಾಗ

ಕಪ್ತಾನನೇ ಕೈ ಕೊಟ್ಟ.
ಕಲಾಸಿಗಳೇ ಕಾಲ್ತೊಡಕಾದರು;
ಈಗ
ದೇಶೀ ತಿಮಿಂಗಲುಗಳನ್ನು
ಕೊಚ್ಚಿ ಹಾಕುತ್ತ ಮುಂದೆ ಸಾಗಿವೆ
ಜಗತ್ತಿನ ದುಕಾನುದಾರರ
ಹಡಗುಗಳು.

ಆಶ್ಚರ್ಯ
ಎಲ್ಲೆಡೆ ಸ್ವಾಗತ ಕಾದಿದೆ.
ಉಕ್ಕುತ್ತಿರುವ ಸಮುದ್ರದಲ್ಲಿ ಬಿದ್ದಿದ್ದೇನೆ;
ಭಯವಿಲ್ಲ.

ನನ್ನ ಕಮ್ಯೂನಿಜಂ ನನಗೆ ತೋರಿಸಿದೆ:
ಶಿಷ್ಯರ ಕಾಲು ತೊಳೆಯುವ ಕ್ರಿಸ್ತನನ್ನು
ಸಭಿಕರಲ್ಲಿ ಗುರುತು ಸಿಗದ ಪೈಗಂಬರನನ್ನು
ಪರೀಘರಿಗೆ ಅವಮಾನವಾದಲ್ಲಿ ಹೋಗದ
ಗೋವಿಂದ ಭಟ್ಟರನ್ನು।

ಸೂರ್ಯ: ಆರು ಕವಿತೆಗಳು

೧

ಸೂರ್ಯ ನಿತ್ಯ
ಪೂರ್ವದಲ್ಲಿ ಹುಟ್ಟುತ್ತಾನೆ.
ಪಶ್ಚಿಮದಲ್ಲಿ ಮುಳುಗುತ್ತಾನೆ;
ನಾ (ವೋ) ನೋ
ಒಮ್ಮೆ ಹುಟ್ಟಿದ್ದೇ(ವೆ)ನೆ
ಮುಳುಗಿದರೆ–
ಮತ್ತೆ ಹುಟ್ಟುವುದಿಲ್ಲ !

೨

ಸೂರ್ಯನೊಡನೆ ಮಾತಿಗೆ
ಇಳಿದರೆ
ಏನೆಲ್ಲಾ ಮಾತಾಡುತ್ತಾನೆ;
ನಾನೋ
ಎಲ್ಲರಿಗೂ ಬೆಳಕು ನೀಡುತ್ತೇನೆ, ಕಾವ್ಯ ಬರೆಸುತ್ತೇನೆ;
ಲೊಟ್ಟೆ, ನೀನು ಏನು ಇಲ್ಲ;
ನನ್ನಾಕಾರದ ಸೊನ್ನೆ ಎಂದು
ಕೆಣಕಿ–ಅಣಕಿಸುತ್ತಾನೆ ಗೋಲ ಸೂರ್ಯ !

೩

ಮಾತು ಮಾತಿಗೆ ಅವ್ವ ಅಂದಳು:
'ಉರಿದವನು ಒಂದು ದಿನ ಬೀಳುತ್ತಾನೆ'
ನಾನಂದೆ; ಹಾಗಾದರೆ
ನಿತ್ಯ ರೊಚ್ಚಿಗಿಟ್ಟುಕೊಂಡು ಉರಿಯುವ
ಸೂರ್ಯನೇಕೆ ಇದುವರೆಗೆ ಬಿದ್ದಿಲ್ಲ ?
ಅವ್ವ ಮಾತಾಡದೆ ಗದ್ದಕ್ಕೆ ಕೈ
ಇಟ್ಟು ಕೂತಳು !

೪

ಸೂರ್ಯ, ಮೊನ್ನೆ ಬೆಂಗಳೂರಲ್ಲಿ ನಡೆಯುತ್ತಿದ್ದೆ;
ನಿನ್ನ ಉರಿಗಣ್ಣಿನ ತಾಪಕ್ಕೆ
ಸಿಕ್ಕ ಜನರೆಲ್ಲಾ ಹಿಡಿಶಾಪ ಹಾಕಿ ಬೈಯುತ್ತಿದ್ದರು;
ಎಂಥ ಕೆಟ್ಟ ಜನ ?
ಆದರೆ ನನ್ನೂರ ಹಳ್ಳಿ ಮುಕ್ಕರೋ
ನೀನು ಮುಳುಗ ಕೂಡದು ಎಂದು
ಹಠ ಹಿಡಿದು ಕುಳಿತು–ಹೊಲಗಳಲ್ಲಿ
ರಂಟೆ ರಂಟೆಗೆ ಮೊಗೆ ನೀರು ಹಿಗ್ಗುತ್ತ
ಗೇಯುವುದು ಕಳೆ ಕೀಳುವುದರಲ್ಲಿ
ಮುಳುಗುತ್ತಾರೆ ಗೊತ್ತಾ ?

೫

ಸೂರ್ಯ ಮುಳುಗುವ ಮೊದಲು
ಆಕಾಶವೆಲ್ಲಾ ಕೆಂಪೋ ಕೆಂಪು.
ಆತ ಅಸ್ತಮಿಸಿದ ಮೇಲೆ
ಮನೆಗಳ ರೂಮುಗಳೆಲ್ಲಾ
ಕೆಂಪು ದೀಪಗಳ ಕೆಳಗಿನ ನಕ್ಷೆಯಲ್ಲಿ
ನರಳಾಟ, ಚೀತ್ಕಾರ ಸುಖ
ದ ತಂಪೋ ತಂಪು !

೬

ಅಕ್ಕ ಕೂದಲು ಬಿಚ್ಚಿ
ಬೆತ್ತಲೆಯಾಗಿ
ಚೆನ್ನಮಲ್ಲಿಕಾರ್ಜುನನ ನೆನೆಯುತ್ತ
ಕಲ್ಯಾಣದತ್ತ ನಡೆದಳು;
ನಾನು–
ಬಟ್ಟೆ ಬಿಚ್ಚಿ
ಸೂರ್ಯನತ್ತ ನಡೆದೆನು!

ಬೋಳುವಾರರ 'ತಟ್ಟುಚಪ್ಪಾಳೆ ಪುಟ್ಟಮಗು'

ಮಹಾಬಲೇಶ್ವರರಾವ್

'ಮಕ್ಕಳ ಪದ್ಯಗಳು' ಎಂದು ನಾವೆಲ್ಲ ಬಳಸುತ್ತಿರುವ ಪದಪುಂಜ ನಮ್ಮನ್ನು ದಾರಿ ತಪ್ಪಿಸುವಂತಿದೆ. ಮಕ್ಕಳ ಪದ್ಯಗಳೆಂದರೆ ಮಕ್ಕಳು ತಮಗಾಗಿ ಬರೆದ ಪದ್ಯಗಳೇ ? ದೊಡ್ಡವರು ಮಕ್ಕಳಿಗಾಗಿ ಬರೆದ ಪದ್ಯಗಳೇ ? ಮಕ್ಕಳನ್ನು ಕುರಿತ ಪದ್ಯಗಳೇ ? ಮಕ್ಕಳ ಪದ್ಯಗಳೆಂದರೆ ಮಕ್ಕಳನ್ನು ಕುರಿತ ಪದ್ಯಗಳೂ ಆಗಬಹುದು; ಮಕ್ಕಳಿಗಾಗಿ ದೊಡ್ಡವರು ಬರೆವ ಪದ್ಯಗಳೂ ಆಗಬಹುದು. ಕನ್ನಡದಲ್ಲಷ್ಟೆ ಏನು, ಭಾರತೀಯ ಭಾಷೆಗಳಲ್ಲಿ ಆಗುತ್ತಿರುವದು ಹೀಗೆಯೆ. ಏಕೆಂದರೆ ಮಕ್ಕಳು ತಮಗಾಗಿ ಬರೆಯಲಾರರು. ಅವರು ಹಿರಿಯರನ್ನು ಅವಲಂಬಿಸಬೇಕು. ಮಕ್ಕಳ ಕಲ್ಪನಾಲೋಕ, ಭಾಷಾಲೋಕವನ್ನು ಸಮೃದ್ಧಗೊಳಿಸಬೇಕಾದವರು ಹಿರಿಯರು ಎಂಬ ನಂಬಿಕೆ ನಮ್ಮಲ್ಲಿದೆ. ಇದಕ್ಕೆ ಪೂರಕವೆಂಬಂತೆ ಕನ್ನಡ ಭಾಷೆಯಲ್ಲಿ ಚೆನ್ನಾಗಿ ಬರೆಯುತ್ತಿರುವ ಮಕ್ಕಳು ಒಬ್ಬರೋ ಇಬ್ಬರೋ ಇದ್ದಾರು !

ಮಕ್ಕಳ ಪ್ರಪಂಚ ಹಿರಿಯರ ಪ್ರಪಂಚವಲ್ಲ. ಅದೊಂದು ಪ್ರತ್ಯೇಕ ಲೋಕ. ಈ ಲೋಕದಲ್ಲಿ ಪ್ರಾಣಿ, ಪಶುಪಕ್ಷಿಗಳು, ಬೆಟ್ಟ ಗುಡ್ಡ ನದಿಗಳು, ಚಂದ್ರ ತಾರೆ ಬಾನು, ಕಾನು, ಮೋಡ, ಗುಡುಗು, ಸಿಡಿಲು ಎಲ್ಲವೂ ಮಕ್ಕಳೊಂದಿಗೆ ಮಾತನಾಡುತ್ತವೆ. ಬಗೆಬಗೆಯ ಅನುಭವ, ಕಥೆ ಹೇಳುತ್ತವೆ. ಸುತ್ತಲಿನ ನಿಸರ್ಗ ಮಕ್ಕಳ ಕುತೂಹಲ ಕೆರಳಿಸುತ್ತದೆ; ತಣಿಸುತ್ತದೆ. ಕಲ್ಪನೆ ಅರಳಿಸುತ್ತದೆ. ಮಕ್ಕಳು ತರ್ಕಬದ್ಧವಾಗಿ ಆಲೋಚಿಸುತ್ತವೆ; ಪ್ರಶ್ನಿಸುತ್ತವೆ. ಅತಾರ್ಕಿಕವಾಗಿಯೂ ಊಹಿಸುತ್ತವೆ. ತಾವೇ ಹಾಡಾಗಿ, ಹಕ್ಕಿಯಾಗಿ ಮಾರ್ಪಡುತ್ತವೆ. ಮಕ್ಕಳ ಲೋಕದಲ್ಲಿ ಹಿರಿಯರ ಗೂಢ ಅಧ್ಯಾತ್ಮಕ್ಕೆ ಎಡೆಯಿಲ್ಲ, ಜಟಿಲ ತಾತ್ವಿಕ ಪ್ರಶ್ನೆಗಳಿಗೆ, ನೀರಸ ಜಿಜ್ಞಾಸೆಗೆ ಸ್ಥಾನವಿಲ್ಲ.

"ಸುಳ್ಳು ಹೇಳಬೇಡ" ಮುಂತಾದ ನೇರ ನೀತಿ ಬೋಧನೆಗೆ ಅವಕಾಶವಿಲ್ಲ. ನೀತಿ ಯೆಲ್ಲ ದೊಡ್ಡವರ ಗುತ್ತಿಗೆ. "ಸುಳ್ಳು ಹೇಳಬೇಡ" ಎನ್ನುವ ಅಪ್ಪ ದಿನಕ್ಕೆ ಎಷ್ಟು ಸುಳ್ಳು ಹೇಳುತ್ತಾನೆ ಎಂಬ ವಾಸ್ತವದ ಪರಿಚಯ ಮಗುವಿಗೆ ಚೆನ್ನಾಗಿರುತ್ತದಾದ್ದ ರಿಂದ ನೇರ ನೀತಿಬೋಧೆಯ ಕಥೆ, ಕವನಗಳು ಮಕ್ಕಳಿಂದ ತಿರಸ್ಕೃತವಾಗುತ್ತವೆ. ದೇವರು, ಭಾರತಮಾತೆ, ಸೌಂದರ್ಯ, ದೇಶಪ್ರೇಮ ಮುಂತಾದ ಅಮೂರ್ತ ಕಲ್ಪನೆಗಳಿಗೂ ಇದೇ ದುರ್ಗತಿ ಪ್ರಾಪ್ತವಾಗುತ್ತದೆ. ಬರೆಹಗಳು ಸಂಭಾಷಣಾ ರೂಪದಲ್ಲಿದ್ದಷ್ಟೂ ಮಕ್ಕಳಿಗೆ ಹೆಚ್ಚು ಇಷ್ಟವಾಗುತ್ತವೆ. ಮಕ್ಕಳು ತಮ್ಮನ್ನು ಒಂದಲ್ಲ ಒಂದು ಪಾತ್ರದಲ್ಲಿ ಗುರುತಿಸಿಕೊಳ್ಳಬಹುದು.

ಮಕ್ಕಳ ಬರಹಗಳಲ್ಲಿ ವ್ಯಕ್ತವಾಗುವ ಭಾವ, ವಿಚಾರ ಮಕ್ಕಳ ಗ್ರಹಿಕೆಗೆ ನಿಲುಕು ವಂತಿರಬೇಕು. ಮಕ್ಕಳ ಗ್ರಹಿಕೆಗೆ ನಿಲುಕದ ವಿಚಾರ, ಕಲ್ಪನೆ ಅದೆಷ್ಟೇ ಉದಾತ್ತ ವಾಗಿದ್ದರೂ, ಘನವಾಗಿದ್ದರೂ ಮಕ್ಕಳು ಅವನ್ನು ಸಾರಾಸಗಟಾಗಿ ನಿರಾಕರಿಸು ತ್ತಾರೆ. ಭಾವ, ವಿಚಾರ, ಕಲ್ಪನೆಯ ಜತೆಜತೆಗೆ ಬಳಸುವ ಭಾಷೆ ಆದಷ್ಟೂ ಸರಳ ವಿರಬೇಕು. ಕಿವಿಗೆ ಕರ್ಕಶವಾಗಿ ಕೇಳುವ ಸಂಯುಕ್ತಾಕ್ಷರಗಳು, ಮಹಾಪ್ರಾಣಗಳು ಆದಷ್ಟು ಕಡಿಮೆ ಇರಬೇಕು. ಪದಗಳ ಗಾತ್ರ, ವಾಕ್ಯಗಳ ಗಾತ್ರ ಚಿಕ್ಕದಿರಬೇಕು. ಮಕ್ಕಳಿಗಾಗಿ ಏನನ್ನೇ ಬರೆದರೂ ಪದಗಳ ಬಳಕೆಯ ಬಗೆಗೆ ವಿಶೇಷ ಎಚ್ಚರವಹಿಸ ಬೇಕು. ತೀರ ಕ್ಲಿಷ್ಟವಾದ, ಉಚ್ಚರಿಸಲುಬಾರದ, ಅರ್ಥಕ್ಕಾಗಿ ನಿಘಂಟು ತಡಕಾಡ ಬೇಕಾದ ಪದಗಳ ಬಳಕೆಯಿಂದ ಪ್ರಯೋಜನವಿಲ್ಲ.

ಮಕ್ಕಳ ಹಾಡುಗಳಲ್ಲಿ ಇರಬೇಕಾದ ಮೊದಲ ಗುಣ ನಾದ ಮಾಧುರ್ಯ ಅಥವಾ ಸಂಗೀತಗುಣ. ಮಕ್ಕಳಿಗಾಗಿ ಬರೆಯುವ ಯಾವುದೇ ಪದ್ಯ ಲಯಬದ್ಧವಾಗಿರ ಬೇಕು. ಎರಡು, ಮೂರು ಮಾತ್ರೆಯ ಸಹಜ ಲಯದಲ್ಲಿರಬೇಕು. ಹಾಡಲು ಅನು ಕೂಲಕರವಾಗಿರಬೇಕು. ಚಪ್ಪಾಳೆ ತಟ್ಟುತ್ತ ಕುಣಿಯಲು ಅನುಕೂಲವಾಗುವ ನೃತ್ಯಗೀತೆಗಳಾದರೆ ಮಕ್ಕಳಿಗೆ ಉತ್ತಮ ರಂಜನೆ ದೊರೆಯುತ್ತದೆ. ಆವರ್ತನ ಅಥವಾ ಪಲ್ಲವಿ ಮಕ್ಕಳ ಹಾಡುಗಳಲ್ಲಿರಬೇಕಾದ ಇನ್ನೊಂದು ಉತ್ತಮ ಗುಣ. ಪದ್ಯದ ಯಾವುದೋ ಒಂದು ಸಾಲು, ಅಭಿಪ್ರಾಯ ಮತ್ತೆ ಮತ್ತೆ ಪುನರಾವರ್ತನ ಆಗುವಂತಿದ್ದರೆ ಅಂಥ ಹಾಡುಗಳನ್ನು ಮಕ್ಕಳು ಬೇಗನೆ ಕಲಿತುಕೊಳ್ಳುವರು ಜತೆಗೆ ಆವರ್ತನ ಸಹಿತವಾದ ಹಾಡುಗಳು ಕೇಳಲು ಹಿತಕರವಾಗಿರುತ್ತವೆ.

ಮಕ್ಕಳಿಗಾಗಿ ಬರೆವ ಸಾಹಿತ್ಯ ಮಕ್ಕಳಿಗಷ್ಟೇ ಮುಖ್ಯವಲ್ಲ. ಮಕ್ಕಳ ಅಪ್ಪ ಅಮ್ಮಂದಿ ರಿಗೂ ಮುಖ್ಯವೇ. ಏಕೆಂದರೆ ಈ ಅಪ್ಪ ಅಮ್ಮಂದಿರೂ ಕೂಡ ಒಂದು ಕಾಲಕ್ಕೆ

ಮಕ್ಕಳಾಗಿದ್ದವರು ತಾನೆ? ತಾವು ಚಿಕ್ಕವರಿದ್ದಾಗ ತಮಗಾಗಿ ಎಂಥ ಸಾಹಿತ್ಯ ಸೃಷ್ಟಿಯಾಗಿತ್ತು? ತಮ್ಮ ಭಾವಕೋಶದಲ್ಲಿ ಆ ಸಾಹಿತ್ಯ ಎಷ್ಟು ಮಿಳಿತಗೊಂಡಿದೆ? ಮತ್ತು ಈಗ ತಮ್ಮ ಮಕ್ಕಳಿಗಾಗಿ ಸೃಷ್ಟಿಯಾಗುತ್ತಿರುವ ಸಾಹಿತ್ಯದ ಮಟ್ಟವೇನು ಎಂದು ತಿಳಿಯುವ ದೃಷ್ಟಿಯಿಂದ ಈ ಪ್ರಕ್ರಿಯೆ ಮಹತ್ವಪೂರ್ಣವಾದುದು.

ಈ ಹೊತ್ತು ಕನ್ನಡದಲ್ಲಿ 'ಮಕ್ಕಳ ಸಾಹಿತ್ಯ' ರಚಿಸುತ್ತಿರುವವರ ಸಂಖ್ಯೆ, ಅವರು ಹೊರತರುತ್ತಿರುವ ಕೃತಿಗಳ ಸಂಖ್ಯೆ ಸಾಕಷ್ಟು ಹೆಚ್ಚಿದೆ. ಆದರೆ ಕಾಳಿಗಿಂತ ಜಳ್ಳೇ ಹೆಚ್ಚು ಎನ್ನದೆ ವಿಧಿಯಿಲ್ಲ. ದೊಡ್ಡ ದೊಡ್ಡ ಚಿತ್ರಗಳು, ದೊಡ್ಡ ಅಕ್ಷರಗಳು, ಹಾಲು ಬಿಳಿ ಕಾಗದ ಇದ್ದ ಮಾತ್ರಕ್ಕೆ ಮಕ್ಕಳ ಸಾಹಿತ್ಯ ಆಗುವದಿಲ್ಲ. ಮಕ್ಕಳಿಗಾಗಿ ಬರೆಯುವಾಗ ಮಕ್ಕಳ ಸಂವೇದನೆಯ ಸೂಕ್ಷ್ಮ ಪರಿಚಯ ಬರಹಗಾರನಿಗೆ ಇರುವದು ಅವಶ್ಯ. ಈ ಕ್ಷೇತ್ರದಲ್ಲಿ ಗುಣಮಟ್ಟದ ದೃಷ್ಟಿಯಿಂದ ದೊಡ್ಡ ನಿರ್ವಾತ ಇದೆ. 'ತಟ್ಟು ಚಪ್ಪಾಳೆ ಪುಟ್ಟ ಮಗು' ಎಂಬ 'ಮಕ್ಕಳು ಆಯ್ದ' ನೂರಾರು ಪದ್ಯಗಳ ಸಂಕಲನದ ಮೂಲಕ ಕಥೆಗಾರ ಬೊಳುವಾರು ಮಹಮ್ಮದ್ ಕುಂಞ, ಈ ನಿರ್ವಾತವನ್ನು ತುಂಬುವ ಗಮನಾರ್ಹ ಪ್ರಯತ್ನ ಮಾಡಿದ್ದಾರೆ. ಓರ್ವ 'ಜವಾಬ್ದಾರಿಯುತ ತಂದೆಯಾಗಿ' ಬೊಳುವಾರು ಹೋಂವರ್ಕ್, ಇಂಪೊಜಿಶನ್, ಕಾಂಪೊಜಿಶನ್, ಪರೀಕ್ಷೆ, ರ್‍ಯಾಂಕುಗಳ ವಿಷವರ್ತುಲದಲ್ಲಿ ಸಿಲುಕಿ ನಲುಗುತ್ತಿರುವ ನಮ್ಮ ಮಕ್ಕಳ ಲೋಕದಲ್ಲಿ ಭರಪೂರ ಖುಶಿ ತುಂಬಿದ್ದಾರೆ.

ಮಕ್ಕಳ ಕವಿ ಹೊಯಿಸಳ ಅವರ ಪದ್ಯದ ಹೆಸರನ್ನು ಶೀರ್ಷಿಕೆಯಾಗಿ ಹೊತ್ತ 'ತಟ್ಟು ಚಪ್ಪಾಳೆ ಪುಟ್ಟ ಮಗು' ಮಕ್ಕಳ ಗೀತೆಗಳ ಸಂಕಲನ ಕನ್ನಡ ಸಾಹಿತ್ಯ ಕ್ಷೇತ್ರದಲ್ಲೊಂದು ಐತಿಹಾಸಿಕ ಮೈಲಿಗಲ್ಲು. ಮುದ್ರಣಯುಗ ಆರಂಭವಾದಂದಿಗಿಂದ ೧೯೭೫ ರ ವರೆಗೆ ಒಂದು ಶತಮಾನದ ಕಾಲಮಾನದಲ್ಲಿ ಪಠ್ಯ ಪುಸ್ತಕಗಳು, ಸಂಕಲನಗಳು, ಪತ್ರಿಕೆಗಳು ಹೀಗೆ ವಿವಿಧ ಕಡೆಗಳಲ್ಲಿ ಪ್ರಕಟವಾದ ಪದ್ಯಗಳ ರಾಶಿಯಿಂದ ಬೊಳುವಾರು ೧೧೦೬ ಪದ್ಯಗಳನ್ನು ಅತ್ಯಂತ ಶ್ರದ್ಧೆಯಿಂದ ಸಂಪಾದಿಸಿ ಕೊಟ್ಟಿದ್ದಾರೆ. ಬ್ಲರ್ಬ್‌ನಲ್ಲಿ ವಿಮರ್ಶಕ ಜಿ. ರಾಜಶೇಖರ ಅವರು ಬರೆದಿರುವ "ಮರೆವು ಮತ್ತು ಅನಾಸಕ್ತಿಗಳಿಂದ ಮೂಲೆ ಸೇರಿದ್ದ ಅನೇಕ ಉತ್ತಮ ರಚನೆಗಳು ಈ ಸಂಕಲನದಲ್ಲಿ ಮರಳಿ ಜೀವ ಪಡೆದಿವೆ" ಎನ್ನುವ ಮಾತುಗಳಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆಯಿಲ್ಲ. ನಮ್ಮ ಇಂದಿನ ಪಠ್ಯ ಪುಸ್ತಕ ನಿರ್ಮಾತೃಗಳಿಗೆ ಹಳೆಯದು ಬೇಕಾಗಿಲ್ಲ. ಹೊಸ ಹೊಸಬರು ಬರೆಯುತ್ತಿದ್ದಾರೆ, ಅವರಿಗೆಲ್ಲ ಪಠ್ಯಪುಸ್ತಕದಲ್ಲಿ ಅವಕಾಶ ಕಲ್ಪಿಸಬೇಕೆಂಬ ಇರಾದೆ ಅವರಿಗೆ. ಅವರ ಇರಾದೆಗೆ ಕುಮ್ಮಕ್ಕು ನೀಡುವ ಸ್ವಯಂ ಘೋಷಿತ ಹಿರಿ ಸಾಹಿತಿಗಳೂ ಸಾಕಷ್ಟಿದ್ದಾರೆ. ಹೀಗಿರುವಾಗ ಹಳೆಯ ಕಾಲದ ಉತ್ತಮ

ರಚನೆಗಳು ನಮ್ಮ ಈಗಿನ ಮಕ್ಕಳ ಬಾಯಲ್ಲಿ ನಲಿಯುವುದಾದರೂ ಹೇಗೆ ? ಬೋಳು ವಾರು ಈ ಎಲ್ಲ ರಚನೆಗಳ ಮೇಲೆ ಮತ್ತೆ ಬೆಳಕು ಚೆಲ್ಲಿ ನಾಡಿನ ಜನರ ಗಮನಕ್ಕೆ ತಂದಿದ್ದಾರೆ. ಪ್ರಾಣಿ ಪಕ್ಷಿ ಹಾಡು, ಆಟದ ಹಾಡು, ಅನುಕರಣಾತ್ಮಕ ಹಾಡು, ಚುಟುಕಗಳು, ನಿರರ್ಥ ಪದ್ಯಗಳು, ಕಥನ ಗೀತ ಮುಂತಾದ ವಿವಿಧ ಪ್ರಕಾರದ ಮಕ್ಕಳ ಪದ್ಯಗಳು ಈ ಸಂಕಲನದಲ್ಲಿವೆ. ಪ್ರಾಣಿ ಪಕ್ಷಿಗಳ ಬಗೆಗೇ ಹೆಚ್ಚಿನ ಪದ್ಯ ಗಳಿದ್ದು ಇತರ ವಿಷಯುಕವಾದ ಪದ್ಯಗಳು ಸ್ವಲ್ಪ ಕಡಿಮೆ ಅನ್ನಬಹುದಾದರೂ ಪದ್ಯ ಗಳ ಲಯ, ಮಾತ್ರಾಗಣ, ಹರಿವಿನಲ್ಲಿ ಸಾಕಷ್ಟು ವೈವಿಧ್ಯವಿದೆ. ಬೋಳುವಾರರ ಮಮತಾ ಪುತ್ರಿಯರಾದ ಮತಾವಜ್ (೧೨) ಮತ್ತು ಬೇನಜೀರ್ (೮) 'ಬೇಕು ಎಂದ ಪದ್ಯಗಳಿಂನಷ್ಟೇ' ಆಯ್ಕೆ ಮಾಡಿ ಸಂಕಲನ ಸಿದ್ಧಪಡಿಸಲಾಗಿದೆ. ಸಂಕಲನದ ಸಿದ್ಧತೆಯ ವೇಳೆ ಡಾ॥ ಕಾರಂತರು ಮಾರ್ಗದರ್ಶನ ಮಾಡಿರುವುದು ಮಾತ್ರವಲ್ಲದೆ ಅರ್ಥ ಪೂರ್ಣವಾದ ಮುನ್ನುಡಿಯನ್ನು ಬರೆದಿದ್ದಾರೆ. ಸ್ವತಃ ಬೋಳುವಾರರೇ ಕನ್ನಡದಲ್ಲಿ ಮಕ್ಕಳ ಪದ್ಯಗಳ ಬಗೆಗಿನ ಇತಿಹಾಸವನ್ನು ತಮ್ಮ ಅನನ್ಯ ಶೈಲಿಯಲ್ಲಿ ಚಿತ್ರಿಸಿ ದ್ದಾರೆ.

ವಯೋಮಾನದ ವಿಂಗಡನೆಗಾಗಿ 'ತಟ್ಟು ಚಪ್ಪಾಳೆ ಪುಟ್ಟ ಮಗು' ಸಂಕಲನದಲ್ಲಿ 'ಚಿಗುರು,' 'ಮುಗುಳು,' 'ಅರಳು' ಎಂಬ ಮೂರು ಭಾಗಗಳಿವೆ. ಈ ಮೂರು ಭಾಗಗಳಲ್ಲಿ ದಾಖಲಿತವಾಗಿರುವ ೧೦೬ ಪದ್ಯಗಳು ಸರ್ವಶ್ರೇಷ್ಠ ಆಯ್ಕೆ ಎನ್ನಲಾ ಗದಿದ್ದರೂ ಕನಿಷ್ಠ ಅರ್ಧಾಂಶದಷ್ಟಾದರೂ ಒಳ್ಳೆಯ ಹಾಡುಗಳು ಇಲ್ಲಿವೆ. 'ನಾಯಿಮರಿ,' 'ನಾನು ಯಾರು ?, 'ಜಾಣ ಜೇನ್ನೊಣ, 'ಕಾತ್ಯಾರಿ,' 'ನನ್ನ ಕುದುರೆ,' 'ಬಾರೆ ಹೋಗುವ ಸಾಗುವ,' 'ಬಣ್ಣದ ಹಕ್ಕಿ,' 'ಮರುಳ ಕಾಗೆ.' 'ತಿರುಕನ ಕನಸು,' 'ದಡ್ಡನ ಹಾಡು' 'ಗಿರಿಗಿಟ್ಟಿ,' 'ತಟ್ಟನೆ ಹೇಳಿರಿ,' 'ಗಡಿಯಾರ,' 'ಮಂಗಗಳ ಉಪವಾಸ,' 'ಗೋವಿನ ಚರಿತ್ರೆ,' 'ಪಂಜರದ ಹಕ್ಕಿ,' 'ಅಂಚೆಯ ಅಣ್ಣ,' ಮುಂತಾದ ಅನೇಕ ಉತ್ತಮ ಪದ್ಯಗಳನ್ನು ಈ ಸಂಕಲನದಲ್ಲಿ ಕಂಡಾಗ ಕನ್ನಡದಲ್ಲಿ ಮಕ್ಕಳ ಹಾಡುಗಳ ವಿಭಾಗ ೧೯೭೫ ಕ್ಕೆ ಮುಂಚೆ ಸಾಕಷ್ಟು ಗುಣಯುತ ವಾಗಿತ್ತು; ಉತ್ತಮ ಪರಂಪರೆ ಇತ್ತು ಎಂಬುದು ಥಟ್ಟನೆ ಓದುಗರ ಗಮನಕ್ಕೆ ಬರದಿರದು. ಜಿ. ಪಿ. ರಾಜರತ್ನಂ, ಹೊಯಿಸಳ, ಪುರಾಣಿಕ, ಮಲ್ಲಾರಿ, ಶಂ. ಗು. ಬಿರಾದಾರ, ಕಟ್ಟೀಮನಿ, ಮುಂತಾದ ಸಾಹಿತಿಗಳಿಗೆ ಸರಿದೊರೆಯಾಗಿ ದಕ್ಷಿಣ ಕನ್ನಡದಲ್ಲೂ ಸಾಕಷ್ಟು ಮಂದಿ ಮಕ್ಕಳ ಪದ್ಯಗಳನ್ನು ರಚಿಸಿದವರುಂಟು ಎಂಬು ದಕ್ಕೆ ಈ ಸಂಕಲನ ಸಾಕ್ಷಿಯಾಗಿದೆ. ಪಂಜೆಯವರ ಹೆಸರಿನ ಜೊತೆಗೆ ನಾವೆಲ್ಲ ಮರೆತಿರುವ ಲಕ್ಷ್ಮಣ ಪೈ, ತೋನ್ಸೆ ಮಂಗೇಶರಾವ್, ಮುಚ್ಚಿಮಲೆ ಶಂಕರ ನಾರಾ

ಬಾಣರಾವ್, ಹೊನ್ನಯ್ಯ ಶೆಟ್ಟಿ, ಗಿರಿ ಬಾಳೆ, ಕೆಮ್ಮಿಂಜೆ ಸುಬ್ರಾಯುಪಾಧ್ಯಾಯ, ಮುಂತಾಜೆ ರಾಮಚಂದ್ರ ಭಟ್ಟ, ಉಗ್ರಾಣ ಮಂಜೇಶ ರಾವ್ ಮುಂತಾದ ಹೆಸರುಗಳನ್ನು ಬೋಳುವಾರು ನಮಗೆ ನೆನಪಿಸಿ ಕೊಡುತ್ತಾರೆ,

ಕೆ ಎಸ್. ಶೇರೆಗಾರ್, ಜಯದೇವ, ಮೋನಪ್ಪ, ಚಂದ್ರನಾಥ್, ಜಿ. ಎಸ್. ಶೆಣೈ ಭಾಸ್ಕರರಾವ್. ಅಂದಾಸಿ ಪಿ ಜಿ. ಎಂ. ಟಿ. ವಿ ಆಚಾರ್ಯ, ಚಿ. ಸು. ಕೃಷ್ಣಶೆಟ್ಟಿ, ಕಮಲೇಶ್, ಗುಜ್ಜಾರಪ್ಪ. ಆರ್ಯ, ಎಸ್. ಕೆ. ನಾಡಿಗ್, ಪ್ರಸನ್ನ, ಮೋಹನಸೋನ, ಮನೋಹರ್, ಜಿ. ಕೆ. ಸತ್ಯ, ಶಿವರಾಮ ಕಾರಂತ, ರಾ. ಸೂರಿ, ಜಿ. ವೈ. ಹುಬ್ಳೀಕರ್ ಮುಂತಾದ ನಾಡಿನ ಹಿರಿಯ ಕಿರಿಯ ಕಲಾವಿದರು ಈ ಪುಸ್ತಕದ ಪ್ರತಿ ಪುಟದಲ್ಲೂ ಮಕ್ಕಳಿಗಾಗಿ ಚಂದದ ಚಿತ್ರಗಳನ್ನು ಬಿಡಿಸಿದ್ದಾರೆ. ಒಟ್ಟು ೪೭ ಮಂದಿ ಕಲಾವಿದರು ಪ್ರತಿಫಲಾಪೇಕ್ಷೆ ಇಲ್ಲದೆ ಈ ಕೆಲಸ ಮಾಡಿರುವುದು ಮಕ್ಕಳ ಮೇಲಿನ ಅವರ ಮಮತೆಗೆ ದ್ಯೋತಕವಾಗಿದೆ. ಪುಸ್ತಕದ ಕೊನೆಯಲ್ಲಿ ಅಕಾರಾದಿಯಾಗಿ ಹಾಡುಗಳ ಮೊದಲ ಸಾಲು, ಪುಟ ಸಂಖ್ಯೆಯನ್ನು ಮಕ್ಕಳಿಗಾಗಿ ಬರೆದವರ ಹಾಗೂ ಬರೆಯುತ್ತಿರುವವರ ಕಲಾವಿದರ ಹೆಸರು, ವಿಳಾಸಗಳನ್ನು ಕೊಡಲಾಗಿದೆ. ಈ ಸಂಕಲನದಲ್ಲಿ ಕಾರಣಾಂತರಗಳಿಂದ ಸೇರದಿರುವ ಮಕ್ಕಳಿಗೆ ಮತ್ತು ಅವರ ಹೆತ್ತವರಿಗೆ ತುಂಬ ಖುಶಿ ಕೊಟ್ಟ ಪದ್ಯಗಳನ್ನು ಬರೆದಿಡಲು ಕೊನೆಗೆ ಅನುಬಂಧದಲ್ಲಿ ೬ ಖಾಲಿ ಪುಟಗಳನ್ನು ಕೊಡಲಾಗಿದೆ. ಈ ಪುಸ್ತಕದ ಅಕ್ಷರ ವಿನ್ಯಾಸ ಆಕರ್ಷಕವಾಗಿದ್ದು ಕಂಪ್ಯೂಟರ್ ನೆರವಿನಿಂದ ವಿಶೇಷವಾಗಿ ರೂಪಿಸಿದ್ದು ಎನ್ನಲಾಗಿದೆ. ರಕ್ಷಾಪುಟ ವಿನ್ಯಾಸ ಮಾಡಿರುವ ಪಿ. ಕೆ. ಶ್ಯಾಮಸುಂದರ ರಾವ್ ವಿಶೇಷ ಅಭಿನಂದನೆಗೆ ಪಾತ್ರರಾಗಿದ್ದಾರೆ. ಏಕೆಂದರೆ ಈ ಕೃತಿಯ ಯಾವುದೇ ಪುಟ ತೆರೆದೊಡನೆಯೆ ಮಕ್ಕಳಿಗೆ ಒಂದೇ ಇಡಿ ಪದ್ಯ ಓದಲು ದೊರೆಯುತ್ತದೆ. (ನಾಲ್ಕೈದು ಸುದೀರ್ಘ ಪದ್ಯಗಳನ್ನು ಹೊರತು ಪಡಿಸಿ) ಪದ್ಯ ಪುಟದ ಮೇಲ್ಭಾಗದಲ್ಲಿ ಪದ್ಯದ ಹೆಸರು, ಕವಿಯ ಹೆಸರು ಕೆಳತುದಿಯಲ್ಲಿ ಚಿತ್ರಕಲಾವಿದರ ಹೆಸರು, ಪುಟಸಂಖ್ಯೆ, ಆಕರಗ್ರಂಥ ಹಾಗೂ ಅದು ಮುದ್ರಣಗೊಂಡ ವರ್ಷವನ್ನು ಸೂಚಿಸಲಾಗಿದೆ. ಕಥೆ, ಕಾದಂಬರಿಗಳಿಗೆ ಬೇಡಿಕೆ ಇರುವ ಈ ದಿನಗಳಲ್ಲಿ ಇಂಥ ಮಕ್ಕಳ ಪದ್ಯ ಸಂಕಲನವನ್ನು ಪ್ರಕಟಿಸಿರುವ ದಿವ್ಯಾ ಪ್ರಕಾಶನದವರನ್ನು ಎಷ್ಟು ಕೊಂಡಾಡಿದರೂ ಕಡಮೆಯೇ.

ನಮ್ಮ ವಿಶ್ವವಿದ್ಯಾನಿಲಯಗಳು, ಬಾಲ ಭವನ, ನ್ಯಾಶನಲ್ ಬುಕ್ ಟ್ರಸ್ಟ್, ಚಿಲ್ಡ್ರನ್ಸ್ ಬುಕ್ ಟ್ರಸ್ಟ್, ಸಾಹಿತ್ಯ ಪರಿಷತ್ತು, ಸಾಹಿತ್ಯ ಅಕಾದೆಮಿ, ಪ್ರಶಿಕ್ಷಕ ಪಂಡಿತರು ಮಾಡಲೇ ಬೇಕಾಗಿದ್ದ ಕೆಲಸವನ್ನು ಬೋಳುವಾರು 'ಏಕಾಂಗ ಸಾಹಸ'ದಲ್ಲಿ ಮಾಡಿರುವುದು ಶ್ಲಾಘನೀಯವಾದರೂ ಈ ಸಂಕಲನದಲ್ಲಿ ನುಸುಳಿರುವ ದೋಷಗಳ ಬಗೆಗೆ ಒಂದೆರಡು ಮಾತುಗಳನ್ನು ಬರೆಯಲೇ ಬೇಕಾಗಿದೆ.

ಪದ್ಯಗಳ ಪಟ್ಟಿಯನ್ನು, ಪದ್ಯೋದಯಕ್ಕೆ ಅನುಗುಣವಾಗಿ 'ಹೊಸ ಪ್ರತಿಭೆ' (೧೯೩೭ ರ ಪದ್ಯ) 'ಹೊಸ ಪ್ರತಿಭೆ' (೧೯೪೧ ರ ಪದ್ಯ) ಎಂಬ [illegible] ಪ್ರಕಟವಾದ ೧೯೩೭ ರ [illegible] ಪದ್ಯಗಳು ಬಂದಿವೆ. [illegible] ಕಾಲ ಕ್ರಮದಂತೆ ಜೋಡಿಸಲ್ಪಟ್ಟಿವೆ. ೧೯೫೦ ರ ನಂತರ ಎಂದರೆ ಸ್ವಾತಂತ್ರ್ಯದ ಸುತ್ತಮುತ್ತಲಿನ ಪದ್ಯಗಳು. ಮುಂದಿನ ಹಂತದ ಪದ್ಯಗಳು ೬-೭ ನೇ ದಶಕ ಹಾಗೂ ನವ್ಯೋತ್ತರ ಕಾಲದ ಪದ್ಯಗಳು (ನೋಡಿ: [illegible] [illegible], ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ಪ್ರಕಟಣೆ) ಆದರೆ ಜೋಡಣೆಯಾದರೂ ೫-೭, ೮-೧೧, ೧೧-[illegible] ವರ್ಗೀಕರಣ ಮಾಡಿರುವುದರ ಹಿನ್ನೆಲೆ ಅರ್ಥವಾಗುವುದಿಲ್ಲ.

'ಮಣ್ಣಿನ ಪರಿಸರದ ಸೊಗಡಿನ ಪದ್ಯಗಳು' ಎಂಬ ಮಾತು ಹಿಂದೆ ಸಾರಿದಂತೆ ಆಗಿದೆ. ಈ ಮಾತಿನಿಂದಾಗಿ ಕೃತಿಯ ಸಂಪಾದಕ ಜೋಡಣೆಯಾದ ಅವರನ್ನು ನೀವು ಪ್ರಶ್ನಿಸುವಂತಿಲ್ಲ! ಇದರಲ್ಲಿ ನನ್ನ ಕೈವಾಡವಿಲ್ಲ ಎಂದು ಅವರು ಹೇಳಬಹುದು! ಸ್ವತಂತ್ರ್ಯದ ಪದ್ಯಗಳನ್ನು ಕಲೆ ಹಾಕಿ ಜತೆಗೆ ಅವರೆಲ್ಲ 'ಪಾರ್ಟಿ'ಯಾಗಿ ಬರೆದ [illegible] ಹಾಗೂ [illegible] ಎಂಬುದನ್ನು ಜೋಡಣೆಯಾದರೂ ತಮ್ಮ ಮಾತಿನಲ್ಲಿ ಹೇಳಿಕೊಂಡಿದ್ದಾರೆ. ಪದ್ಯಗಳನ್ನು ೧೧ ಅಧ್ಯಾಯ ಮಾಡಲು ಕವಿಗಳ ಅಭಿಪ್ರಾಯದೊಂದು ಶಾಲೆಯನ್ನು 'ಪತ್ರ' ತೆಗೆದುಕೊಂಡು, ಅಧ್ಯಾಯದ ನಡೆ ಪದ್ಯ ಮತ್ತು ಈ ಕೆಲಸ ಮಾಡಿದ್ದರೆ ಅದ್ಭುತ ಪ್ರಾಯೋಗಿಕ ಹೆಚ್ಚು ಸ್ವಾಸ್ಥ್ಯವಿರ ಬಾಗುತ್ತಿತ್ತು: ಅರ್ಥ ಪೂರ್ಣವಾಗಿರುತ್ತಿತ್ತು: ಆದರೆ ಇದೆಲ್ಲ ಸಾಕಷ್ಟು ಸಮಯ ತೆಗೆದುಕೊಳ್ಳುವ ಕೆಲಸ. ಅಸಾಧ್ಯವಾದುದೇನಲ್ಲ. (ನಿರಂಜನರ 'ಜ್ಞಾನ ಗಂಗೋತ್ರಿ' ಸಂಪುಟಗಳು ಸಿದ್ಧವಾದ ಬಗೆ ಹೀಗೆಯೇ ಎಂಬುದನ್ನು ನಾವು ಮರೆಯಬಾರದು.) ಆದರೆ ಜೋಡಣೆಯಾದರ 'ಅವಸರ'ದ ಕಾರ್ಯ ತತ್ಪರತೆಗೆ ಈ ಕ್ರಮ ಹೊಂದಿಕೊಳ್ಳುವುದಿಲ್ಲ ಅಷ್ಟೆ.

ಕೆಲವು ಪದ್ಯಗಳು ಜೋಡಣೆಯಾದರ ವಿಭಾಗ ಕ್ರಮಕ್ಕೆ ಹೊಂದಿಕೊಳ್ಳುವುದಿಲ್ಲ. ಉದಾಹರಣೆಗೆ 'ಮಾಗಿಲು' ಭಾಗದಲ್ಲಿರುವ 'ಅಂಚೆಯ ಅಣ್ಣ,' 'ತಲೆಕಾಡು,' 'ರಂಗ ಹಿತ್ತಿಲಿನಲ್ಲಿ ಆಡು' ಮುಂತಾದ ಪದ್ಯಗಳನ್ನು 'ಚಿಗುರು' ವಿಭಾಗಕ್ಕೆ ಸೇರಿಸಬಹುದು. 'ಸಂತೆಮ್ಮ ಗ್ರಾ,' 'ಅಪ್ಪ ಹುಟ್ಟಿದ್ದ ? ಅಪ್ಪ ಹುಟ್ಟಿದ್ದ ?', 'ಅರ್ಧ ಚಂದ್ರ,' 'ಅನ್ನದಾತ,' 'ತುಟ್ಟಿ ಬಿಡ್ಡಳ ಪುಟ್ಟ ಮಗು' ಮುಂತಾದ ಪದ್ಯಗಳು ತಮ್ಮ ಭಾವನೆ, ಕಲ್ಪನೆ, ತಂತ್ರ ಭಾರದಿಂದ 'ಚಿಗುರು' ವಿಭಾಗಕ್ಕೆ ಹೊರಗೆ ಅನ್ನಿಸುತ್ತವೆ. ಇವನ್ನು ಮಾಗಿಲು ವಿಭಾಗಕ್ಕೆ ಸೇರಿಸಬಹುದು. 'ಅಟ್ಟಿ ಬಟ್ಟ' 'ಕವಿಯ ಊಟ' 'ಪಾಪಪ್ರಹೋತ್ರ'. 'ಹೂವಿನ ಜೇನಿಗೆ' ಮುಂತಾದ ಪದ್ಯಗಳನ್ನು ಬಿಟ್ಟಿದ್ದರೆ ಈ

ಮೂರು ಕವನಗಳು

೧ ಸ್ಮೃತಿ

ಹಿಂದೊಮ್ಮೆ ಇಲ್ಲಿತ್ತು
ನನ್ನದೇ ಹೆಜ್ಜೆಗಳ ಸಾಲು
ಬೆರೆತು ಹೋಗಿದೆ ಈಗ
ಕೋಟಿ ಕೋಟಿ ಹೆಜ್ಜೆಗಳ ಒತ್ತುಗಳಲಿ.

ಚಿಗುರಿ ಅರಳಿ ಗಮಗಮಿಸಿದ್ದ
ಹೂಗಿಡಗಳ ಕಂಡು ಹಕ್ಕಿಗಳ ಕೂಗಿಗೆ ಗೋಣಗಿ
ಗಮ್ಮ ಗಮ್ಮತ್ತು ಸಂಭ್ರಮಗಳ ಒಡನಾಡಿ
ಗುಂಪಲ್ಲಿ ಪ್ರತ್ಯೇಕ ವ್ಯಕ್ತಿತ್ವ ಮೆರೆಸಲು
ಹೋರಾಡಿ ಹಾರಾಡಿದ್ದೆಲ್ಲ ಗತ ಇತಿಹಾಸ.

ಮುರಿದು ಬಿದ್ದ ಜಂತಿ ಬರಿ ಪಾಯ ಉಳಿದಿರುವ
ಕನಸಿನರಮನೆಯ ಸಂಸಾರ ಸಡಗರದ ಅಳಿವಿನೊಂದಿಗೆ
ಅಲ್ಲಲ್ಲಿ ನೇಯ್ದ ಜೇಡ ಬಲೆಯಲ್ಲಿ ಬರಿ ದೂಳು.

ಜುಳು ಜುಳು ಹರಿವ ತಿಳಿ ನೀರ ವೇಗದೊಂದಿಗೆ
ಸೃಷ್ಟಿಗೊಂಡಿರಬಹುದು ಆಳಕೆಳೆದು ಜೀವ ಹೀರುವ
ನೀರ ಸೆಲೆಗಳ ಸುಳಿಗಳು !

ಬದುಕು ಭ್ರಮೆಗಳ ತಳುಕಿನಲ್ಲಿ ಪ್ರತಿ ಕ್ಷಣಗಳು
ಗತಿಸುತ್ತವೆ ತಪ್ಪು ಒಪ್ಪುಗಳ ತರ್ಕದ
ತೊಡಕಿನ ತಿರುಗಣೆಯಲ್ಲಿ.

೨ ಮಹತ್ತರ

ಗ್ರಹಣದ ಕಪ್ಪು ಬಸಿರು ಭ್ರೂಣಕ್ಕೆ
ಚೇತನ ಲಾವಾರಸ
ಕುದಿದು ಪಾಕಗೊಂಡು
ಗಟ್ಟಿಗೊಳ್ಳುತ್ತ ಹೋದಂತೆಲ್ಲ
ಅಭಿಪ್ರಾಯ ಭಿನ್ನಾಭಿಪ್ರಾಯಗಳ ಹೊಡೆತ.

ಗಾಳಿ ಗುಂಪಾಗಿ ಚೆದುರಿ
ಕಪ್ಪು ಕತ್ತಲ ಕಣ್ಣಾಗಿ
ದಿಟ್ಟಿಸಿ ನಗುವಾಗ ಬರಿ ಮೌನ.

ಮಾತಿಲ್ಲದ ಮೌನ ಸೃಷ್ಟಿಯ ಜಾಡು
ಬಿಳಿ ಮಂಜು ಬಿಸಿಲಿಗೆ ಬೆಚ್ಚಿ
ಮೈಸಡಿಲಿಸಿ ಹರಿದಾಗ
ಸಾಗರ ಸೇರುವ ಸಾರ್ಥಕ್ಯ.

ಹೆಪ್ಪು ಗಟ್ಟಿದ ಹಿಮ ಸೂರ್ಯನ
ಕಣ್ಣುಕುಕ್ಕಿ ಬೆಳ್ಳಿ ಬೆಳಕು ಹೊಳೆದಾಗ
ಒಂದರಿಂದ ಇನ್ನೊಂದಕ್ಕೆ ಮಹತ್ವದ್ದೊಂದೇ
ಫಲಬಿಟ್ಟ ಉತ್ತರ.
ಸೃಷ್ಟಿ ಕ್ರಿಯೆಯಲೆಂದೂ
ಅಡಗಿರುವದಿಲ್ಲ ಮಹತ್ವದ ಬಿತ್ತರ.

೩ ಕೋಟೆ

ನೀವು ಕಂಡಿರಾ, ನೀವು ಕಂಡಿರಾ
ಏಳು ಸುತ್ತಿನ ಕೋಟೆ
ನೀವು ಕಂಡಿರಾ, ನೀವು ಕಂಡಿರಾ ?

ಕುತೂಹಲಕೆ ಕಣ್ಣಾಗಿ
ಯಾರಿಗೂ ನೆಲೆಯಾಗದೆ ನೆಲದ ಮೇಲೆ ನಿಲ್ಲದೆ
ನೀಲಾಕಾಶದ ಚುಕ್ಕೆಯಂತೆ
ಹಾವಿನ ಹೆಡೆಯ ರತ್ನದಂತೆ
ಸಕ್ಕರೆ ಅಚ್ಚಿನ ಗೋಪುರದಂತೆ
ಕರ್ಪೂರದ ಏರು ಮೆಟ್ಟಿಲುಗಳ
ಅಣುಬಾಂಬಿನ ರಾಶಿಯಂತೆ
ನಿಗೂಢ ತುಂಬಿದ ಕಂಡರೂ ಕಾಣದ
ಸರಳ ಜಟಿಲಗಳ ಸಂಗಮವಾಗಿ.

ಮುಚ್ಚಿದ್ದರೂ ತೆರೆದಂತೆ
ತೆರೆದಿದ್ದರೂ ಮುಚ್ಚಿದಂತೆ

ಅಂತೆ ಕಂತೆಗಳ ಸರಕಾಗಿ
ಸುತ್ತಿ ಬಳಸಿ ದಾರಿ ತಪ್ಪಿಸುತ್ತಿದೆ
ಪ್ರಶ್ನೆಗಳಿಗೆ ಸರಿ ಉತ್ತರ ಸಿಗದೆ
ಬಿಸಿಲ ಝಳಕೆ ಕುಣಿವ ಮರೀಚಿಕೆ
ಈ ಕೋಟೆ ಕತ್ತಲ ಗರ್ಭದಲ್ಲಡಗಿದೆ.

ಏಳು ಸುತ್ತಿನ ಕೋಟೆ
ಮುಚ್ಚಿರಲಿ ದೂರವಿರಲಿ
ಅನಿಸಿಕೆಗಳ ಮೊತ್ತವಾಗಿ
ಒಡೆಯದ ಒಗಟಾಗಿ
ಕಗ್ಗಂಟಿನ ಕನಸಾಗಿ
ಕುತೂಹಲದ ಆಳದಲಿ ಕಾಣುವುದು ಅದರ
ಮುರಿದು ಬಿದ್ದ ಬುರುಜು.

ನಿಮ್ಮ ಎಲ್ಲ ಬಗೆಯ ಮುದ್ರಣ ಕೆಲಸಗಳಿಗಾಗಿ

ಚಂದನ ಮುದ್ರಣ

ವಿಚಾರಿಸಿರಿ

ಮಹಾಂತೇಶ ನಗರ, ಧಾರವಾಡ-೫೮೦ ೦೦೮

C/O ಸಂಕ್ರಮಣ ಪ್ರಕಾಶನ, ಧಾರವಾಡ-೮

ಫೋನು : ೪೦೫೦೯

ಮುಸ್ಲಿಂ ಸಂವೇದನೆ ಮತ್ತು ನಾನು*

ಸಾರಾ ಅಬೂಬಕ್ಕರ

ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆ ಪ್ರಾರಂಭವಾದುದು ಈ ಶತಮಾನದ ೭೦ ರ ದಶಕದಲ್ಲಿ. ಅಲ್ಲಿಯ ವರೆಗೆ ಕರ್ನಾಟಕದ ಮುಸ್ಲಿಮರು ಕನ್ನಡದಲ್ಲಿ ಮಾತನಾಡ ಬಲ್ಲರು ಎಂದೂ ಕೂಡಾ ಕನ್ನಡಿಗರು ತಿಳಿದುಕೊಂಡಂತೆ ಕಾಣುವುದಿಲ್ಲ. ಬೆಂಗಳೂರಿನ ಅಂಗಡಿಗಳಲ್ಲಿ ನನ್ನನ್ನು ಮಾತನಾಡಿಸುತ್ತಿದ್ದುದು ಉರ್ದುವಿನಲ್ಲಿ, ನನಗೆ ಉರ್ದು ಬರುವುದಿಲ್ಲವೆಂದರೆ ಒಡನೆಯೇ ಬರುತ್ತಿತ್ತು ಇನ್ನೊಂದು ಪ್ರಶ್ನೆ, "ಹಾಗಾದರೆ ನೀವು ಮುಸ್ಲಿಮರಲ್ಲವಾ ?" ರಾಜ್ಯದ ಜನಸಂಖ್ಯೆಯ ಸುಮಾರು ಕಾಲು ಭಾಗದಷ್ಟು ಜನರಿರುವ ಈ ಸಮಾಜವನ್ನು ಪ್ರತಿ ಬಿಂಬಿಸುವ ಕೃತಿಗಳು ೭೦ ರ ದಶಕದ ವರೆಗೂ ಯಾಕೆ ಕಾಣಿಸಿಕೊಳ್ಳಲಿಲ್ಲ ಎಂದು ಹೇಳುವುದಕ್ಕಾಗಿಯಷ್ಟೆ ಈ ಮಾತನ್ನೆಂದೆ. ಕನ್ನಡಿಗರಿಗೆ ಮುಸ್ಲಿಮರ ಕುರಿತು ಇದ್ದಂತಹ ಅಜ್ಞಾನ ತಾತ್ಸಾರ, ಅವರ ಬದುಕಿನ ಕುರಿತು ತಿಳಿಯಲು ಇದ್ದಂತಹ ಔದಾಸೀನ್ಯ, ನಿರಾಸಕ್ತಿ ಒಂದೆಡೆಯಾದರೆ, ಅವಿದ್ಯಾವಂತ ಮುಸ್ಲಿಮರು 'ಕನ್ನಡ ಭಾಷೆ ಕಾಫಿರರ ಭಾಷೆ' ಎಂದು ತಿಳಿದುಕೊಂಡು ತಮ್ಮ ಮಕ್ಕಳಿಗೆ ಕನ್ನಡ ಭಾಷೆ ತಿಳಿಯದಂತೆ ಬೆಳೆಸಿ ಅವರನ್ನು ದ್ವೀಪವಾಗಿಸಿದುದು ಈ ಕೊರತೆಗೆ ಇದ್ದಂತಹ ಇನ್ನೊಂದು ಪ್ರಮುಖ ಕಾರಣವಾಗಿ. ಯಾವುದೇ ರೀತಿಯ ಪ್ರೋತ್ಸಾಹ ದೊರೆಯದೆ ಇದ್ದರೆ ಯಾರೇ ಆದರೂ ಸಾಹಿತ್ಯ ಕ್ಷೇತ್ರದಲ್ಲಿ ಮಿಂಚುವುದು ಹೇಗೆ ? ಈ ಕುರಿತು ನನ್ನದೇ ಆದ ಕೆಲವು ಅನುಭವಗಳಿವೆ.

ಸುಮಾರು ೨೫ ವರ್ಷಗಳ ಹಿಂದೆ ನಾನು ಕನ್ನಡ ಪತ್ರಿಕೆಯೊಂದಕ್ಕೆ ಬರೆದು ಕಳುಹಿ

* ಶಿವಮೊಗ್ಗೆಯಲ್ಲಿ ಆಗಸ್ಟ ೨೪-೨೫, ೧೯೯೧ ರಂದು ನಡೆದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ.

ಸಿದ ಕತೆ ಹಿಂತಿರುಗಿ ಬಂತು. "ಈ ಕತೆ ಚೆನ್ನಾಗಿಲ್ಲ ಇನ್ನು ಮುಂದಕ್ಕೆ ಚೆನ್ನಾಗಿ ಬರೆದು ಕಳಿಸಿ." ಎಂದು ಸಂಪಾದಕರು ಒಂದು ವಾಕ್ಯವನ್ನಾದರೂ ಬರೆದಿದ್ದರೆ ನನಗೆ ಎಷ್ಟೋ ಉತ್ತೇಜನ ದೊರೆತಂತಾಗುತ್ತಿತ್ತು. ಅಂತಹ ಒಂದು ವಾಕ್ಯವೂ ಇಲ್ಲದೆ ಕತೆ ಹಿಂತಿರುಗಿದ್ದರಿಂದ ನನ್ನ ಆಸಕ್ತಿ ಅಲ್ಲೇ ಕಮರಿತು. ಬಹುಶಃ ಕತೆ ಬರೆಯಲು ನಾನು ನಾಲಾಯಖ್ಖಾಗಿರಬಹುದು ಎಂದು ನನ್ನನ್ನು ನಾನೇ ಸಂತೈಸಿಕೊಂಡೆ. ಮುಂದೆ ನಾಲ್ಕೈದು ವರ್ಷಗಳ ಬಳಿಕ ನಮ್ಮ ಕರಾವಳಿಯ ಪತ್ರಿಕೆಯೊಂದಕ್ಕೆ ಕಳಿಸಿದ ಕಥೆ ಹಿಂದಕ್ಕೂ ಬರದೆ ಎಲ್ಲೊ ಮಾಯವಾಯಿತು. ಮನೆಯಲ್ಲಂತೂ ನನ್ನ ಬರಹಕ್ಕೆ ಯಾವುದೇ ರೀತಿಯ ಪ್ರೋತ್ಸಾಹದ ವಾತಾವರಣವಿರಲಿಲ್ಲ. ಆದರೂ ನಾನು ಕಂಡ ದ್ದನ್ನು, ಕೇಳಿದ್ದನ್ನು ಎಲ್ಲರ ಮುಂದೆ ತೆರೆದಿಡಬೇಕು, ಬರಹದ ಮೂಲಕ ಅಭಿವ್ಯಕ್ತಿಗೊಳ್ಳಬೇಕು ಎಂಬ ನನ್ನ ಈ ಬಯಕೆ ಮಾತ್ರ ಪೂರ್ತಿ ನಾಶವಾಗಲೇ ಇಲ್ಲ. ಕೆಲವೊಮ್ಮೆ ಬರೆಯಬೇಕೆನಿಸಿ ಕಾಗದವನ್ನು ಕೊಂಡು ತರುತ್ತಿದ್ದೆ. ಅವು ಮಕ್ಕಳ ಅಭ್ಯಾಸಕ್ಕಾಗಿ ವ್ಯಯವಾಗುತ್ತಿದ್ದುವು. ಹೀಗೆ ಆದರೂ ಆ ಒಸರನ್ನು ಸಂಪೂರ್ಣ ಬತ್ತಿಸುವುದು ಯಾರಿಂದಲೂ ಸಾಧ್ಯವಾಗಲಿಲ್ಲ. ಅದು ಸಣ್ಣಗೆ ಜಿನುಗುತ್ತಲೇ ಇತ್ತು. ಬಹುಶಃ ಶ್ರೀ ಲಂಕೇಶರು ಪತ್ರಿಕೆ ಪ್ರಾರಂಭಿಸದೆ ಇದ್ದಿದ್ದರೆ, ಅಥವಾ ಅವರೂ ಕೂಡಾ, ನನ್ನ ಮೊತ್ತ ಮೊದಲ ಒಂದೆರಡು ಲೇಖನಗಳನ್ನು ಪ್ರಕಟಿಸದೆ ಇದ್ದಿದ್ದರೆ ಆ ಒರಸು ಇಷ್ಟು ಹೊತ್ತಿಗೆ ಬತ್ತಿ ಹೋಗುತ್ತಿತ್ತೊ ಏನೊ. ಇಂದಿಗೂ ನಾನು ಲೇಖಕಿ ಎಂಬ ಹೆಸರು ಪಡೆಯುತ್ತಲೂ ಇರಲಿಲ್ಲ; ಈ ರೀತಿ ನಿಮ್ಮ ಮುಂದೆ ವೇದಿಕೆಯಲ್ಲಿ ನಿಂತು ನಿಮ್ಮನ್ನು ಕೊರೆಯಲು ಅವಕಾಶ ದೊರೆಯುತ್ತಲೂ ಇರಲಿಲ್ಲ. ನನ್ನನ್ನು ಈ ಎತ್ತರಕ್ಕೇರಿಸಿದ ಶ್ರೀ ಲಂಕೇಶರಿಗೆ ನಾನು ಚಿರಋಣಿ.

ನನ್ನ ಸಮಾಜದಲ್ಲಿ ನಾನು ನಿತ್ಯವೂ ಕಾಣುತ್ತಿರುವ ನಮ್ಮ ಸಮಾಜದ ಮಹಿಳೆಯರ ಶೋಷಣೆಯ ಮೇಲೆ ಬೆಳಕು ಚೆಲ್ಲುವುದಕ್ಕಾಗಿಯಷ್ಟೆ ನಾನು ಬರೆಯ ತೊಡಗಿದೆ. ನಾನು ಇಂತಹ ವಿಷಯಗಳನ್ನೆತ್ತಿಕೊಂಡು ಬರೆಯತೊಡಗಿದರೆ ಅದರ ಪರಿಣಾಮವೇನಾಗಬಹುದು? ನಮ್ಮ ಜನರ ಪ್ರತಿಕ್ರಿಯೆ ಹೇಗಿರಬಹುದು ? ಎಂಬ ಕುರಿತು ನನ್ನ ಮನದಾಳದಲ್ಲಿ ಆತಂಕವಿದ್ದೇ ಇತ್ತು. ನಾನು ಮುಂದೆಂದೂ ಸಾಹಿತ್ಯ ಕೃತಿ ರಚಿಸದಂತೆ ಇವರು ನನ್ನ ಮೇಲೆ ಒತ್ತಡ ತರಲೂ ಬಹುದು ಎಂಬ ಶಂಕೆಯೂ ನನ್ನನ್ನು ಕಾಡುತ್ತಿತ್ತು. ಹೀಗಾಗಿಯೇ ನಾನು ಪ್ರಥಮವಾಗಿ ಬರೆದ ಎರಡೂ ಕಾದಂಬರಿಗಳು ನಮ್ಮ ಸಮಾಜದ ಸ್ತ್ರೀಯ ಶೋಷಣೆಯ ಕುರಿತ ವಸ್ತುವಾಗುಳ್ಳ ಕಾದಂಬರಿಗಳಾದುವು. 'ಚಂದ್ರಗಿರಿ ತೀರದಲ್ಲಿ' ಕಾದಂಬರಿಯ ವಸ್ತುವೇ ಪ್ರಥಮ ಆಯ್ಕೆಯಾಯಿತು.

ನಾನು ಸಾಹಿತ್ಯ ಕೃತಿ ರಚನೆಗೆ ಪ್ರಾರಂಭಿಸಿದ್ದು ಯಾವುದೇ ಪ್ರಶಸ್ತಿಗಳನ್ನಾಶಿಸಿ ಅಲ್ಲ. ನಾನು ನನ್ನ ಕತೆ, ಕಾದಂಬರಿಗಳಲ್ಲಿ ಎತ್ತುವ ಸಮಸ್ಯೆಗಳ ಕುರಿತು ಮುಸ್ಲಿ

ಮತ್ತು ಚಿಂತಿಸಬೇಕು; ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಬೇಕು ಎಂಬ ಒಂದೇ ಆಶಯ ನನ್ನದಾಗಿತ್ತು. ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಪಾತ್ರಗಳು ಅಲ್ಲೊಂದು ಇಲ್ಲೊಂದು ಕಾಣಿಸಿಕೊಂಡಿದ್ದರೂ ಅವುಗಳು ಜಟಕಾ ಸಾಬಿಯೊ, ವೇಶ್ಯೆಯೊ, ಏನೂ ಮಾರುವವನೊ ಆಗಿ ಕಾಣಿಸಿಕೊಂಡಿದ್ದರೇ ಹೊರತು ಸಾಮಾನ್ಯ ಮುಸ್ಲಿಂ ಸಮಾಜದ ನೈಜ ಚಿತ್ರಣ ಕನ್ನಡ ಸಾಹಿತ್ಯದಲ್ಲಿ ಮೂಡಿ ಬರಲೇ ಇಲ್ಲ. ಈ ಕೊರತೆಯನ್ನು ನನ್ನಿಂದಾದ ಮಟ್ಟಿಗೆ ತುಂಬುವುದೂ ಕೂಡಾ ನನ್ನ ಸಾಹಿತ್ಯ ರಚನೆಯ ಉದ್ದೇಶವಾಗಿತ್ತು. ನನ್ನ 'ಚಂದ್ರಗಿರಿ ತೀರದಲ್ಲಿ' ಕಾದಂಬರಿ ಕನ್ನಡ ಸಾಹಿತ್ಯದಲ್ಲಿ ಈ ಅನುಭವ ಹೇಳುವ ಮೊತ್ತ ಮೊದಲ ಕಾದಂಬರಿ ಎಂದು ಹೆಸರು ಪಡೆಯಿತು.

ಈ ಕಾದಂಬರಿ ಪ್ರಕಟವಾದಾಗ ನಾನು ನಿರೀಕ್ಷಿಸಿದಂತಹ ಪ್ರತಿಭಟನೆಯೇನೂ ನಮ್ಮ ಜನರಿಂದ ಬರಲಿಲ್ಲ. ಎಷ್ಟೋ ಜನ ಮುಸ್ಲಿಮರು ನನಗೆ ಪತ್ರ ಬರೆದರು. "ಹೌದು. ನಮ್ಮ ಸಮಾಜದಲ್ಲಿ ಇಂತಹದೊಂದು ಸಮಸ್ಯೆ ಇದೆ. ಇದಕ್ಕೆ ಪರಿಹಾರವೇನು ?" ಎಂದು. ಅಷ್ಟಕ್ಕೇನೆ ನನಗೆ ಬಹಳ ಸಂತೋಷವಾಯಿತು. ಯಾಕೆಂದರೆ ನಮ್ಮ ಜನರು, ನನ್ನ ಕಾದಂಬರಿಯನ್ನು ಓದಿದವರು ಚಿಂತಿಸತೊಡಗಿದರು. ಮತ್ತು ಈ ಸಮಸ್ಯೆಗೆ ಪರಿಹಾರ ಹುಡುಕತೊಡಗಿದ್ದರು. "ಕತೆಗೆ ಈ ವಸ್ತುವನ್ನು ಯಾಕೆ ಆಯ್ಕೆ ಮಾಡಿದಿರಿ ?" ಎಂದು ಕೇಳುವವರಿಗೆ ಕೂಡಾ ಕೊರತೆ ಇರಲಿಲ್ಲ. "ನೀವೂ ಕೂಡಾ ರಾಮಾ, ಕೃಷ್ಣ, ಸೀತೆಯರದೇ ಕಾದಂಬರಿ ಬರೆಯಿರಿ. ಮುಸ್ಲಿಮರ ಕುರಿತ ಕತೆ, ಕಾದಂಬರಿಗಳನ್ನು ಬರೆಯಬೇಡಿ." ಎಂದು ಸಲಹೆ ನೀಡುವವರೂ ಸಾಕಷ್ಟು ಜನರಿದ್ದರು.

ನನಗೆ ಎಲ್ಲಕ್ಕಿಂತ ನೋವಿನ ವಿಷಯವೆಂದರೆ, ಪ್ರಗತಿಪರರು, ಕ್ರಾಂತಿಕಾರಿಗಳು, ಎಡ ಒಲವುಳ್ಳವರು ಎಂದು ಗುರುತಿಸಲ್ಪಟ್ಟವರೇ ನನ್ನೊಡನೆ ವರ್ತಿಸಿದ ರೀತಿ. ನನ್ನ 'ವಜ್ರಗಳು' ಕಾದಂಬರಿಯ ಬಿಡುಗಡೆಗಾಗಿ ಬಂದ ಮುಸ್ಲಿಂ ಲೇಖಕರು ತಮ್ಮ ಭಾಷಣದಲ್ಲಿ, "ನಮ್ಮ ಕಡೆಯಲ್ಲೆಲ್ಲ ಮುಸ್ಲಿಮರಲ್ಲಿ ಇಂತಹ ಸಮಸ್ಯೆಗಳೇ ಇಲ್ಲ. ತಲಾಖ್ ಪದ್ಧತಿಯಾಗಲಿ. ಪುನರ್ವಿವಾಹ ಸಮಸ್ಯೆಯಾಗಲಿ ನಮ್ಮ ಕಡೆ ಇಲ್ಲವೇ ಇಲ್ಲ. ಇವೆಲ್ಲ ಇಲ್ಲಿ ಅಂದರೆ ಕೇರಳದ ಕಡೆಯ ಮುಸ್ಲಿಮರಲ್ಲಿ ಇರಬಹುದೇನೋ." ಎಂದು ಮೂಲಭೂತವಾದಿಗಳಂತೆ ನಮ್ಮ ಧರ್ಮ ಅತ್ಯುತ್ತಮ ಎಂದು ಸಾಬೀತು ಪಡಿಸಲು ಪ್ರಯತ್ನಿಸಿದರು. ಧರ್ಮದ ಹಲವು ನಿಯಮಗಳು ಸಮಾಜದಲ್ಲಿ ಅನುಷ್ಠಾನಗೊಳ್ಳುವಾಗ ಅವುಗಳ ಸ್ವರೂಪವೇ ಬದಲಾಗಿ ಬಿಡುತ್ತವೆ ಎಂಬುದೂ ಕೂಡಾ ಇವರಿಗೆ ಹೊಳೆವಂತೆ ಕಾಣಲಿಲ್ಲ. ಭಾರತದ ಇತರೆಡೆಗಳಲ್ಲಿ ಮುಸ್ಲಿಮರಲ್ಲಿ ತಲಾಖ್‌ನ

ಸಮಸ್ಯೆಯೇ ಇಲ್ಲವಾದರೆ ಶಾಬಾನು ಎಂಬ ಮಹಿಳೆ ನ್ಯಾಯಾಲಯಕ್ಕೆ ಹೋಗಿದ್ದಾದರೂ ಏಕೆ ? ಮುಸ್ಲಿಂ ಪುರುಷರು ಶ್ರೇಷ್ಠ ನ್ಯಾಯಾಲಯದ ತೀರ್ಪಿನ ವಿರುದ್ಧ ದಂಗೆ ಎದ್ದು ಭಾರತದ ಸಂವಿಧಾನದ ಕ್ರಿ. ಪ್ರೊ. ೧೨೫ ನೇ ವಿಧಿಯಿಂದ ಕೂಡಾ ತಮ್ಮನ್ನು ಹೊರತುಪಡಿಸಿಕೊಳ್ಳುವ ಅಗತ್ಯವೇನಿತ್ತು ? ತಲಾಖ್ ಮತ್ತು ಬಹುಪತ್ನಿತ್ವದ ಸಮಸ್ಯೆ ಮುಸ್ಲಿಂ ಮಹಿಳೆಯರು ಭಾರತದಲ್ಲಿ ಮಾತ್ರವಲ್ಲ, ಜಗತ್ತಿನಾದ್ಯಂತ ಎದುರಿಸುತ್ತಿರುವ ದೊಡ್ಡ ಸಮಸ್ಯೆ ಎಂಬುದರಲ್ಲಿ ಎರಡು ಮಾತೇ ಇಲ್ಲ. ತಲಾಖ್ ಪೀಡಿತ ಮುಸ್ಲಿಂ ಮಹಿಳೆಯರಿಗೆ ಜೀವನಾಂಶ ದೊರೆಯಬೇಕೆಂದು ನಾನು ಇದೇ ಲೇಖಕರೊಡರೆ ವಾದಿಸಿದಾಗ ಅವರು ನನಗೆ 'ಅತ್ಯುತ್ತಮ' ಸಲಹೆ ನೀಡಿದರು: "ನೀವು ಕೇಳಿದರೆ ಯಾರಾದರೂ ಹಣ ಕೊಡ್ತಾರೆ. ಆ ರೀತಿ ನಿಧಿ ಸಂಗ್ರಹಿಸಿ ತಲಾಖ್ ಪೀಡಿತ ಮಹಿಳೆಯರಿಗೆ ಒಂದೊಂದು ಹೊಲಿಗೆ ಯಂತ್ರ ಖರೀದಿಸಿ ಕೊಡಿ. ಆ ಗಂಡ ಜೀವನಾಂಶ ಕೊಡಬೇಕೆಂದು ಹೇಳಬೇಡಿ !"

ಪ್ರಗತಿಪರರು, ಶೋಷಣೆಯ ವಿರುದ್ಧ ಧ್ವನಿ ಎತ್ತುವವರು, ಕಪ್ಪು ಜನರ ಆಕ್ರಂದನಕ್ಕೆ ಧ್ವನಿ ಸೇರಿಸುವವರು ಎಂಬ ಬಿರುದನ್ನು ಹೊತ್ತ ಈ ಲೇಖಕರೂ ಕೂಡಾ ಯಾವ ರೀತಿಯ ಮುಖವಾಡ ತೊಟ್ಟವರು ಎಂದು ಹೇಳುವದಕ್ಕಾಗಿಯಷ್ಟೆ ನಾನು ಈ ಮಾತುಗಳನ್ನು ಹೇಳಿದೆ.

ನಮ್ಮೂರಿನ ಮೂಲಭೂತವಾದಿಗಳ ಮುಖವಾಣಿಯಾದ ಪತ್ರಿಕೆ ಕೂಡಾ ನನಗೆ ಕೊಟ್ಟ ಕಿರುಕುಳ ಅಷ್ಟಿಷ್ಟಲ್ಲ. ಇದನ್ನು ಸಹಿಸಲಾರದೆ ನಾನು ಇವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಬೇಕಾಯಿತು. ಆಗಲೂ ಕೂಡಾ ಬಂಡಾಯ ಸಾಹಿತಿಗಳೆಂದು ಹೆಸರು ಪಡೆದ ಲೇಖಕಿಯೊಬ್ಬರು ನನಗೆ ಸಲಹೆ ನೀಡಿದರು: "ನೀವು ಆ ಪತ್ರಿಕೆಯ ವಿರುದ್ಧ ಹಾಕಿದ ಕೇಸನ್ನು ಹಿಂತೆಗೆದುಕೊಳ್ಳಿ !"

ಇಂತಹವರೊಡನೆ ನಾನು ಕೇಳಿಕೊಳ್ಳುವದಿಷ್ಟೆ: ಅಭಿವ್ಯಕ್ತಿ ಸ್ವಾತಂತ್ರ್ಯ ನಮ್ಮ ಜನ್ಮಸಿದ್ಧ ಹಕ್ಕು. ನನ್ನ ಪ್ರಗತಿಪರ ಚಿಂತನೆಗಳನ್ನು ಹೊರಹಾಕಲು ನನಗೆಷ್ಟು ಹಕ್ಕಿದೆಯೊ, ನಿಮ್ಮ ಮೂಲಭೂತವಾದಿ ಚಿಂತನೆಗಳನ್ನು ಪ್ರಕಟಪಡಿಸಲು ನಿಮಗೂ ನನ್ನಷ್ಟೆ ಹಕ್ಕಿದೆ. ನಮ್ಮದು ವಿಭಿನ್ನ ಧೋರಣೆಗಳು. ಮೂಲಭೂತವಾದಿ ಧೋರಣೆಗೆ ಅಂಟಿಕೊಳ್ಳುವದು ಅವರವರ ಇಷ್ಟ. ಆದರೆ ಮನಸ್ಸಿನೊಳಗೆ ಒಂದು ಧೋರಣೆ ಇಟ್ಟುಕೊಂಡು, ಬೇರೆ ರೀತಿಯ ಮುಖವಾಡ ತೊಟ್ಟು ಜನರನ್ನು ವಂಚಿಸುವ ಈ ಪರಿಪಾಠವಿದೆಯಲ್ಲ, ಇದನ್ನು ದಯವಿಟ್ಟು ಕೈ ಬಿಡಿ. ನಾವು ನಮ್ಮ ಈ ಅವಕಾಯಕರಾದ, ಅಜ್ಞಾನಿಗಳಾದ ಬಡ ಜನತೆಯೊಡನೆ ಆದಷ್ಟು ಪ್ರಾಮಾಣಿಕರಾಗಿರೋಣ.

ನಮ್ಮ ಧೋರಣೆ ಏನಿದೆಯೋ ಅದನ್ನು ಧೈರ್ಯವಾಗಿ ಜನತೆಯ ಮುಂದಿಡೋಣ. ಮೂಲಭೂತವಾದಕ್ಕೆ ಅಂಟಿಕೊಳ್ಳಬೇಕೇ, ಪ್ರಗತಿಪರ ಚಿಂತನೆಗಳನ್ನು ಮೈಗೂಡಿಸಿಕೊಳ್ಳಬೇಕೆ ಎಂಬುದನ್ನು ಜನಗಳೇ ತೀರ್ಮಾನಿಸಲಿ.

ನನ್ನ ಸಾಹಿತ್ಯದಿಂದಾಗಿ ನಾನು ಮುಸ್ಲಿಮರಿಂದ ದೂರ ಸರಿದಿದ್ದೇನೆ ಎಂದು ಮುಸ್ಲಿಂ ಪತ್ರಕರ್ತರೋರ್ವರು ನನ್ನನ್ನು ಆಪಾದಿಸುತ್ತಲೇ ಬಂದಿದ್ದಾರೆ. ಇವರೂ ಪ್ರಗತಿಪರರೆಂದೇ ಕರೆಸಿಕೊಂಡವರು. ಆದರೆ ನನಗೇನೂ ನಾನು ಮುಸ್ಲಿಮರಿಂದ ದೂರ ಸರಿದಿದ್ದೇನೆ ಎಂದೆನಿಸುವುದಿಲ್ಲ. ಹಳ್ಳಿಗಳಲ್ಲಿ, ಮದುವೆ ಸಮಾರಂಭಗಳಲ್ಲಿ ನಾನು ಪಾಲ್ಗೊಳ್ಳಲು ಹೋದರೆ ಈಗಷ್ಟೆ ಅಕ್ಷರದ ಮುಖ ಕಂಡಿರುವ ಮತ್ತು ನನ್ನ ಕತೆ, ಕಾದಂಬರಿಗಳನ್ನು ಓದಿರುವ ಮುಸ್ಲಿಂ ಮಹಿಳೆಯರು ನನ್ನ ಬಳಿ ಬಂದು ತಾವಾಗಿಯೇ ನನ್ನನ್ನು ಮಾತನಾಡಿಸುತ್ತಾರೆ. ಕೊನೆಗೆ "ನಿಮ್ಮ ಲೇಖನಗಳನ್ನು ಓದುತ್ತಲೇ ಇರುತ್ತೇವೆ. ನಮಗಾಗಿ ಧ್ವನಿ ಎತ್ತಿದವರು ನಮ್ಮ ಸಮಾಜದಲ್ಲಿ ನೀವೊಬ್ಬರಾದರೂ ಇದ್ದೀರಲ್ಲ ? ಯಾರು ಏನೆಂದರೂ ಬರಹ ನಿಲ್ಲಿಸಬೇಡಿ ನಮಗಾಗಿ ಬರೆಯಿರಿ. ನಮ್ಮ ಕತೆಗಳನ್ನು ಇನ್ನಷ್ಟು ಬರೆಯಿರಿ." ಎಂದು ಹಳ್ಳಿಗಳಲ್ಲಿ ನಡೆವ ಘಟನೆಗಳನ್ನು ನನಗೆ ವಿವರಿಸುತ್ತಿದ್ದರು. ಒಬ್ಬ ಲೇಖಕಿಗೆ ಇದಕ್ಕಿಂತ ದೊಡ್ಡ ಪ್ರಶಸ್ತಿ ಬೇರೆ ಇದೆಯೆಂದು ನನಗನಿಸುವುದಿಲ್ಲ. ನಾನು 'ಅಂಕುರ' ಎಂಬ ಕತೆ ಬರೆದಾಗ ಕೊಲ್ಲಿ ರಾಷ್ಟ್ರದಿಂದ ನನಗೊಂದು ಪತ್ರ ಬಂತು. "ನಾವು ಇಲ್ಲಿರುವಾಗ ಊರಿನಲ್ಲಿ ನಮ್ಮ ಪತ್ನಿಯರು ಹೇಗೆ ಬದುಕುತ್ತಾರೆ ಎಂಬುದರ ಸಮನಾದ ಕಲ್ಪನೆ ನಮಗಿರಲಿಲ್ಲ. ನಿಮ್ಮ ಕತೆ ನಮ್ಮ ಕಣ್ಣು ತೆರೆಸಿತು ! ನಿಮಗೆ ಧನ್ಯವಾದಗಳು." ಎಂದು. ನಮ್ಮ ಕತೆ, ಕಾದಂಬರಿಗಳು ಜನರಿಗೆ ತಲಪುತ್ತಿಲ್ಲ, ಅವುಗಳಿಂದ ಸಾಮಾಜಿಕ ಬದಲಾವಣೆ ಸಾಧ್ಯವಿಲ್ಲ ಎನ್ನುವವರು ಈ ಕುರಿತು ಇನ್ನೊಮ್ಮೆ ವಿಚಾರ ಮಾಡಲಿ ಎಂದಷ್ಟೆ ಹೇಳ ಬಯಸುತ್ತೇನೆ.

ಆದರೆ ಇಂದು ಮುಸ್ಲಿಂ ಮಹಿಳೆಯರ ಪಾಡು ಏನಾಗಿದೆಯೆಂದರೆ ಮೂಲಭೂತವಾದಿಗಳ ಹಿಡಿತದಿಂದಾಗಿ ಕತೆ, ಕಾದಂಬರಿಗಳನ್ನು ಓದುವುದಕ್ಕೂ ಅವರ ಮೇಲೆ ನಿಷೇಧ ಹೇರಲಾಗುತ್ತಿದೆ. ಕತೆ, ಕಾದಂಬರಿ ಬಿಡಿ, ಕೊನೆಗೆ ವಾರಪತ್ರಿಕೆಗಳನ್ನು ಕೂಡಾ ಕದ್ದು ಓದಬೇಕಾದಂತಹ ಪರಿಸ್ಥಿತಿ ಅವರದು. ಈ ಕುರಿತು ಎಷ್ಟೊ ಹೆಣ್ಣು ಮಕ್ಕಳು ನನಗೆ ಪತ್ರ ಬರೆದಿದ್ದಾರೆ. (ಅದೂ ಕದ್ದು. ಮನೆಯವರಿಗೆ ತಿಳಿಯದಂತೆ, ಕೆಲವೊಮ್ಮೆ ಗೆಳತಿಯ ವಿಳಾಸ ಕೊಟ್ಟು). ಇದು ನಮ್ಮ ಹೆಣ್ಣು ಮಕ್ಕಳ ಪಾಡು.

ಇನ್ನು ಕೊನೆಯದಾಗಿ ನನ್ನ ಇನ್ನೊಂದು ಅನುಭವವನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಕ್ರಿಶ್ಚಿಯನ್ ಸಂಘಟನೆಯಲ್ಲಿ ಕೆಲಸ ಮಾಡುವ ಕ್ರಿಶ್ಚಿಯನ್

ಲೇಖಕಿಯೊಬ್ಬರು ನನ್ನ ಬಳಿ ಬಂದು ನನ್ನ ಜೀವನ ಚರಿತ್ರೆಯನ್ನು ತಾನು ಬರೆಯುತ್ತೇನೆಂದರು. ಸಮಾಜ ಸೇವೆಯಲ್ಲಿ ತೊಡಗಿದ ಮಹಿಳೆಯರ ಗುರುತಿಸಿ ಬರೆಯುವುದು ತನ್ನ ಗುರಿಯೆಂದೂ ಹೇಳಿದರು. ಆದರೆ ಆಕೆಗೆ ಕನ್ನಡ ಬಾರದು. ಆಕೆಗೆ ಎಲ್ಲಿಂದಲೋ ಈ ಆಜ್ಞೆ ಬಂದಿತ್ತು ಎಂಬುದು ಸ್ಪಷ್ಟ. ಆಕೆಯ ಕೆಲವು ಪ್ರಶ್ನೆಗಳಿಗೆ ನನ್ನಿಂದ ಉತ್ತರ ಬೇಕಾಗಿತ್ತು. ಹೀಗಾಗಿ ಆ ಪ್ರಶ್ನೆ ಕೇಳಿದರು. "ನಿಮಗೆ ಹಿಂದೂ ಧರ್ಮದಲ್ಲಿ ಆಸಕ್ತಿ ಮೂಡಿದ್ದು ಹೇಗೆ ? ಯಾವಾಗ ?"

ನಾನು ಅವಾಕ್ಕಾದೆ. ನನ್ನ ಲೇಖನಗಳು, ಕತೆ, ಕಾದಂಬರಿಗಳು ನನಗೆ ಹಿಂದೂ ಧರ್ಮದಲ್ಲಿ ಆಸಕ್ತಿ ಇದೆ ಎಂಬುವನ್ನು ಪ್ರತಿಪಾದಿಸುತ್ತದೆಯೆ ? ಇದು ನನಗೆ ತೀರಾ ಹೊಸ ವಿಷಯ ಮತ್ತು ನನ್ನನ್ನು ಗೊಂದಲದಲ್ಲಿ ಕೆಡಹುವಂತಹ ವಿಷಯ. ನನ್ನ ಯಾವುದೇ ಕೃತಿಗಳನ್ನು ಓದುವವರು, ನನ್ನ ಕುರಿತು ಏನೇನೂ ತಿಳಿಯದವರು ನನ್ನ ಜೀವನ ಚರಿತ್ರೆ ಬರೆಯ ಹೊರಟು ಇಂತಹ ಅಸಂಬದ್ಧ ಪ್ರಶ್ನೆ ಕೇಳತೊಡಗಿದಾಗ ನಾನು ಸಹನೆ ಕಳೆದುಕೊಳ್ಳಲಿಲ್ಲ. ಆಕೆಯೊಡನೆ ನಾನಂದೆ, "ಎಲ್ಲ ಧಾರ್ಮಿಕ ಪರಂಪರೆಗಳಲ್ಲೂ ಮಹಿಳೆಯರು ಧಾರ್ಮಿಕವಾಗಿಯೊ, ಸಾಮಾಜಿಕವಾಗಿಯೊ, ಆರ್ಥಿಕವಾಗಿಯೊ ಶೋಷಣೆಗೊಳಗಾಗುತ್ತಾರೆ. ಈ ಶೋಷಣೆಗಳ ಮೇಲೆ ಬೆಳಕು ಚೆಲ್ಲುವ ಕೆಲಸವನ್ನಷ್ಟೆ ನಾನು ಮಾಡುತ್ತಿದ್ದೇನೆ, ಹಿಂದೂ ಧರ್ಮದಲ್ಲಿ ನನಗೆ ಆಸಕ್ತಿ ಇದೆ ಎಂದು ನಿಮಗೆ ಅನಿಸಿದ್ದಾದರೂ ಹೇಗೆ ?" ಎಂದು ಕೇಳಿದೆ. ಅಲ್ಲಿಗೆ ನನ್ನ ಜೀವನ ಚರಿತ್ರೆ ಬರೆಯಬೇಕೆಂದಿದ್ದ ಆಕೆಯ ಆಸಕ್ತಿಯೂ ಕೊನೆಗೊಂಡಿತು. ಮುಸ್ಲಿಂ ಮಹಿಳೆಯೊಬ್ಬಳು ಲೇಖನಿ ಕೈಗೆತ್ತಿಕೊಂಡಾಗ, ಆಕೆಯ ಧ್ವನಿ ಹೊರಗೆ ಕೇಳಿಸತೊಡಗಿದಾಗ ಅದಕ್ಕೆ ಎಂತೆಂತಹ ಬಣ್ಣ ಬಳಿಯಲಾಗುತ್ತದೆ, ಅದರ ಪ್ರತಿಕ್ರಿಯೆಗಳು ಯಾವ್ಯಾವ ರೀತಿಯಲ್ಲಿ ಕಾಣಿಸಿಕೊಳ್ಳುತ್ತವೆ ಎಂಬುದನ್ನು ಹೇಳುವುದಕ್ಕಾಗಿಯಷ್ಟೆ ಈ ವಿಷಯವನ್ನು ನಿಮ್ಮ ಮುಂದಿಟ್ಟಿದ್ದೇನೆ. ನಿಜವಾಗಿಯೂ ಆಕೆ ನನ್ನ ಜೀವನ ಚರಿತ್ರೆ ಬರೆಯ ಹೊರಟದ್ದು ಯಾಕೆ ಎಂಬುದು ನನಗೆ ಇಂದಿಗೂ ನಿಗೂಢವಾಗಿಯೇ ಉಳಿದಿದೆ.

ಮುಸ್ಲಿಂ ಸಾಹಿತಿಗಳು ಇಂದು ತಮ್ಮ ಮೂಲಭೂತವಾದಿಗಳೊಡನೆ ಪುರುಷರೊಡನೆ ಮಾತ್ರವಲ್ಲ ಇತರರೊಡನೆಯೂ ಹೋರಾಡಬೇಕಾಗುತ್ತದೆ. ನಮ್ಮ ಬೆಳವಣಿಗೆಯನ್ನು ಸಹಿಸದವರಿಂದ ನಾವು ಮೂಲೆಗೊತ್ತರಿಸಲ್ಪಡುವುದೂ ಹೊಸ ವಿಷಯವೇನಲ್ಲ. ನನ್ನ 'ಚಂದ್ರಗಿರಿ ತೀರದಲ್ಲಿ' ಕೃತಿ ಪದವಿ ಪೂರ್ವ ತರಗತಿಗೆ ಪಠ್ಯಪುಸ್ತಕವಾಗುತ್ತದೆಂದಾಗ ಅದಾಗದಂತೆ ನೋಡಿಕೊಂಡ ಶಕ್ತಿಗಳೂ ಇದಕ್ಕೊಂದು ಉದಾಹರಣೆಯಾಗಿದೆ.

ಮುಸ್ಲಿಂ ಲೇಖಕರಿಗೆ ಅಭಿವ್ಯಕ್ತಿ ಸಮಸ್ಯೆಗಳು ಬೇಕಾದಷ್ಟಿವೆ. ನಾವು ನಮ್ಮ ಸಮಾಜದೊಡನೆ ನಮ್ಮನ್ನು ಗುರುತಿಸಿಕೊಂಡೇ ಸಾಹಿತ್ಯ ರಚಿಸಬೇಕಾಗುತ್ತದೆ. ನಾವು ಬರೆದುದನ್ನು ನಮ್ಮ ಜನರು ಓದಬೇಕು. ನಮ್ಮ ಲೇಖನಗಳು ಈ ಜನರನ್ನು ಚಿಂತನೆಗೆ ಒಡ್ಡುವಂತಿರಬೇಕು. ಆದರೆ ಇಂದಿನ ಸಂದರ್ಭದಲ್ಲಿ ಇದೇ ಒಂದು ಸಮಸ್ಯೆಯಾಗಿದೆ. ಕೊಂಚ ಪ್ರಗತಿಪರವಾಗಿ ಯಾರಾದರೂ ಬರೆದರೆ ಆತ ಮುಸ್ಲಿಮನೇ ಅಲ್ಲವೆಂದು ಸಮಾಜದಲ್ಲಿ ಅಪಪ್ರಚಾರ ಮಾಡಿಬಿಡುವುದು ಈ ಮೂಲಭೂತವಾದಿಗಳ ಒಂದು ತಂತ್ರ. ನಮ್ಮ ಈ ಅಮಾಯಕರಾದ ಜನರಿಗೆ ಅಷ್ಟೆ ಸಾಕು. ಮುಂದೆ ಆತ ಏನು ಬರೆದರೂ ಅದನ್ನು ಅವರು ತಿರುವಿಯೂ ನೋಡದೆ ತಿಪ್ಪೆಗೆಸೆದು ಬಿಡುವಂತಹ ಪರಿಸ್ಥಿತಿಯೂ ಇದೆ. ನಮ್ಮ ಸಾಹಿತ್ಯ ಈ ಜನಸಾಮಾನ್ಯರನ್ನು ತಲುಪದೆ ಇರುವಂತಹ ಪರಿಸ್ಥಿತಿಯನ್ನು ಈ ಜನರು ಸೃಷ್ಟಿಸುತ್ತಾರೆ. ಸಾಮಾಜಿಕ ಬದಲಾವಣೆಯಲ್ಲಿ ಸಾಹಿತ್ಯವೂ ಒಂದು ಪಾತ್ರ ವಹಿಸಬಹುದು ಎಂಬ ನಮ್ಮ ನಂಬಿಕೆ ಇಲ್ಲಿ ತಲೆ ಕೆಳಗಾಗುತ್ತದೆ. ಮಾತ್ರವಲ್ಲ, ಆ ಸಾಹಿತಿ ಆ ಸಮಾಜದಲ್ಲಿ ಬಹಿಷ್ಕೃತನಂತೆ ಕಾಣಲ್ಪಡುತ್ತಾನೆ.

ಹೀಗೆಲ್ಲ ಇದ್ದರೂ ನಾನು ತುಂಬಾ ಆಶಾವಾದಿಯಾಗಿದ್ದೇನೆ. ಇಂದು ನಾವು ಏನನ್ನು ಹೇಳಲು ಸಾಧ್ಯವಾಗುವುದಿಲ್ಲವೋ ಅದನ್ನು ಇನ್ನು ಐವತ್ತು ವರ್ಷಗಳ ಬಳಿಕವಾದರೂ ಹೇಳಲು ಸಾಧ್ಯವಾಗುತ್ತದೆ. ಅಷ್ಟರಮಟ್ಟಿನ ತಳಪಾಯವನ್ನು ನಮ್ಮ ಮುಸ್ಲಿಂ ಲೇಖಕರು ಹಾಕಿದ್ದಾರೆ ಎಂಬುದು ನನ್ನ ವಿಶ್ವಾಸ.

ಕೋಮು ಸೌಹಾರ್ದವನ್ನು ಕಾಪಾಡುವುದೂ ಕೂಡಾ ನನ್ನ ಬರವಣಿಗೆಯ ಉದ್ದೇಶಗಳಲ್ಲೊಂದು. ನಮ್ಮ ನೋವು ನಲಿವುಗಳನ್ನು ಪರಸ್ಪರ ಹಂಚಿಕೊಂಡಾಗ ನಮ್ಮ ನಡುವಿನ ಕಂದಕದ ಅಗಲ ಕಿರಿದಾಗಬಹುದು ಎಂಬುದು ನನ್ನ ದೂರದ ಆಸೆ. ಜಾತಿ, ಧರ್ಮಗಳು, ದೇವರುಗಳು ನಮ್ಮ ಮನೆಯೊಳಗಿರಲಿ. ಮತ್ತು ಮಸೀದಿ, ದೇವಸ್ಥಾನಗಳಿಗಷ್ಟೆ ಸೀಮಿತವಾಗಿರಲಿ. ಅವುಗಳನ್ನು ಬೀದಿಗೆ ತಂದು ಮಾತನಾಡದ ದೇವರುಗಳಿಗಾಗಿ ನಾವು ಮನುಷ್ಯರು ಪರಸ್ಪರ ಹೊಡೆದಾಡಿಕೊಂಡು ರಕ್ತ ಹರಿಸುವುದು ಬೇಡ. ಜಾತಿ ಧರ್ಮಗಳ ಸಂಕೋಲೆಯಲ್ಲಿ ನಮ್ಮನ್ನು ನಾವೇ ಬಂಧಿಸಿಕೊಂಡು ಕುಬ್ಜರಾಗಿ ನರಳುವುದು ಬೇಡ. ನಾವು ವಿಶಾಲ ಹೃದಯಿಗಳಾಗೋಣ. ದೇವರಿಗಾಗಿ ಕಾದಾಡುವುದನ್ನು ಬಿಟ್ಟು ಮನುಷ್ಯರ ಏಳಿಗೆಗಾಗಿ ಶ್ರಮಿಸೋಣ. ಕೇವಲ ಮನುಷ್ಯರಾಗಿ ಬದುಕಲು ಕಲಿಯೋಣ. ಮತ್ತು ಈ ನೆಲವನ್ನು ಮಾನವ ಜೀವಿಗಳು ಬದುಕಲು ಯೋಗ್ಯ ಸ್ಥಳವಾಗಿ ಮಾಡಲು ಪ್ರಯತ್ನಿಸೋಣ.

●

ವೇದ ಕುರಾನ ಆಚೆ :ಜ. ಹೊ. ನಾರಾಯಣಸ್ವಾಮಿ

(ಮಾನವ ಪ್ರಕಾಶನ, ಹಾಸನ, ೧೯೮೮)

ಕನ್ನಡದಲ್ಲಿ ಇತ್ತೀಚೆಗೆ ಒಂದು ಬಗೆಯ ಆಕ್ರಮಣಕಾರಿ ಬರವಣಿಗೆ ಹುಟ್ಟಿಕೊಳ್ಳುತ್ತಿದೆ. ಸತ್ಯವನ್ನು ಎತ್ತಿ ಹಿಡಿಯುವ, ಸಂಪ್ರದಾಯದ ಚೌಕಟ್ಟುಗಳನ್ನು ಒಡೆದು, ಸ್ವಚ್ಛ ಮನಸ್ಸುಗಳ ಹುಟ್ಟು ಹಾಕುವುದು ಇಂಥ ಬರವಣಿಗೆಯ ಉದ್ದೇಶ. ಜೀವ ವಿರೋಧಿಯಾದ ಸಾಮಾಜಿಕ ಒಪ್ಪಂದಗಳನ್ನು ಕತ್ತರಿಸುವ ಈ ರೀತಿಯ ಹೊಸ ಚಿಂತನೆಗಳು ಕಳೆದ ಒಂದು ದಶಕದಲ್ಲಿ ವಿಪುಲವಾಗಿ ಬಂದಿವೆ. ಇದೇ ತೆರನಾದ ದಾರಿಗೆ ಸೇರುವ ಕೃತಿ ಜ. ಹೊ. ನಾರಾಯಣಸ್ವಾಮಿಯವರ 'ವೇದ ಕುರಾನ ಆಚೆ'. ಲೇಖಕರು ತಮ್ಮ ಮೊದಲ ಮಾತಿನಲ್ಲಿ ಈ ರೀತಿ ಹೇಳಿದ್ದಾರೆ: "ದೇಶ ದೇವರು, ಧರ್ಮದ ಹೆಸರಿನಲ್ಲಿ ಮುಗ್ಧ ಹಾಗೂ ಶ್ರಮಿಕ ಜೀವಿಗಳನ್ನು ಪುರೋಹಿತಶಾಹಿ ನಿರಂತರ ಶೋಷಿಸುತ್ತದೆ. ಕಲಬೆರಕೆಯ ಕಪ್ಪು ಹಣದ ಖದೀಮರು ಪುರೋಹಿತ ಶಾಹಿಯ ಬೆನ್ನ ಹಿಂದೆ ರಕ್ಷಣೆ ಪಡೆದು ಮಾನವತೆಗೆ ಮಾರಕವಾಗಿದ್ದಾರೆ, ಇಲ್ಲಿಯ ವಿಚಾರ ಎಲ್ಲ ಜಾತಿಯತೆಗಳನ್ನು ಮೀರಿದ ಮಾನವ ದಿಗಂತದೆಡೆಗೆ ನಿಮ್ಮ ದೃಷ್ಟಿ ಸೆಳೆವ ತೋರ್ಬೆರಳಷ್ಟೆ. ಇಲ್ಲಿ ಯಾರ ನಿಂದನೆಯೂ ಇಲ್ಲ. ಬದಲಿಗೆ ಮಾನವತೆಗಾಗಿ ನಿರಂತರ ನೋವು ಅನುಭವಿಸುತ್ತಿರುವ ಹೃದಯದ ಒಳದನಿಗಳು ಇಲ್ಲಿ ದಾರಿ ಮಾಡಿಕೊಂಡಿವೆ."

ನಾರಾಯಣಸ್ವಾಮಿ ಅವರು ಹೇಳಿದಂತೆ, ಅವರ ಬರವಣಿಗೆ ಸಾಧಿಸಿದೆ ಕೂಡ. ತಮ್ಮ ಮೂಲ ನಿಲುವನ್ನು ಖಚಿತ ಪಡಿಸುವ 'ಮಾನವತೆಗಾಗಿ' ಎಂಬ ಮೊದಲ ಲೇಖನದಲ್ಲಿ ಮಂಡಿಸುತ್ತ "ದೈವದ ಕಲ್ಪನೆ ಮನುಷ್ಯನನ್ನು ಅನಾದಿಕಾಲದಿಂದಲೂ ಕಾಡುತ್ತ ಬಂದಿದೆ. ಮನುಷ್ಯನ ಚಿಂತನಾ ಶಕ್ತಿ, ಪ್ರಾರಂಭವಾದ ದಿನದಿಂದ ದೇವರು ಇದ್ದಾನೆ ಇಲ್ಲ ಎನ್ನುವ ತರ್ಕ ಅಂತರಂಗದಲ್ಲಿ: ನಂಬಿಕೆ ಮನೆ ಮಾಡಿದೆ. ಈ ನಂಬಿಕೆಗಳು ಪುರಾತನವಾದಷ್ಟೇ ಆಧುನಿಕವಾಗಿವೆ" ಈ ನಂಬಿಕೆಗಳೇ ಪುರೋಹಿತಶಾಹಿಯ ಬಂಡವಾಳ ಎನ್ನುತ್ತ 'ದೇವರು' ಪದದ ವಿವರ ನೀಡುತ್ತಾರೆ. ಈ ಮೂಲದಿಂದ ಹುಟ್ಟುವ ಪ್ರಶಂಸೆ, ಪೂಜೆ. ಆರಾಧನೆ, ಉಪಾಸನೆ ಪದಗಳ ಬುದ್ಧಿ ಮನಸ್ಸಿನ ವ್ಯಾಪಾರ, ಸ್ವರೂಪ ಕುರಿತು ಹೇಳುತ್ತ "ನಮ್ಮನ್ನು ನಾವು ಅರ್ಥ ಮಾಡಿಕೊಳ್ಳುವದರ ಮೂಲಕ ಅರಿವಿನ ಸಾಕ್ಷಾತ್ಕಾರ ಮಾಡಿಕೊಂಡ ಮೇಲೆ ಈ ಪದಗಳಿಂದ ಕಳಚಿಕೊಳ್ಳಬೇಕು." ಎನ್ನುತ್ತಾರೆ. ಮುಖ್ಯವಾಗಿ ಪುರೋಹಿತ ಶಾಹಿಯ ದಬ್ಬಾಳಿಕೆ ಕುರಿತು ಬರೆಯುವಾಗ "ಸಮಾನತೆ ಈ ದೇಶದ ಸಂಸ್ಕೃತಿ ಅಲ್ಲ"

ಎನ್ನುವ ಕಟು ಸತ್ಯವನ್ನು ಮಂಡಿಸುತ್ತ ದೇವರು, ಧರ್ಮ, ನಂಬುಗೆ, ಹಣ ಸುಲಿಗೆ ಮುಂತಾದ ನಡುವಳಿಕೆಗಳ ಚೆಂಡಾಡುತ್ತಾರೆ. ಇಂಥ ದರಿದ್ರ ನಂಬುಗೆಗಳಿಂದ ಪ್ರತಿ ರಾತ್ರಿ ವಿಶ್ವದಲ್ಲಿ ಏಳುವರೆಕೋಟಿ ಜನ ಹಸಿದ ಹೊಟ್ಟೆಯಲ್ಲಿ ಮಲಗುತ್ತಾರೆ ಎಂಬ ಅಂಕಿ ಅಂಶಗಳನ್ನು ಲೇಖಕರು ನೀಡಿದ್ದಾರೆ, ಇಂಥ ಭೀಕರ ಹಸಿವಿನ ಜ್ವಾಲಾ ಮುಖಿಯ ಮೇಲೆ ಭಾರತದಂಥ ಬಡದೇಶ ಇರುವಾಗ ಪ್ರಧಾನಿಯವರ ಶ್ರೇಯ ಸ್ಸಿಗೆ ನಾಲ್ಕುನೂರು ಬ್ರಾಹ್ಮಣರನ್ನು ಕಟ್ಟಿಕೊಂಡು ಲಕ್ಷಾಂತರ ರೂಪಾಯಿ ಹಾಳು ಮಾಡುವವನ್ನು ಕಟುವಾಗಿ ಲೇಖಕರು ಟೀಕಿಸಿರುತ್ತಾರೆ. ಇಲ್ಲಿ ಎಲ್ಲ ಕಡೆ ತಮ್ಮ ವಾದಕ್ಕೆ ಪುಷ್ಟಿಯಾಗಿ ವಿವೇಕಾನಂದರ 'ಕೃತಿ ಶ್ರೇಣಿಯನ್ನು' ಬಳಸಿಕೊಂಡಿದ್ದಾರೆ. ಅವರೆ ನಾರಾಯಣಸ್ವಾಮಿಯವರು ತಮ್ಮ ವಾದಗಳಿಗೆ ತೋರಿಸುವ ಪರಿಹಾರ ಮಾತ್ರ ಪ್ರಬಲವಾಗಿಲ್ಲ. "ಈ ದಿಕ್ಕಿಗೆ ಮೊದಲು ಆಗಬೇಕಾಗಿರುವ ಆಗತ್ಯದ ಕೆಲಸ ವೆಂದರೆ ದೇವರು ಧರ್ಮದ ಆಚರಣೆಗಳನ್ನು ಮನೆಗಷ್ಟೆ ಸೀಮಿತಗೊಳಿಸುವ ಕಡ್ಡಾಯ ಕಾಯ್ದೆ" ಎಂದಿದ್ದಾರೆ. (ಪುಟ ೧೨) ಯಾವ ವಿಚಾರವಂತನೂ ಒಪ್ಪದ ಸೂಚನೆ ಇದು. ಎರಡನೆಯ ಲೇಖನ 'ಬಹಿರಂಗ ಪತ್ರದ ಅಂತರಂಗ' ಎಂಬುದು. ಇದರಲ್ಲಿ ಲೇಖಕರು ಶೃಂಗೇರಿ ಮಠದ ಪರಮಾನಂದ ಸ್ವಾಮಿಗಳಿಗೆ ಬರೆದ ಪತ್ರ ಇದೆ. ಪಂಜಾಬಿನಲ್ಲಿ ಭಯೋತ್ಪಾದಕರ ಗುರಿ ಬ್ರಾಹ್ಮಣರೇ ಆಗಿದ್ದಾರೆ ಎನ್ನುವ ಸ್ವಾಮಿಗಳ ಮಾತಿನ ಧಾಟಿಯನ್ನು ಖಂಡಿಸಿ ಬರೆದುದು. ನಾರಾಯಣಸ್ವಾಮಿ ಅವರ ಒಟ್ಟು ವಾದ ಸಾವಿರಾರು ವರ್ಷಗಳಿಂದ ಬ್ರಾಹ್ಮಣರು ವಂಚನೆ ಮೂಲಕ ದಬ್ಬಾಳಿಕೆ ಮಾಡಿದ ಚರಿತ್ರೆಯನ್ನು ಮರೆತ, ಪರಮಾನಂದ ಸ್ವಾಮಿಗಳು ಪಂಜಾಬಿನಲ್ಲಿ ಭಯೋತ್ಪಾದಕರು ಬ್ರಾಹ್ಮಣರನ್ನು ಕೊಂದುದು ಸಮಸ್ಯೆ ಆಗುವದನ್ನು ಲೇಖಕರು ಖಂಡಿಸಿದ್ದಾರೆ. ದೇಶದಲ್ಲಿಯ ಬೆಲ್ಚಿ, ಪಿಪ್ರಾಗಳ ಉದಾಹರಣೆಗಳನ್ನು ನೀಡಿ, ಬ್ರಾಹ್ಮಣರು ಹೆಣ್ಣಿಗೆ ನೀಡುವ ಸ್ಥಾನಮಾನ ಕುರಿತು ವಾದ ತರ್ಕ ಅಚ್ಚು ಕಟ್ಟಾಗಿ ನಾರಾಯಣಸ್ವಾಮಿ ಮಂಡಿಸಿದ್ದಾರೆ.

ಕೊನೆಯ ಲೇಖನ 'ಪೆದ್ದ ಮುಹಮ್ಮದ ಪೆದ್ದತನ ಇತ್ಯಾದಿ' ಎಂಬುದು. ಕಥೆಯಲ್ಲಿ ಬರುವ ಮುಹಮ್ಮದ ಪಾತ್ರದ ವಿಶ್ಲೇಷಣೆ, ಮೂಲ ಕಥೆಯ ಅನುವಾದ ಕೂಡ ಲೇಖಕರು ಮಾಡಿದ್ದಾರೆ. ಇಲ್ಲಿ ಎಲ್ಲ ಹಂತದಲ್ಲಿ ಮಾನವತೆ ಮುಖ್ಯ ಎನ್ನುವ ಅವರ ಮೂಲ ವಾದಕ್ಕೆ ನಿಲ್ಲುತ್ತಾರೆ. 'ವೇದ ಕುರಾನ ಆಚೆ' ಎಲ್ಲರೂ ಓದ ಬೇಕಾದ ಕೃತಿ.

ಸತೀಶ ಕುಲಕರ್ಣಿ

ಬಿಕ್ಕುಗಳು: ಕುಲಶೇಖರಿ

(ಚಿನ್ಮಯಿ ಪ್ರಕಾಶನ; ಬೆಂಗಳೂರು; ೧೯೮೮)

'ಬಿಕ್ಕುಗಳು' ಕುಲಶೇಖರಿಯವರ ಮೂರನೆಯ ಕವನ ಸಂಕಲನ. ಒಟ್ಟು ೩೮ ಕವನ ಗಳನ್ನೊಳಗೊಂಡ ಇವರಲ್ಲಿ ಲೋಕವ್ಯಾಪಾರಗಳಿಗೆ ಸ್ಪಂದಿಸಿದ ಮನಸ್ಸು, ತಾನು ಅನುಭವಿಸಿದ ನೋವು-ನಿರಾಸೆಗಳಿಗೆ ರೂಪ ಕೊಡಲು ಹವಣಿಸಿದೆ. ಹೆಣ್ಣು ಈ ಜಡ ಜಗತ್ತಿನೊಂದಿಗೆ ಸ್ಪರ್ಧಿಸಲಾರದೆ ತನ್ನತನವನ್ನು ಸ್ಥಾಪಿಸಿಕೊಳ್ಳುವ ನೆಲೆಯಲ್ಲಿ, ಅಸಹಾಯಕತೆಯ ಎಳೆಯೊಂದಿಗೇ ಸೆಣಸಾಟ ನಡೆಸುವ ಛಲ—ಹೆಚ್ಚಿನೆಲ್ಲಾ ಕವನ ಗಳ ಆಶಯವಾಗಿದೆ.

ಮುಖಹೀನರೊಂದಿಗೆ ಬರಡು ಬಾಳನ್ನು ಬದುಕಬೇಕಾದ ಅನಿವಾರ್ಯತೆಗಾಗಿ ಕನಿಕರಿಸಿ ಕಡೆಗೆ:

ಕೇವಲ ಒಮ್ಮೆಯಾದರೂ
ಮುಖಾಮುಖಿಯಾಗು
ಎಂದರೆ
ಮುಖವೇ ಇಲ್ಲವೇ ನಿನಗೆ-(ಪು,೩)

ಎಂದು ಮರುಗುತ್ತಾರೆ.

ಸುಂದರ ಬದುಕಿನ ಬಗ್ಗೆ ಕೇವಲ ಕನಸು ಕಾಣಲೂ ಭಾರೀ ಬೆಲೆತೆರಬೇಕಾಗಿರುವ ಹೆಣ್ಣು ಈ ಘೋರ ಸಮಾಜದಲ್ಲಿ ಯಾವ ಸುಖ ಕಂಡಾಳು ? 'ಕಂಡ ಕನಸಿಗೆ, ತಕ್ಕ ಬೆಲೆ ತೆರಲಾರದ, ಕಡು ಬಡವಿ' (ಪು. ೭) ಎನ್ನುವಲ್ಲಿನ ಆರ್ತಭಾವ ಓದುಗರನ್ನು ಚಿಂತನೆಯ ಒರೆಗಲ್ಲಿಗೆ ಹಚ್ಚುತ್ತದೆ. 'ಸುಂದರ ದಿನದ ಬಂಗಾರದ ಬೆಳಕಿಗಾಗಿ, ಕಾದು ಕ್ಷಾಳಿತ ಹುಟ್ಟುಗುರುಡಿ ನಾನು' (ಪು. ೧೪) ಎಂಬಲ್ಲಿ ಆಶಾವಾದದ ಬೆನ್ನು ಹತ್ತಿ, ಬಾಳು ಬೆಳಕಾಗಬಹುದೆಂದು ಕಾದುನಿಂತು, ಕಡೆಗೂ ಕಾಣದ ಬೆಳಕಿಗಾಗಿ ಕಾದು ಕುಳಿತೇ ಇರುವ ಲೆಕ್ಕವಿಡದ ಸೋದರಿಯರ ಹೀನ ಸ್ಥಿತಿಗೆ ಬೆಳಕು ಚೆಲ್ಲುತ್ತಾರೆ.

ಕಲಾತ್ಮಕವೆನಿಸದಿದ್ದರೂ ಅನುಭವದ ಆವಿಷ್ಕಾರಕ್ಕೆ ನವಿರಾದ ರೂಪಕೊಟ್ಟು ರಚಿತ ಗೊಂಡಿರುವ ಮತ್ತೊಂದು ಕವಿತೆ 'ಕತ್ತಲೆಯ ಕತೆ'. 'ಸ್ತ್ರೀ' ಎಂಬ ಕವನದಲ್ಲಿ ಹೆಣ್ಣು ಬಾಡುವ ಹೂವಲ್ಲ. ಓದಿ ಮುಗಿಸಿ ಮೂಲೆಗೆಸೆವ ಪತ್ರಿಕೆಯೂ ಅಲ್ಲ ಎನ್ನುವ ಲೇಖಕಿಯ ಧೋರಣೆ ಸ್ವಾಗತಾರ್ಹ. ಆದರೆ ಮುಂದಿನ ಸಾಲುಗಳಲ್ಲಿ

'ಪರಂಪರೆಯ ಪಡಿನೆಳಲಾಗಿ ಎದ್ದು ನಿಲ್ಲುತ್ತೇನೆ' (ಪು. ೫)

ಎನ್ನುವ ಈ ಮಾತಿಗೆಅರ್ಥವೇನು ? ಈ ದ್ವಂದ್ವ, ಗೊಂದಲದಿಂದ ಕವನದ

ಒಟ್ಟು ಆಕಾರಕ್ಕೆ ಪೆಟ್ಟು ಬೀಳುತ್ತದೆ. ಇಂಥದೇ ಲೇಖಕಿಯ ಘೋಷಣೆ 'ಇದುವರೆಗೆ' ಎಂಬ ಪದ್ಯದಲ್ಲೂ ವ್ಯಕ್ತವಾಗುತ್ತದೆ.

'ಶೋಷಣೆ'ಯಂಥ ಪದ್ಯಗಳಲ್ಲಿನ ಹೊಸತನವಿಲ್ಲದ ನಿರೂಪಣೆ, 'ಕೊನೆಗೆ,' 'ಬೇಕು', 'ಇದುವರೆಗೆ' ಮುಂತಾದ ಪದ್ಯಗಳಲ್ಲಿನ ವಾಚ್ಯತೆ, 'ಓರಗೆಯುವ ಹಾಗೂ ಗುಲಾಬಿ'ಯಂಥ ಪದ್ಯದಲ್ಲಿನ ಅನಗತ್ಯ ಸಾಂಕೇತಿಕತೆ ಹಾಗೂ ದೀರ್ಘತೆಯಿಂದಾಗಿ ಲೇಖಕಿ ಸೋಲುತ್ತಾರೆ. ಈ ಹಿನ್ನೆಲೆಯಲ್ಲಿ ಮುನ್ನುಡಿಯಲ್ಲಿ ಕವಿ ಶಿವರುದ್ರಪ್ಪನವರು ಹೇಳುವ:

''ಕೇವಲ ಅನಿಸಿಕೆಗಳು ಕಾವ್ಯವಲ್ಲ, ತರ್ಕಬದ್ಧವಾದ ನಿರೂಪಣೆ ಕಾವ್ಯವಲ್ಲ, ಸಾಕಷ್ಟು ಬಿಗಿಯನ್ನು ಪಡೆದುಕೊಳ್ಳುವ ಭಾವಾಭಿವ್ಯಕ್ತಿ ಕಾವ್ಯವಲ್ಲ: ಈಗಾಗಲೇ ಅವರಿವರ ಕಾವ್ಯಗಳಲ್ಲಿ ಸಮರ್ಥವಾಗಿ ಅಭಿವ್ಯಕ್ತವಾಗಿರುವ ಭಾವ-ಭಾವನೆಗಳ ಅನುಕರಣ ಕಾವ್ಯವಲ್ಲ. ಯಾವುದೇ ಹೊಸತನವನ್ನು ಸಾಧಿಸಿಕೊಳ್ಳಲಾಗದ ಬರಹ ಕಾವ್ಯವಲ್ಲ''-ಎಂಬ ಕಿವಿಮಾತು ಗಮನಾರ್ಹ,

ಭೂಮಿಂಗೌಡ

ಕನಸುಗಳು : ನಾ.ವುಜಿರೆ

(ಸ್ವಾತೀ ಪ್ರಕಾಶನ, ಉಜಿರೆ, ೧೯೮೮)

"ಕವಿಯಾಗಲೇ ಬೇಕೆಂದು ಕವಿತೆ ಬರೆದವನಲ್ಲ...ಸಾಮಾನ್ಯ ವ್ಯಕ್ತಿಯು ಅವಕಾಶ ನೀಡಿ ಮಾಡಿದರು ಕವಿಯ, ನಾನಲ್ಲ ಜವಾಬ್ದಾರ" ಎಂದುಕೊಂಡಿರುವ ನಾವುಜಿರೆ; ಕವಿ ಹೌದು ಮತ್ತು ಕವಿತಾ ರಚನೆಯ ಜವಾಬ್ದಾರಿ ಬಲ್ಲವರು ಎಂಬುದನ್ನು ತೋರಿಸಿಕೊಡುವ ಹದಿನಾರು ಕವನಗಳ ಈ ಗುಚ್ಛದಲ್ಲಿ ವಿಸ್ತೃತ ಅಭಿರುಚಿ ಮತ್ತು ತನ್ನದಾದ ದಾರಿಯಲ್ಲಿ ಅಭಿವ್ಯಕ್ತಿಸುವ ಹಂಬಲ ಗೋಚರವಾಗುತ್ತದೆ.

"ಬಾವಿಯೇತಪ ಮರ ಸವೆದಿದೆ... ಮತ್ತೆ ಮತ್ತೆ ಸಿಮೆಂಟು ಪೂಸಿದರೂ ದೌರ್ಬಲ್ಯ ವ್ಯಕ್ತವಾಗಿದೆ" ಎನ್ನುತ್ತ ಪರಂಪರೆಯ ಬಿರುಕುಗಳನ್ನು ಶೋಧಿಸುವ ಈ ಕವಿ "ಬಾವಿಯಾಳದಿಂದ ಬುಗ್ಗೆಯೊಸರುವುದೆ" ? ಎಂದು ಪ್ರಶ್ನಿಸುತ್ತಾರೆ. "ಇದು ನಮ್ಮ ಊರಬಾವಿಯ ಶುದ್ಧನೀರು. ಇಲ್ಲಿ ನಮ್ಮ ಮತ್ತುಜ್ಞಾನಾಲದ ಮರಕೆ ನೇಣುಹಾಕಿ ನೇತಾಡಿ ಜೋತಾಡಿ...ಬಿದ್ದದ್ದು ...ಅಲ್ಲ ಇದು ಜೀರು ಬರಿಯ ನೀರು"-ಇದಂ ಕವಿ "ಊರ ಬಾವಿಯ ನೀರ"ನ್ನು ವ್ಯಾಖ್ಯಾನಿಸುವ ಮಾರ್ಮಿಕ ರೀತಿ. "ಕನ್ಯಕಾ ಪರಮೇಶ್ವರೀ ಭಕ್ತರು" "ಕಜ್ಜದ ನಾಯಿ" ಕವನಗಳಲ್ಲಿ ಆತ್ಮ ವಿಮರ್ಶೆ, ಸ್ವವಿಡಂಬನೆ ಜಾಗೃತವಾಗಿ ಕೆಲಸ ಮಾಡಿರುವುದು ಕಾಣುತ್ತದೆ.

ಪತನ–ಉತ್ಥಾನಗಳನ್ನು ಬದುಕಿನ ಸೂತ್ರ ವಿಡಂಬಿಸುವ ಮಹತ್ವಾಕಾಂಕ್ಷಿಯ ಕವನ "ಮಹಾ ಉತ್ಥಾನ" ಪುರಾಣದ ಪ್ರತಿಮೆಗಳನ್ನು ಸಶಕ್ತವಾಗಿ ಬಳಸಿಕೊಂಡಿದೆ. ಈ ಕವಿತೆ, ವಿಡಂಬನೆಗೇ ಒತ್ತು ನೀಡದಿರುತ್ತಿದ್ದರೆ, ಉತ್ತಮ ಕವನವಾಗುತ್ತಿತ್ತು.

"ಹೂವಿನಾ ಹೆಣ ಬಿದ್ದಿತ್ತು ಕಟ್ಟುವವರಾರು ಗೋರಿಯನು" (ವಿಫಲ ನಿರೀಕ್ಷೆ) ಎಂದು ನಮ್ಮ ಬದುಕಿನ ಕಠೋರತೆಯನ್ನು ಗಮನಿಸುವ ಕವಿ,

ಅಪ್ಪ ನಿತ್ಯ ಹೆಂಡದಂಗಡಿ ಗಿರಾಕಿಯಾದರೂ
ನಂದಿನಿ ಹಾಲು ಕೇಂದ್ರವ ಕಂಡಿಲ್ಲ
ಮಾವನಿಗೆ ನಿತ್ಯ ಬೇಕಪ್ಪ ಬ್ರಾಂಡ್ ಗಣೇಶನ ಬೀಡಿ
ಯಾದರೂ ಅಳಿಯನಿಗೆ ಅಮುಲ್ ಚಾಕಲೇಟ್ ತಂದಿಲ್ಲ

ಎಂದು ಬರಿ ಪರಿತಾಪ ಪಡದೆ,

ಕನಸುಗಳ ನಿರ್ದಯದಿ ಹಿಚುಕುವ ಸದ್ದು. "ಕಂಡಾಗ ಗುದ್ದು ಗುದ್ದಿ ಗುದ್ದಿ ಅವರಿಗೆ, ಸಾಯಬೇಕೆನಿಸುತ್ತದೆ ನನಗೆ" ಅನ್ನುವಾಗ ಇದು ಬರಿಯ ಭಾಷೆಯ ಕಸರತ್ತಾಗದೆ, ನೈಜ ಕವಿತ್ವದ ಸಂವೇದನೆಯ ತಿರುವು ಅನಿಸುತ್ತದೆ.

ಭಾಷೆಯ ಒಳ್ಳೆಯ ಹಿಡಿತ, ಹಿಂದಿನ ಕಾವ್ಯದ ಅಭ್ಯಾಸ ಇರುವ ಈ ಕವಿ, ಭಾಷೆಯನ್ನು ಬಲಿಷ್ಠವಾಗಿ ಬಳಸ ಬಲ್ಲರು. ಆದರೆ, ಈ ಕವಿ ಸ್ವಲ್ಪ ವಾಚಾಳಿ, ವಿಡಂಬನ ಪ್ರಧಾನ ಪ್ರಬಂಧದ ಪಾತಳಿಯಿಂದ ಕವಿತ್ವದತ್ತ ಸಾಗುವವರು ಅನಿಸದಿರುವುದಿಲ್ಲ. ಈ ಮಿತಿಯನ್ನು ಮೀರಿ, ಬದುಕಿನ ಗ್ರಹಿಕೆಯನ್ನು ಕೇವಲ ವ್ಯಂಗ್ಯ ದೃಷ್ಟಿಯಿಂದ ನೋಡದೆ, ಗಂಭೀರಗೊಳಿಸಿದರೆ ಉತ್ಕೃಷ್ಟ ರಚನೆಗಳನ್ನು ನೀಡಬಲ್ಲರು.

ಪ್ರಭಾಕರ ಜೋಶಿ

ಸಾಹಿತ್ಯ ಮತ್ತು ಮಹಿಳೆ: ವಿಜಯಶ್ರೀ ಸಬರದ

(ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು, ೧೯೮೯)

'ಅಡುಗೆ ಮನೆ ಸಾಹಿತ್ಯ"ವೆಂಬ ಮೂದಲಿಕೆಗೆ ಗುರಿಯಾದ ಮಹಿಳಾ ಸಾಹಿತ್ಯ ಇಂದು ಕೆಲವು ಸಮರ್ಥ ಮಹಿಳಾ ಸಾಹಿತಿಗಳಿಂದ ನಾನಾ ಮಜಲುಗಳಲ್ಲಿ ಸಮೃದ್ಧವಾಗಿ ಬೆಳವಣಿಗೆಯಾಗುತ್ತಿದ್ದರೂ ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ ಮಹತ್ತ್ವ ಪ್ರಗತಿ ಸಾಧಿಸದೇ ಇರುವುದು ವಿಷಾದಕರ ಸಂಗತಿಯಾಗಿದೆ. ಅದರಲ್ಲೂ ಪ್ರಗತಿಪರ ನೆಲಗಟ್ಟಿನಲ್ಲಿ ನಿಂತು ವಿಶ್ಲೇಷಣೆ ಮಾಡುವವರು ಇಲ್ಲವೇ ಇಲ್ಲ. ಆದರೆ ಅದಕ್ಕೆ ಅಪವಾದವಾಗಿದೆ ವಿಜಯಶ್ರೀ ಸಬರದ ಅವರ "ಸಾಹಿತ್ಯ ಮತ್ತು ಮಹಿಳೆ" ಪುಸ್ತಕ. ಈ ಕಿರು ಹೊತ್ತಿಗೆಯಲ್ಲಿ ಮಹಿಳೆಗೆ ಸಂಬಂಧಪಟ್ಟ ಏಳು ವಿಮರ್ಶಾ ಲೇಖನಗಳಿವೆ.

ಮೊದಲ ಪ್ರಬಂಧ "ಸಾಹಿತ್ಯ-ಧರ್ಮ, ಅಸ್ಪೃಶ್ಯತೆ ಮತ್ತು ಮಹಿಳೆ" ವಿಶಾಲ ಹರಹುಳ್ಳ ವಸ್ತುವಿನಿಂದ ಕೂಡಿದ ಲೇಖನ. ಇತಿಹಾಸ ಕಾಲದಲ್ಲಿ ಮಹಿಳೆಗೆ ಸಾಹಿತ್ಯ ಚಟುವಟಿಕೆಯಲ್ಲಿ ಹೆಚ್ಚಿನ ಅವಕಾಶ ಕೊಡದಿದ್ದರೂ ವಚನ ಸಾಹಿತ್ಯ ಕಾಲದಲ್ಲಿ ಕೆಲಮಟ್ಟಿಗೆ ಹೆಣ್ಣಿಗೆ ಅವಕಾಶ ದೊರಕಿತ್ತು. ಜನಪದ ಸಾಹಿತ್ಯದಲ್ಲಿ ತಾನುಂಡ ನೋವು-ನಲಿವುಗಳನ್ನು ಹೊರಗೆ ಕಕ್ಕಿ ಸಮಾಜವನ್ನು ಎಚ್ಚರಿಸಿದ ದಿಟ್ಟ ಚಿತ್ರಣ ಜನಪದ ಮಹಿಳಾ ಸಾಹಿತಿಗಳು ನೀಡಿದ್ದಾರೆ. ಅವಕಾಶ-ಅನುಕೂಲ ವಾತಾವರಣ ದೊರೆತರೆ ಅಡುಗೆ ಕೋಣೆಯಿಂದ ಹೊರಬಂದು ಎಲ್ಲಾ ರಂಗದಲ್ಲೂ ಮಹಿಳೆ ಬೆಳೆಯಬಲ್ಲಳೆಂಬುದನ್ನು ಲೇಖಕಿ ಸಾಬೀತು ಪಡಿಸುತ್ತಾರೆ.

ಹಾಗೆಯೇ ಧರ್ಮದ ಹೆಸರಿನಲ್ಲಿ ಮಹಿಳೆ ಶೋಷಿಸಲ್ಪಟ್ಟಿದ್ದಾಳೆ. ಎಲ್ಲಾ ಧರ್ಮಗಳೂ, ರಾಷ್ಟ್ರೀಯ-ಅಂತರರಾಷ್ಟ್ರೀಯ ಮಹಾ ಪುರುಷರೆಲ್ಲಾ ಹೆಣ್ಣನ್ನು ಮಾಯೆ, ರಾಕ್ಷಸಿ-ಕ್ಷುಲ್ಲಕಳು-ಪಾಪಿಷ್ಠಳು-ಅಯೋಗ್ಯಳೆಂದು ಜರಿದು ಧರ್ಮದ ಅಮಲಿನಲ್ಲಿ ನಾಲಿಗೆ ಹರಿದು ಬಿಟ್ಟಿದ್ದಾರೆ. ಜಾತಿ ಮತ್ತು ಲಿಂಗ ಅಸ್ಪೃಶ್ಯತೆಯಿಂದ ಹೆಣ್ಣು ನೊಂದು ಬೆಂದಿದ್ದಾಳೆ. ಹೀಗಾಗಬಾರದು. ಯಜಮಾನ ಸಂಸ್ಕೃತಿಗೆ ಇತಿಶ್ರೀ ಹಾಡಿ ಸಕಲರಿಗೂ ಸಮಾನ ಅವಕಾಶವಿರುವ "ಸಮಸಂಸ್ಕೃತಿ"ಯತ್ತ ನಾವಿಂದು ಬೆಳೆಯಬೇಕೆಂದು ಲೇಖಕಿ ಮತ್ತೆ ಮತ್ತೆ ಜ್ಞಾಪಿಸುತ್ತಾರೆ.

"ಹರಿಶ್ಚಂದ್ರ ಕಾವ್ಯದ ಹೊಲತಿಯರು" : ಲೇಖಕಿಯ ಚಿಂತನೆಯ ಪಕ್ವಫಲ ಇದರಲ್ಲಿದೆ. ವಿಶ್ವಾಮಿತ್ರನನ್ನು ವೈದಿಕ ಬುದ್ಧಿಯ ಪ್ರತಿನಿಧಿ ಎಂದು ಗುರ್ತಿಸಿ ಹೊಲತಿಯರ ಹುಟ್ಟಿನ ಬಗ್ಗೆ ಅವರ ಊಹಾತೀತ ತರ್ಕಬುದ್ಧಿ ಸಂಶೋಧಕರಿಗೊಂದು ಹೊಸ ವಿಷಯವನ್ನು ಹುಟ್ಟು ಹಾಕಿಕೊಟ್ಟಿದೆ.

ಹನ್ನೆರಡನೆಯ ಶತಮಾನದ ಶೂದ್ರ ವಚನ ಕಾರ್ತಿಯರ ಪರಿಚಯ ಹಾಗೂ ಅವರ ವಚನಗಳಲ್ಲಿ ಬರುವ ವಿಡಂಬನೆ-ಪ್ರತಿಮೆ, ಸಂಕೇತ, ಸಾಮಾಜಿಕ ಪ್ರಜ್ಞೆ, ಭಾಷೆ

ಗಳನ್ನು ಅವರವರ ವಚನಗಳ ಮೂಲಕ ಸಮರ್ಥಿಸಿದ್ದಾರೆ. ಅಭಿವ್ಯಕ್ತಿ ಅಕ್ಕನ ವಚನವನ್ನು ಉದಾಹರಿಸಿ 'ಇಂದಿನ ಅನೇಕ ಮಹಿಳಾ ಲೇಖಕಿಯರು ಪ್ರಸ್ತುತ ರಾಜಕೀಯ, ಸಮಾಜದ ವಿದ್ಯಮಾನ ಪ್ರತಿಭಟಿಸದೆ ಅಡಗೆ ಮನೆಯಲ್ಲೆ ಕುಳಿತು ಇಡ್ಲಿ ಉಪ್ಪಿಟ್ಟುಗಳೊಂದಿಗೆ ತಮ್ಮ ಸಾಹಿತ್ಯ ಬೆಳೆಸುತ್ತಿದ್ದಾರೆ'ಂದು ಕಟುವಾಗಿ ಟೀಕಿಸುತ್ತಾರೆ.

"ಅಂಬಿಗರ ಚೌಡಯ್ಯನ ವಚನ. ಅಕ್ಕಮಹಾದೇವಿ ವಚನಗಳಲ್ಲಿ ಸ್ಫೋಟಕ ಗುಣವನ್ನು ಗುರುತಿಸಬಹುದಾಗಿದೆ" ರತಿಯಿಂದ ರಕ್ಕ.....ವಿರಕ್ತಿ (ಪುಟ ೩೬) ವಚನದಲ್ಲಿ ಅಂಬಿಗರ ಚೌಡಯ್ಯ ಹೆಣ್ಣಿನ ಹಿರಿಮೆಯನ್ನು ಎತ್ತಿ ಹಿಡಿದಿರುವುದನ್ನು ಮಹತ್ವಪೂರ್ಣ ವಿಚಾರಗಳ ಮೂಲಕ ಲೇಖಕಿ ಸಮರ್ಥಿಸಿದ್ದಾರೆ.

ಆಧುನಿಕ ಸಾಹಿತ್ಯ ಪರಂಪರೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲೇ ಒಂದು ಅತ್ಯಂತ ಪ್ರಮುಖವಾದ ಘಟ್ಟ. ಅದರಲ್ಲೂ ಮಹಿಳೆಯರಿಗೆ ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ಅವಕಾಶ ಸಿಕ್ಕ ಮೇಲೆ ಮಹಿಳಾ ಸಾಹಿತ್ಯ ಕ್ಷೇತ್ರ ವಿಶಾಲವಾಗಿ ಹಬ್ಬಿದೆ. ಇತ್ತೀಚೆಗಂತೂ ಕಾವ್ಯಕ್ಷೇತ್ರದಲ್ಲಿ ಮಹಿಳೆಯರು ಮೇಲುಗೈ ಸಾಧಿಸಿ ಕಾವ್ಯದ ಮೂಲಕ ಮಹಿಳೆಯರಿಗಾದ ದೌರ್ಜನ್ಯದ ಬಗ್ಗೆ ಬಂಡೆದ್ದಿದ್ದಾರೆ. ಲೇಖಕಿ ತಿಳಿಸಿದಂತೆ ಅಮೃತಾ ಪ್ರೀತಮ್, ಮಹಾದೇವಿ ವರ್ಮಾ ಹಾಗೂ ಮಾಧವಿ ಕುಟ್ಟಿಯಂಥ ದಿಟ್ಟ ಕವಯಿತ್ರಿಯರು ನಮ್ಮ ಕನ್ನಡ ಸಾಹಿತ್ಯದಲ್ಲಿ ದೊರೆಯದೇ ಇರುವುದು ಬೇಸರದ ಸಂಗತಿಯಾಗಿದೆ

ವಿಜಯಶ್ರೀಯವರು ತಮ್ಮ ಕೊನೆ ಲೇಖನ "ಡಾ॥ ಅನುಪಮಾ ನಿರಂಜನ ಅವರ ಉತ್ತಮ ಕಾದಂಬರಿಗಳು" ಶೀರ್ಷಿಕೆಯಲ್ಲಿ ಕಾದಂಬರಿಯಲ್ಲಡಗಿರುವ ಅಂತಃಸತ್ವಗಳನ್ನು ಬಯಲಿಗೆಳೆದಿದ್ದಾರೆ. ಈ ಲೇಖನ ಅಭ್ಯಾಸಯೋಗ್ಯವಾಗಿದೆ.

ಎಸ್. ರೋಹಿಣಿ ಶರ್ಮಾ

ಭಾಷಾಂತರ - ಒಂದು ಕಲಾತ್ಮಕ ಅಭಿವ್ಯಕ್ತಿ: ಎಸ್. ಆರ್. ಭಟ್

(ನವ ಕರ್ನಾಟಕ ಪ್ರಕಾಶನ, ಬೆಂಗಳೂರು ೧೯೮೯)

ಪ್ರಪಂಚದಲ್ಲಿಯ ಪ್ರತಿಯೊಂದು ಭಾಷೆಯನ್ನು ಕಲಿಯಲು ಯಾರಿಂದಲೂ ಸಾಧ್ಯವಿಲ್ಲ. ಹಾಗೆಂದು ತನ್ನ ಭಾಷೆಯ ಹೊರತು ಉಳಿದ ಭಾಷೆಗಳ ಉತ್ತಮ ಜ್ಞಾನವನ್ನು ಪಡೆಯದೆ ಇರುವಂತೆಯೂ ಇಲ್ಲ. ಹೀಗೆ ಬೇರೆ ಭಾಷೆಗಳ ಉತ್ತಮ ಸಂಗತಿಗಳನ್ನು ತಿಳಿಯಲು ತಿಳಿಸಲು ಇರುವುದೊಂದೇ ಮಾರ್ಗವೆಂದರೆ ಭಾಷಾಂತರ.

[illegible]

[illegible] (Gama spent his last days in utter penury) [illegible] utter penury [illegible] ಸಾಧ್ಯವಿಲ್ಲ.

[illegible]

[illegible]

ಸಂಕ್ರಮಣ ೨೪

ಕಾರ್ಯಕ್ರಮಗಳು

ಶಹಾಪುರ: ೨೮ ಮೇ ೧೯೯೧

ಇಲ್ಲಿಯ ಸ್ಥಳೀಯ ಸರಕಾರಿ ಡಿಗ್ರಿ ಕಾಲೇಜಿನಲ್ಲಿ ಪ್ರೊ॥ ಬಿ. ಆರ್. ಸುರಪುರರ ಅಧ್ಯಕ್ಷತೆಯಲ್ಲಿ ಸುಂದರ ಸಾಯಂಕಾಲದ ಹಿನ್ನೆಲೆಯಲ್ಲಿ **ಸಂಕ್ರಮಣ ೨೫** ಕುರಿತು ಆಮಂತ್ರಿತ ಸಾಹಿತ್ಯಾಸಕ್ತರ ಮಧ್ಯೆ ಪುಟ್ಟ ವಿಚಾರ ಸಂಕಿರಣ ನಡೆಸಲಾಯಿತು.

ನಾಡಿನಾದ್ಯಂತ ಅಲ್ಲಲ್ಲಿ ಈ ಸಂದರ್ಭದಲ್ಲಿ ಹಲವಾರು ಕಡೆ "ಸಂಕ್ರಮಣ" ಕುರಿತು, ಚರ್ಚಿಸಲಾಗುತ್ತಿದ್ದು ಆ ನಿಟ್ಟಿನಲ್ಲಿ ಇದೊಂದು ಪುಟ್ಟ ಹೆಜ್ಜೆ ಅಷ್ಟೆ. ಚಂಪಾ ಅವರ ಬರಹಗಳಿಂದ ಸ್ಫೂರ್ತಿಗೊಂಡು ಪ್ರೀತಿಸುವವರು. ಅವರ ಹೋರಾಟವನ್ನು ಆದರ್ಶ ಮಾಗಿಟ್ಟುಕೊಂಡವರು ಮತ್ತು ಅವರಂತೆ ಹೇಳಬೇಕಾದ್ದನ್ನು ಹೇಳಬೇಕಾದ ಸಂದರ್ಭದಲ್ಲಿ ಯಾವ ಭಿಡೆಯೂ ಇಲ್ಲದೆ ನಗು ಹುಟ್ಟಿಸುತ್ತಲೇ ಹೇಳುವ ಚಂಪಾರದೇ ಆದ ಚಂಪಾ ಶೈಲಿಯನ್ನು ಮೆಚ್ಚುವವರು ನಡೆಸಿದ್ದ ಗೋಷ್ಠಿ ಇದು.

ಶಹಾಪುರದ ಜಾಗೃತ ಸಾಹಿತಿ ಗೆಳೆಯರ ಬಳಗದ ಸಂಚಾಲಕ ಸಿದ್ದರಾಮ ಹೊನಕಲ್ಲ ಹಾಗು ತಿಮ್ಮಯ್ಯ ಪುರ್ಲೆ ಉಪನ್ಯಾಸಕರು ಸಂಘಟಿಸಿದ್ದ ಈ ಕಾರ್ಯಕ್ರಮದ ಆರಂಭದಲ್ಲಿ ಚಂಪಾರನ್ನು ಕುರಿತು ಹಾಗು ಸಂಕ್ರಮಣ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದ ಸಿದ್ಧರಾಮ ಹೊನಕಲ್ಲರು ಒಬ್ಬ ಓದುಗನಾಗಿ ತಾನು ಸಂಕ್ರಮಣವನ್ನು ಪ್ರೀತಿಸಿದ್ದು, ನಂತರ ೧೯೮೨ ರಲ್ಲಿ ಸುರಪುರದ ಕಾರ್ಯಕ್ರಮಕ್ಕೆ ಅತಿಥಿಯಾಗಿ ಚಂಪಾರನ್ನು ಕರೆತರುವಾಗ ಸಾಕಷ್ಟು ಚರ್ಚಿಸಿದ ನೆನಪಿನ ಮೂಲಕ ಪ್ರಾರಂಭಿಸಿ ತುರ್ತುಪರಿಸ್ಥಿತಿ, ಗೋಕಾಕ ಚಳುವಳಿ, ಕುದರಿಮೋತಿ, ಪ್ರಕರಣ ಕಲಬುರ್ಗಿ ಪ್ರಕರಣ, ಹಾಗು ಇತ್ತೀಚಿನ ಮಂಡಲ ವರದಿ ಬಗೆಗಿನ ಹೋರಾಟಗಳಲ್ಲಿ ಸಂಕ್ರಮಣ ನೇರವಾಗಿ ಧುಮುಕಿದ್ದು ವಿವರಿಸಿದರು.

ಕವಿ ಹಾಗು ನಾಟಕಕಾರರಾಗಿ ಚಂಪಾ ಕುರಿತು ಮಾತನಾಡಿದ ಪ್ರೊ. ಸೂಗಯ್ಯ ಹಿರೇಮಠ "ಸಂಕ್ರಮಣ" ಪ್ರಾರಂಭಗೊಂಡಾಗಿನ ಗೆಳೆಯರು ಹಾಗು ನಂತರದ ಸ್ಥಿತಿಯಿಂದ ಪ್ರಾರಂಭಿಸಿ ಚಂಪಾರ 'ಗೋಕರ್ಣದ ಗೌಡಶಾನಿ' ಬಗ್ಗೆ ಚರ್ಚಿಸಿ, ಚಂಪಾರ ಕಾವ್ಯ ಕುರಿತು ಚರ್ಚಿಸುತ್ತಾ ಹಲವಾರು ಕವನಗಳನ್ನು ಉಲ್ಲೇಖಿಸಿ ಸಭೆಯಲ್ಲಿ ನಗೆಯ ಅಲೆ ಉಕ್ಕಿಸಿದರು. ನಡುವೆ, ಸಿದ್ಧರಾಮ ಹೊನಕಲ್ಲ ಇತ್ತೀಚಿನ ಚಂಪಾರ 'ದ್ರೌಪದಿಯ ಸಾಪ್ತಾಹಿಕೀ' ಕವನ ಓದಿ ನಗೆಯನ್ನು ಇನ್ನೂ ಸ್ವಲ್ಪ ಮುಂದುವರಿಸುವಂತೆ ನೋಡಿಕೊಂಡರು.

ಬಳಗದ ಇನ್ನೊಬ್ಬ ಗೆಳೆಯ ಚಂದ್ರಕಾಂತ ಕರದಳ್ಳಿ ಮಾತನಾಡಿ ಸಂಕ್ರಮಣ ಹುಟ್ಟು, ಬೆಳವಣಿಗೆ, ಪ್ರೇರಣೆ ಬಗ್ಗೆ ಮಾತನಾಡುತ್ತ "ಸಂಕ್ರಮಣ" ಈ ಇಪ್ಪತ್ತೈದು ವರ್ಷದ ಕನ್ನಡ ಸಾಹಿತ್ಯದ ಚಲನಶೀಲತೆಯ ದಾಖಲೆಯಾಗಿ ಉಳಿದಿದೆ ಎಂದರು.

ನಂತರದ ಸಂವಾದದಲ್ಲಿ ಪ್ರೊ. ಡಿ. ಜಿ. ಬಳೂರಗಿ, ತಿಮ್ಮಯ್ಯ ಪುರ್ಲೆ, ರಂಗರಾಜ, ಶಿವಣ್ಣ ಇಜೇರಿ, ದಾವಲ ಮಲಿಕ ಮುಂತಾದವರು ಪಾಲುಗೊಂಡರು. ಅಧ್ಯಕ್ಷತೆ ವಹಿಸಿದ್ದ ಪ್ರೊ. ಜಿ. ಆರ್. ಸುಂದಪ್ಪರ ತಮ್ಮ ಧಾರವಾಡದ ಓದಿನ ದಿನಗಳಿಂದ ಇಂದಿನವರೆಗಿನ ಚಂಪಾ ಸುರುಳಿ ಬಿಚ್ಚಿದರು. ಆರ್ಥಿಕ ಸಂಕಷ್ಟಗಳಿಂದ ಚಂಪಾರನ್ನು ಆಹ್ವಾನಿಸದೆ "ಚಂಪಾ" ಕುರಿತು ನಡೆಸಿದ ಸಂವಾದವಿದಾದರೂ ಸಹ ಸಂಕ್ರಮಣಕ್ಕೆ ೫೦. ರೂ. ಕಳಿಸಿ ಒಂದಿಷ್ಟು ಜನ ಹೊಸ ಚಂದಾದಾರರಾದರೆ ಚಂಪಾ ತಮ್ಮನ್ನು ಕರೆಸಿಕೊಳ್ಳದೇ ಈ ಕಾರ್ಯಕ್ರಮ ನಡೆಸಿದ ನಮ್ಮನ್ನು ಕ್ಷಮಿಸಬಹುದು; ಅಥವಾ ಅದಕ್ಕಿಂತ ಹೆಚ್ಚು ಸಂತೋಷಗೊಳ್ಳಬಹುದು ಎಂದು ಚಟಾಕಿ ಹಾರಿಸಿದ ಸಂಘಟಕರು ಚಂಪಾ ಇಲ್ಲದ ಈ ಸಂಕಿರಣ ಅಪೂರ್ಣವೆಂದು ಒಪ್ಪಿಕೊಂಡು ಕಾರ್ಯಕ್ರಮ ಮುಕ್ತಾಯಗೊಳಿಸಿದರು.

ಶಶಿ ಸಗರ

ಹಾವೇರಿ: ೨ ಜೂನ ೧೯೯೧

ಈ ಬೇಸಿಗೆಯ ಕೊನೆಯಂಚಿನಲ್ಲಿ ವರ್ಷದ ಹೊಸ ಹನಿಗಳು ನೆಲಕ್ಕೆ ಬೀಳುವ ಹೊತ್ತಿನಲ್ಲಿ ಹಾವೇರಿ ತಾಲೂಕ ಬಂಡಾಯ ಸಾಹಿತ್ಯ ಸಂಘಟನೆ "ಸಂಕ್ರಮಣ-೨೫" ವಿಚಾರ ಸಂಕಿರಣವನ್ನು ೨-೬-೧೯೯೧ ರಂದು ಸಂಘಟಿಸಿತ್ತು.

ಪ್ರವಾಹದಲ್ಲಿ ಹರಿದು ಹೋಗದೆ, ಪ್ರವಾಹದ ವಿರುದ್ಧ ಕಾಲು ಶತಕದಷ್ಟು ಕಾಲ ಈಜುತ್ತಲೇ ಬಂದ ಸಂಕ್ರಮಣ ಪತ್ರಿಕೆ ಆಯಾ ಕಾಲ ಘಟ್ಟಗಳಿಗೆ ತನ್ನನ್ನು ತಾನು ತೆರೆದಿಟ್ಟ ಅದ್ಭುತ ಬಗೆಯನ್ನು ವಿವರವಾಗಿ ತಿಳಿಸಿದ ಯುವ ಲೇಖಕ ಸಿದ್ಧನಗೌಡ ಪಾಟೀಲರು ಸಂಕ್ರಮಣದ ನಿರ್ಣಾಯಕ ತಿರುವುಗಳನ್ನು ಮೆಲುಕು ಹಾಕಿದರು.

ಸಂಕ್ರಮಣದ ಚಂಪಾ ಲೋಹಿಯಾವಾದಿಯಾಗಿದ್ದರೂ ಪತ್ರಿಕೆಯಲ್ಲಿ ಭಿನ್ನಮತಗಳಿಗೆ ಮುಕ್ತ ವೇದಿಕೆ ಕಲ್ಪಿಸಿ ಕೊಡುತ್ತಿರುವುದು ಅವರ ವೈಶಿಷ್ಟ್ಯವೆಂದ ಸಿದ್ದನಗೌಡ, "ಸಂಕ್ರಮಣ ಒಂದು ರೀತಿಯಲ್ಲಿ ಕಮ್ಯುನಿಸ್ಟ್ ವಿರೋಧಿ ಎಂಬ ಗುಮಾನಿ ಇದೆ. ಕಮ್ಯುನಿಸ್ಟರನ್ನು ವಿಶ್ವಾಸದಲ್ಲಿ ತೆಗೆದುಕೊಂಡು ಪತ್ರಿಕೆ ತನ್ನ ವಿಸ್ತಾರಗಳನ್ನು ಹೆಚ್ಚಿಸಿ ಕೊಳ್ಳಲಿ" ಎಂದು ಹಾರೈಸಿದರು.

ಯುವ ಕವಿ ವಿಜಯ ಪಾಟೀಲ ತನ್ನ ಅಣ್ಣ ಚಂಪಾರಿಗೆ ಒಂದು ಕವನ ಕಾಣಿಕೆ ಅರ್ಪಿಸಿದರು.

"ನನ್ನ ಹೊಸ ಹರೆಯದ ಕನಸುಗಳ ಆಗರ ಈ ಊರು"— ಎಂದು ಹಾವೇರಿಯೊಂದಿಗಿನ ತಮ್ಮ ನಂಟಿನ ಎಳೆಗಳನ್ನು ಆತ್ಮೀಯವಾಗಿ ನೆನೆದ ಚಂಪಾ, "ನನ್ನ ಬದುಕಿನಂತೆ ಸಂಕ್ರಮಣ ಕೂಡಾ ಸದಾ ಚಲನಶೀಲವಾದ ಹೊಳೆಯಂತಿದೆ." ಎಂದರು. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಗಿರಡ್ಡಿಯವರ ಸಹಯೋಗದೊಂದಿಗೆ ಪ್ರಾರಂಭವಾದ ಸಂಕ್ರಮಣ ಬರಬರುತ್ತ ವಿಶಾಲವಾದ, ಆಳವಾದ ನೆಲೆಗಳನ್ನು ಕಂಡುಕೊಂಡ ಪರಿಯನ್ನು ಅವರು ವಿವರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ಡಾ. ಶರೇಶ್ಚಂದ್ರ ಚುಳ್ಕಿಮಠ ಅವರು, "ಹಿಂದಿ ಸಾಹಿತ್ಯದಲ್ಲಿ ಕೂಡ ಈ ಬಗೆಯ ಪತ್ರಿಕೆ ಇಲ್ಲ" ಎಂದರು: "ಹೊಸ ಗಿಡಗಳನ್ನು ನೆಡುವ ಕೆಲಸ ಸಂಕ್ರಮಣ ಮಾಡಿದೆ. ಹಾಗೆಯೇ ಅಡ್ಡಾದಿಡ್ಡಿ ಬೆಳೆದ ಗಿಡದ ಕೊಂಬೆ ಕತ್ತರಿಸುವ ಕೆಲಸವನ್ನೂ ಮಾಡಿದೆ."

ಇದೇ ಸಂದರ್ಭದಲ್ಲಿ ಹಾವೇರಿಯ ಬಂಡಾಯ ಗೆಳೆಯರಾದ ಕೋರಗಲ್ ವಿರೂಪಾಕ್ಷಪ್ಪ, ಬಸವರಾಜ ಕುಂಬಾರ, ಚನ್ನವೀರೇಶ ಗುತ್ತಲ ಮತ್ತು ಜಿ. ಎನ್. ಕರಬಸನಗೌಡ ಇವರ ಕತೆಗಳ ಸಂಗ್ರಹವಾದ "ಬದುಕಿನ ಚಿತ್ರಗಳು" ಎಂಬ ಕೃತಿ ಬಿಡುಗಡೆಯಾಯಿತು. ಕೊನೆಯಲ್ಲಿ ಪೃಥ್ವಿರಾಜ ಬೆಟಗೇರಿ ವಂದಿಸಿದರು,

ಸತೀಶ ಕುಲಕರ್ಣಿ

ರಾಯಚೂರು: ೧೨ ಜೂನ ೧೯೯೧

"ಸಂಕ್ರಮಣ ಪತ್ರಿಕೆಯು ಈ ನಾಡಿನಲ್ಲಿರುವ ಹಲವು ಪ್ರತಿಭಾವಂತರನ್ನು ಬೆಳಕಿಗೆ ತಂದಿದೆ. ಕೆಲವರ ತೋಳಿಗೆ ಬಲ ಕೊಟ್ಟಿದೆ. ತಾನು ರೂಪಿಸಿಕೊಂಡ ಸಿದ್ಧಾಂತದ ಬೆಳವಣಿಗೆಯಲ್ಲಿ ಅದು ಪ್ರಾಮಾಣಿಕವಾಗಿ ದುಡಿದಿದೆ. ಕೇವಲ ಸಾಹಿತ್ಯ ಅಷ್ಟೇ ಅಲ್ಲ, ಜನಪರ ಚಳುವಳಿಗಳನ್ನು ಹುಟ್ಟುಹಾಕಿ ವೈಚಾರಿಕ ಸಂಘರ್ಷದ ಮೂಲಕ ಪ್ರಗತಿಗೆ ದಾರಿ ಮಾಡಿಕೊಟ್ಟು ಸಾಮಾಜಿಕ ನ್ಯಾಯ ಕಾಪಾಡಿಕೊಂಡು ಬಂದಿದೆ. ಈ ನಾಡಿನಲ್ಲಿ ಇನ್ನೂ ಕೆಲವು ಸಾಹಿತ್ಯಿಕ ಪತ್ರಿಕೆಗಳಿರಬಹುದು. ಕೆಲವು ನಿಂತು ಹೋಗಿವೆ, ಬದುಕಿದ್ದರೂ ಸತ್ತಂತೆ ಕೆಲವಿವೆ. ಇವೆಲ್ಲವೂ ಏಕಮುಖ ಅಭಿಪ್ರಾಯಗಳನ್ನು ತುಂಬಿ

ಕೊಂಡ ಜಿಡ್ಡುಗಟ್ಟಿ ಹೋಗಿವೆ ಸಂಕ್ರಮಣ ಹಾಗಲ್ಲ. ಮುಕ್ತ ಚರ್ಚೆಗೆ ಅವಕಾಶ ಕಲ್ಪಿಸಿಕೊಡುವುದರ ಮೂಲಕ ತನ್ನ ಹೆಜ್ಜೆ ಗುರುತಿಸಿಕೊಂಡಿದೆ. ಇದರಿಂದ ನಾಡಿನ ತುಂಬ ಚಂಪಾ ಅವರು ಆತ್ಮೀಯರನ್ನು ಗಳಿಸಿಕೊಂಡಂತೆ ಶತ್ರುಗಳನ್ನೂ ಗಳಿಸಿಕೊಂಡಿದ್ದಾರೆ. ಚಂಪಾ ಕೆಲವರಿಗೆ ಶತ್ರುವಿನಂತೆ ಕಂಡಿರಬೇಕು. ಆದರೆ ಚಂಪಾಗೆ ಮಾತ್ರ ಯಾರೂ ಶತ್ರುಗಳೇ ಇಲ್ಲ ಎಂಬುವಷ್ಟು ಆರೋಗ್ಯಕರ ವಾತಾವರಣದಲ್ಲಿದ್ದಾರೆ. 'ಸಂಕ್ರಮಣ' ಬೆಳ್ಳಿಹಬ್ಬದ ಈ ಸಂದರ್ಭದಲ್ಲಿ ಅದನ್ನು ಮುನ್ನಡೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. 'ಸಂಕ್ರಮಣ' ನಿಂತರೆ ನಮ್ಮ 'ದನಿ' ನಾವೇ ಕಳೆದುಕೊಂಡಂತೆ...." ಹೀಗೆ ಅಮರೇಶ ನುಗಡೋಣಿ ಮಾತಾಡುತ್ತಿದ್ದರು. ರಾಯಚೂರಿನಲ್ಲಿ ಸಿರಿವಾರ ಉಮಾಪತಿ ಚುಕ್ಕಿ ಪ್ರತಿಷ್ಠಾನದ ಆಶ್ರಯದಲ್ಲಿ ಸಂಕ್ರಮಣ ಬೆಳ್ಳಿಹಬ್ಬದ ಸಮಾರಂಭ ಆತ್ಮೀಯರ ಸಮ್ಮುಖದಲ್ಲಿ ನಡೆಯುತ್ತಿತ್ತು.

ಪ್ರಾಸ್ತಾವಿಕ ಭಾಷಣ ಮಾಡಿದ ನಾಡಿನ ಖ್ಯಾತ ಸಾಹಿತಿ ಶಾಂತರಸರು, "ಸಂಕ್ರಮಣ ಪತ್ರಿಕೆ ಈಗ ಬೆಳ್ಳಿಹಬ್ಬಕ್ಕೆ ಬಂದು ನಾಡಿನ ತುಂಬ ಉತ್ಸಾಹದ, ಸಂತೋಷ ವಾತಾವರಣ ಮೂಡಿಸುತ್ತಿದೆ. ಇದರಿಂದ ನಮಗೆಲ್ಲ ಮತ್ತಷ್ಟು ಬಲ ಬಂದಂತಾಗಿದೆ. ಇಷ್ಟು ದೀರ್ಘಕಾಲ ಯಾವ ಸಾಹಿತ್ಯಿಕ ಪತ್ರಿಕೆಯೂ ಉಳಿದಿಲ್ಲ ಎಂಬುದು ಮುಖ್ಯವಲ್ಲ, ಹೆಮ್ಮೆಯೂ ಅಲ್ಲ. ಸಂಕ್ರಮಣ ಈ ೨೫ ವರ್ಷ ಹೇಗೆ ನಡೆದು ಕೊಂಡು ಬಂದಿದೆ ಎಂದು ನೆನೆಸಿಕೊಂಡರೆ ನಮ್ಮ ನರನಾಡಿಗೆ ಮತ್ತಷ್ಟು ಚೈತನ್ಯ ಬರುತ್ತದೆ. ಸಂಕ್ರಮಣ ಮತ್ತು ಚಂಪಾ ಈ ನಾಡಿನ ವೈಚಾರಿಕ ಲೋಕವನ್ನು ಇನ್ನಷ್ಟು ವಿಸ್ತಾರಗೊಳಿಸಲಿ ಎಂದು ಆಶಿಸುತ್ತೇನೆ" ಎಂದರು.

ಅತಿಥಿಗಳಾಗಿ ಆಗಮಿಸಿದ್ದ ಚಂಪಾ ಒಮ್ಮೆ ನಗಿಸುತ್ತ ಆ ನಗೆಯಲ್ಲಿಯೇ ನಮ್ಮನ್ನು ನಾವು ನೋಡಿಕೊಳ್ಳುವ ಹಾಗೆ ಮಾಡುತ್ತ, ಸಂಕ್ರಮಣ ನಡೆದ ದಾರಿಯ ಹೆಜ್ಜೆಗಳ ದನಿಯನ್ನು ಕೇಳಿಸುತ್ತ, "ಸಂಕ್ರಮಣ ನಿಮ್ಮೆಲ್ಲರ ಸಹಕಾರದಿಂದ ನಡದೈತಿ. ಪ್ರತಿವರ್ಷ ೧೫೦೦ ಚಂದಾದಾರರಿರುತ್ತಾರೆ. ಇದರಲ್ಲಿ ೪೦೦ ಜನ ಉದ್ರಿ ಚಂದಾದಾರರಾಗಿಯೇ ಉಳಕಂಡ ಬಿಡ್ತಾರ. ಆದರೂ ಇವುರಿಗೆ ಪತ್ರಿಕೆ ಬೇಕು ಎಂಬುದು ಮಾತ್ರ ಖರೆ. ಇವುರೆಲ್ಲ ಒಂದು ದಿನ 'ನಮ್ಮ ಚಂದಾ ಮನ್ನಾ ಮಾಡ್ರಿ' ಅಂತ ಚಳುವಳಿ ಹೂಡ್ತಾರೋ ಏನೋ...." ಎಂದಾಗ ನೆರೆದವರೆಲ್ಲ ನಗೆಯಲ್ಲಿ ಮುಳುಗಿ ಹೋದರು.

೭೦ ರ ದಶಕದಲ್ಲಿ ಪ್ರೊ॥ ಎಂ. ಡಿ. ನಂಜುಂಡಸ್ವಾಮಿಯವರು ಲೋಹಿಯಾ ವಾದದ ಮೂಲಕ ವಿಚಾರವಂತರನ್ನು ಒಂದುಗೂಡಿಸಿ ಹೊಸ ದಿಕ್ಕಿನ ಕಡೆ ನಾಡನ್ನು ತಿರುಗಿಸುವ ಪ್ರಯತ್ನ ಮಾಡಿದರು. ತೇಜಸ್ವಿ, ಲಂಕೇಶ ಮುಂತಾದವರು ಇದರಲ್ಲಿ

ಪಾಲ್ಗೊಂಡಿದ್ದರು. ಅಲ್ಲಿಂದ ಮುಂದೆ ಹಲವರು ಹಲವು ದಿಕ್ಕಿನ ಕಡೆ ನಡೆದರು. ಲೋಹಿಯಾ, ಅಂಬೇಡ್ಕರ; ಗಾಂಧಿ, ಪೆರಿಯಾರ ಮುಂತಾದವರ ಸಿದ್ಧಾಂತಗಳು ಪ್ರಚಾರಕ್ಕೆ ಬಂದವು. ಹಲವು ವಾದ-ವಿವಾದಗಳು ನಮ್ಮಲ್ಲಿ ಸುರುವಾದವು. ಆ ಎಲ್ಲ ವಾದಗಳು ಸೈದ್ಧಾಂತಿಕ ಭಿನ್ನಾಭಿಪ್ರಾಯಗಳೇ ಆಗಿದ್ದವು. ಈಗಲೂ ಈ ವಾದ-ವಿವಾದಗಳು ಎಲ್ಲರಲ್ಲಿ ಇದ್ದರೂ ಎಲ್ಲರಲ್ಲಿ ಆರೋಗ್ಯಕರವಾದ ಚಿಂತನೆ ಇರಲಿ" ಎಂದು ಚಂಪಾ ತಮ್ಮ ಭಾಷಣದಲ್ಲಿ ಹೇಳಿದರು. ಮುಂದುವರೆಸಿ, "ನನ್ನ ಬಗ್ಗೆ, ಸಂಕ್ರಮಣದ ಬಗ್ಗೆ ಆಗದವರು ಶಂಖ ಉದುತಾರ. ಎಲ್ಲಿ ತನಕ ಊದುತಾರ ಅಂದ್ರ ಶಂಖ ಕೈಯಾಗ ಇರತನಕ ಅಲ್ಲ, ಉಸಿರಿನ್ಯಾಗ ದಮ್ಮು ಇರತನಕ ಊದುತಾರ. ಆ ವಖ್ಯಾಲ ಸೋತು ಕುಂದ್ರುತಾರ. ಆದ್ರೆ ಸಂಕ್ರಮಣ ಪತ್ರಿಕೆ ನಾಡಿನ ಜನಪರ ದನಿಗೆ ದನಿಯಾಗಿ ನಿಂತಿರುವುದು ಮುಖ್ಯ. ಇದು ಹೀಂಗ ನಡ ಕೊಂಡು ಹೋಗತೈತಿ ಅಂಬೋದೂ ಗ್ಯಾರಂಟಿ" ಎಂದರು.

ಇದೇ ಸಂದರ್ಭದಲ್ಲಿ ಸಿರಿವಾರ ಉಮಾಪತಿ ಚುಕ್ಕಿ ಪ್ರತಿಷ್ಠಾನದ ವತಿಯಿಂದ ಚಂಪಾಗೆ ಸನ್ಮಾನಿಸಲಾಯಿತು. ರಾಯಚೂರಿನ ಕಲಾವಿದ ಎಂ. ಕೃಷ್ಣ ಚಂಪಾರಿಗೆ ಸ್ವತಃ ತಮ್ಮ ಒಂದು ಕಲಾ ಕೃತಿಯನ್ನು ಗೌರವಾರ್ಥವಾಗಿ ನೀಡಿದರು. ಈ ಸಮಾರಂಭ ಸಾಕ್ಷಿ ಬೆಂಗಳೂರಿನ 'ಪ್ರಜಾವಾಣಿ' ಉಪ ಸಂಪಾದಕ, ಪರಿಸರ ತಜ್ಞರಾದ ನಾಗೇಶ ಹೆಗಡೆ ಉಪಸ್ಥಿತರಿದ್ದರು. ಇಡೀ ಪ್ರಪಂಚವನ್ನೇ ತಲ್ಲಣಗೊಳಿಸುತ್ತಿರುವ ಪರಿಸರ ಮಾಲಿನ್ಯದ ಬಗ್ಗೆ ತಮ್ಮದೇ ಆದ ತಿಳಿಯಾದ, ಹಾಸ್ಯಮಯವಾದ ಶೈಲಿಯಲ್ಲಿ ಸ್ಲೈಡುಗಳ ಮುಖಾಂತರ ಸಮಸ್ಯೆಯ ದುರಂತವನ್ನು ವಿವರಿಸಿದರು ನಾಗೇಶ ಹೆಗಡೆ.

ಈ ಬೆಳ್ಳಿಹಬ್ಬದ ಕಾರ್ಯಕ್ರಮವನ್ನು ಕವಿ ಎಸ್. ಜಿ. ಸ್ವಾಮಿ ಸಮರ್ಥವಾಗಿ ನಡೆಸಿ ಕೊಟ್ಟರು.

ಅಮರೇಶ ನುಗಡೋಣಿ

ಈ ಸಂಚಿಕೆಯ ಲೇಖಕರು

ಸರಜೂ ಕಾಟಕರ ಕಾವ್ಯ, ಎಂ. ಐ. ಜಿ. ೨೧೫, ಮಹಾಂತೇಶ ನಗರ, ಬೆಳಗಾವಿ ೧೦.

ಬಸ್ಸ’ ಪಾಟೀಲ (ಬಿ. ಬಿ. ಪಾಟೀಲ) ಕನ್ನಡ ರೀಡರ್, ಸಹ್ಯಾದ್ರಿ ಕಾಲೇಜು, ಶಿವಮೊಗ್ಗೆ

ಅರವಿಂದ ನಾಡಕರ್ಣಿ ಕೇತಾಯುನ್, ಶಹಾಜಿ ರಾಜೆ ಮಾರ್ಗ, ವಿಲೆ ಪಾರ್ಲೆ (ಪಶ್ಚಿಮ), ಮುಂಬೈ ೫೭.

ಶಂಕರ ಕಟಗಿ ಇಂಗ್ಲಿಷ್ ಪ್ರಧ್ಯಾಪಕ, ಸ. ಜ್ಯೂ. ಕಾಲೇಜು, ಗುಡಗೇರಿ (ಧಾರವಾಡ).

ಚಂದ್ರಶೇಖರ ತಾಳ್ಯ ಪ್ರಧ್ಯಾಪಕ, ಕೆ.ಎನ್. ಜ್ಯೂ. ಕಾಲೇಜ ಹೊಳಲಕೆರೆ (ಚಿತ್ರದುರ್ಗ)

ಶಿವರಾಮು ಕಾಡನಕುಪ್ಪೆ ಕನ್ನಡ ವಿಭಾಗ ಮುಖ್ಯಸ್ಥ, ವಿದ್ಯಾವರ್ಧಕ ಕಾಲೇಜು, ಮೈಸೂರು ೨೧.

ನಂದೀಶ್ವರ ದ್ವಿತೀಯ ಬಿ. ಎ. (ಕೆ. ಎಸ್. ಪಿ.), ರೂ. ನಂ, ೪೦, ಸರಕಾರಿ ವಿದ್ಯಾರ್ಥಿ ನಿಲಯ, ತುಮಕೂರು.

ರಂಜಾನ್ ದರ್ಗಾ ಪ್ರಜಾವಾಣಿ ವರದಿಗಾರರು, ಕಾರವಾರ (ಉ. ಕ.)

ಈ. ಚಂದ್ರ ತಾಳೀಕಟ್ಟೆ ತಾಳೀಕಟ್ಟೆ (ಚಿತ್ರದುರ್ಗ)

ಮಹಾಬಲೇಶ್ವರರಾವ ಪ್ರಧ್ಯಾಪಕ, ಟಿ ಎಂ ಎ ಪೈ ಶಿಕ್ಷಣ ಕಾಲೇಜು, ಉಡುಪಿ (ದ. ಕ.)

ಆರ್. ಸುವರ್ಣ ಕಾಡನಕುಪ್ಪೆ C/o ಶಿವರಾಮು ಕಾಡನಕುಪ್ಪೆ, ಮೈಸೂರು ೨೧

ಸಾರಾ ಅಬೂಬಕ್ಕರ ಮಾರ್ಟಿನ್ ಪಾಮುಸ ರಸ್ತೆ, ಲಾಲಬಾಗ, ಮಂಗಳೂರು ೬. (ದ. ಕ.)

ರಾಜ್ಯ ಮಟ್ಟದ ಕಥಾ ಸ್ಪರ್ಧೆ

ಮಾಸ್ತಿ ಜನ್ಮ ಶತಮಾನೋತ್ಸವದ ಅಂಗವಾಗಿ **ಬೆಳಕಿಂಡಿ** ಮಾಸಪತ್ರಿಕೆಯು ಆಕರ್ಷಕ ಬಹುಮಾನಗಳುಳ್ಳ ಸಣ್ಣ ಕಥೆಗಳ ಕಥಾಸ್ಪರ್ಧೆಯನ್ನು ಏರ್ಪಡಿಸಿದೆ.

ವಿವರಗಳಿಗಾಗಿ : **ಸಂಪಾದಕ, ಬೆಳಕಿಂಡಿ, ಶಿರಾಲಿ (ದ. ಕ) ೫೮೧ ೩೫೪**

ಬೆಳ್ಳಿ ಹಬ್ಬದ ವರ್ಷದ ನೆನಪಿನ ಕೊಡುಗೆ

ಮೂರು ಸಂಪುಟಗಳಲ್ಲಿ

ಸಂಕ್ರಮಣ ಸಾಹಿತ್ಯ

ಮೂರೂ ಸಂಪುಟಗಳಿಗಾಗಿ ಪ್ರಕಟನಾಪೂರ್ವ ಬೆಲೆ: ರೂ. ೧೦೦.

(ಈ ವರ್ಷಾಂತ್ಯದೊಳಗಾಗಿ ಪ್ರಥಮ ಸಂಪುಟ ಬರಲಿದೆ.)

ಕಂಪ್ಯೂಟರ ಮುದ್ರಣದಲ್ಲಿ ಅಂದವಾಗಿ ಅಚ್ಚಾದ

ಕನ್ನಡ ಲೇಖಕರ ವಿಳಾಸಗಳು

(ದ್ವಿತೀಯ ಪರಿಷ್ಕೃತ ಆವೃತ್ತಿ)

ಸಂಕಲನ : ನೀಲಾ ಪಾಟೀಲ

ಬೆಲೆ ರೂ. ೩೬ (ರಜಿಸ್ಟರ್ಡ್ ಅಂಚೆ ವೆಚ್ಚ: ೯ ರೂ.)

ಅಂಚೆ ಮೂಲಕ ಸೃಜನ ಸಾಹಿತ್ಯ ತರಬೇತಿ

ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಲ್ಲಿ ಆಸಕ್ತಿ ಇರುವ ಲೇಖಕರಿಗೆ ಬರವಣಿಗೆಯ ಶೈಲಿಯ ಬಗ್ಗೆ ಅಂಚೆ ಮೂಲಕ ತರಬೇತಿ ನೀಡುವ ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಧಾರವಾಡದ ಸಂಕ್ರಮಣ ಪ್ರಕಾಶನ ಹಮ್ಮಿಕೊಂಡಿದೆ.

ಮುಖ್ಯವಾಗಿ ಹೊಸ ಲೇಖಕರಿಗಾಗಿ ಸಿದ್ಧಪಡಿಸಲಾದ ಈ ಯೋಜನೆಯ ವಿವರಗಳಿಗಾಗಿ "ಸಂಕ್ರಮಣ ಪ್ರಕಾಶನ, ಧಾರವಾಡ-೫೮೦ ೦೦೮" ಈ ವಿಳಾಸಕ್ಕೆ ಸ್ವ-ವಿಳಾಸದ ಅಂಚೆ ಪಾಕೀಟನ್ನು ಕಳಿಸಬೇಕೆಂದು ಕೋರಿಕೆ.

ಸಂಕ್ರಮಣ ಪ್ರಕಾಶನ ಧಾರವಾಡ ೫೮೦ ೦೦೮